# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ಜನವರಿ 2015 ಸಂಪುಟ: 56
January 2015 Volume: 56
ಸಂಚಿಕೆ : 02
Issue : 02


## ಈ ಸಂಚಿಕೆಯೊಳಗೆ


5. ಸಚಿವಾಲಯದಿಂದ ಸಂದೇಶ

7. ಮುಖಪುಟ ವರದಿ –

9. ಪರಿಚಯ – ಬಸವರಾಜ್

10. ವರದಿ –

14. ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ – ಮಂಜುನಾಥ್ ಗಣಿ

18. ಲೇಖನ – ಡಾ॥ ರೇವಯ್ಯ ಒಡೆಯರ್
– ಸಂತೋಷ ಕುಮಾರ. ಹೆಚ್.
– ಪ್ರೊ: ಎ.ಎಚ್. ಮಾಸಾಪತಿ

32. ಕಾವ್ಯ ವಿಕಾಸ – ಕೊಟ್ರೇಶ್ ಎಸ್. ಉಪ್ಪಾರ್

33. ಯಶೋಗಾಥೆ – ಕೇಶವಮೂರ್ತಿ
– ರೋಹಿತ್ ಎ.ಆರ್.

43. ಕವಿಯ(ಕ್ಷ) ಪ್ರಶ್ನ – ಡಾ.ಅರವಿಂದ ಚಂದ್ರಕಾಂತ ಶ್ಯಾನಭಾಗ

44. ಪಂಚತಂತ್ರ ವರದಿ

45. ಸಕಾಲ ವರದಿ

46. ಸುತ್ತೋಲೆಗಳು





ಪ್ರಕಾಶಕರು
**ಕೆ. ಯಾಲಕ್ಕಿ ಗೌಡ**
ನಿರ್ದೇಶಕರು (ಪಂ.ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಜಂಟಿ ಕಾರ್ಯದರ್ಶಿ

ಪ್ರಧಾನ ಸಂಪಾದಕರು
**ಬೂವನಹಳ್ಳಿ ನಾಗರಾಜ್**
ನಿರ್ದೇಶಕರು, ಸುವರ್ಣ ಗ್ರಾಮೋದಯ
ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿ

ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿ
**ವೈ. ಮಹಾಂಕಾಳಪ್ಪ**

ಸಹಾಯಕ ಸಂಪಾದಕರು
**ಡಾ. ಎಂ.ಎಸ್. ಮಂಜುನಾಥ**
**ನಾಗರಾಜ್. ಬಿ. ವಾಗಾ**

ವ್ಯವಸ್ಥಾಪಕರು
**ಹೆಚ್.ಬಿ. ಗುರುಸ್ವಾಮಿ**




**ವಾರ್ಷಿಕ ಚಂದಾ**
ವ್ಯಕ್ತಿಗಳಿಗೆ ರೂ. 100/–
ಸಂಸ್ಥೆಗಳಿಗೆ ರೂ 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ
ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್ ಕೋಡ್‌ನೊಂದಿಗೆ
ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು

**ಕಛೇರಿ ವಿಳಾಸ**
ಸಂಪಾದಕರು, ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ1
ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ
ಬೆಂಗಳೂರು – 560 001.
ದೂರವಾಣಿ : 080–22353857
www.rdpr.kar.nic.in
email : kvrdpr@gmail.com


**ವಿಶೇಷ ಸೂಚನೆ**
ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ
ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು
ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ
ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.







**ಮಾನ್ಯರೆ,**

ಡಿಸೆಂಬರ್ 2014ರ ಕರ್ನಾಟಕ ವಿಕಾಸ ಗುಲಾಬಿ ವರ್ಣದ ಮುಖಪುಟ ತುಂಬಾ ಮನಮೋಹಕವಾಗಿತ್ತು ಹಾಗೂ ಮುಖಪುಟ ವರದಿ, ಚಿಂತನೆ, ಯಶೋಗಾಥೆ, ಹಲವಾರು ಲೇಖನಗಳು ಓದುಗರಿಗೆ ಮನಮುಟ್ಟುವಂತಿತ್ತು. ಕಾವ್ಯ ವಿಕಾಸದಲ್ಲಿ 'ಹಳ್ಳಿಗಳ ಅಭಿವೃದ್ಧಿ' ಕವನ ಗ್ರಾಮೀಣ ಜನರಿಗೆ ಬಹಳ ಉಪಯುಕ್ತವಾಗಿತ್ತು. ಪತ್ರಿಕೆಯೊಳಗಿನ ಬಣ್ಣ ಬಣ್ಣದ ಚಿತ್ರಗಳು ನೋಡುಗರ ಮನಸೆಳೆಯುವಂತಿತ್ತು. ಪತ್ರಿಕೆಯ ಸಂಪಾದಕ ಮಂಡಳಿಗೆ ಧನ್ಯವಾದಗಳು.

**ಶ್ರೀ ಮಹಾಂತಯ್ಯ ಕೆ.ಮಠ,**
ಶಿಕ್ಷಕರು, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ,
ಬಂದರವಾಡ, ಅಫಜಲಪುರ, ಕಲಬುರ್ಗಿ 585265.

ಡಿಸೆಂಬರ್ 2014ರ ಕರ್ನಾಟಕ ವಿಕಾಸವು ಸಮಯಕ್ಕೆ ಸರಿಯಾಗಿ ಸರ್ಕಾರಿ ಕಚೇರಿಗೆ ಮತ್ತು ಸಾರ್ವಜನಿಕ ಓದುಗರಿಗೆ ತಲುಪುತ್ತಿದೆ ಹಾಗೂ ಶ್ರೀ ಹೇಮಾ ಪ್ರಸನ್ನರ 'ರಾಜ್ಯವನ್ನು ಬಹಿರ್ದೆಸೆ ಮುಕ್ತವನ್ನಾಗಿಸಲು ಮಾಧ್ಯಮಗಳ ಪಾತ್ರ' ತುಂಬಾ ಅರ್ಥಗರ್ಭಿತವಾಗಿ ಮೂಡಿದ್ದು, ಸಂಗೀತಾರವರ "ಶೌಚಾಲಯಕ್ಕೆ ತಾಳಿ ಮಾರಾಟ" ಪ್ರತಿಯೊಬ್ಬ ವ್ಯಕ್ತಿಯ ಮನ ಕಲಕಿದೆ. ಡಿಸೆಂಬರ್ 23ನೇ ದಿನ ರೈತನ ದಿನಾಚರಣೆಯನ್ನು ನೆನಪಿಸಿ ಕೋಟಿ ವಿದ್ಯೆಗೆ ಮೇಟಿ ವಿದ್ಯೆ ಮೇಲು ಎಂಬ ಸರ್ವಜ್ಞನ ವಚನದಂತೆ ರೈತರ ಉದ್ಧಾರ ಮತ್ತು ಗ್ರಾಮ ದೇಶಗಳ ಅಭಿವೃದ್ಧಿ ಕೂಡ ಸಾಗಬೇಕಾಗಿದೆ.

**ಅಣ್ಣೂರು ಎ.ಎಂ.ಅಪ್ಪಾಜಿ,**
ಕನ್ನಡ ಸಾಹಿತ್ಯ ಪರಿಷತ್ ಸದಸ್ಯರು,
ಗ್ರಂಥಪಾಲಕರು, ಅಣ್ಣೂರು ಗ್ರಾಮ ಪಂಚಾಯತಿ,
ಮದ್ದೂರು ತಾ, ಮಂಡ್ಯ 571422.

ಗ್ರಾಮೀಣ ಜನರ ಅಭಿವೃದ್ಧಿಗೆ ಸಾಕ್ಷಿಯಾಗಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಉತ್ತಮವಾಗಿ ಮೂಡಿಬರುತ್ತಿದ್ದು ಗ್ರಾಮೀಣ ಓದುಗರಿಗೆ ಒಂದು ಒಳ್ಳೆಯ ಮಾರ್ಗದರ್ಶಿ ಪುಸ್ತಕವಾಗಿದೆ. ಕರ್ನಾಟಕ ವಿಕಾಸದಲ್ಲಿ ಪ್ರಕಟವಾಗುವ ಲೇಖನಗಳು, ಯಶೋಗಾಥೆ, ಚಿಂತನೆ, ಸರ್ಕಾರದ ನಡವಳಿಗಳು, ಸುತ್ತೋಗಳು ಸೇರಿದಂತೆ ಹಲವಾರು ವಿಷಯಗಳನ್ನು ಗ್ರಾಮೀಣ ಜನರಿಗೆ ಮುಟ್ಟಿಸುವಲ್ಲಿ ಯಶಸ್ವಿಯಾಗಿದೆ. ಹೀಗೆ ಪತ್ರಿಕೆಯು ಉತ್ತಮ ರೀತಿಯಲ್ಲಿ ಮೂಡಿಬರಲೆಂದು ಆಶಿಸುತ್ತಾ ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೆ ಹೊಸ ವರ್ಷದ ಶುಭಾಶಯಗಳು.

**ಎಂ.ಚಂದ್ರಶೇಖರ್**
ತಮ್ಮೇನಹಳ್ಳಿ ಪಾಳ್ಯ, ಅಚ್ಯುತನಗರ ಪೋಸ್ಟ್,
ಬೆಂಗಳೂರು 560107

**ಸಚಿವಾಲಯದಿಂದ**
# ಸಂದೇಶ



**ಟಿ.ಎಂ. ವಿಜಯಭಾಸ್ಕರ್,** ಭಾ.ಆ.ಸೇ
**ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ**


**ಕರ್ನಾಟಕ ಸರ್ಕಾರ ಸಚಿವಾಲಯ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**
**ಬಹುಮಹಡಿ ಕಟ್ಟಡ, ಬೆಂಗಳೂರು.**


ಪ್ರಿಯ ಬಂಧುಗಳೇ,

## ಗ್ರಾಮೀಣಾಭಿವೃದ್ಧಿ ಯೋಜನೆಗಳ ಅನುಷ್ಠಾನ......

ಗ್ರಾಮೀಣ ಜನರು ಪರಿಣಾಮಕಾರಿಯಾದ ಜೀವನವನ್ನು ಸಾಗಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಹದಿನೈದು ಅಂಶಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.

ಗ್ರಾಮೀಣ ಬದುಕಿನಲ್ಲಿ ಗುಣಾತ್ಮಕ ಬದಲಾವಣೆ ತರುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಗ್ರಾಮೀಣ ಪ್ರದೇಶಗಳ ಜನಸಾಮಾನ್ಯರ ಸರ್ವಾಂಗೀಣ ಅಭಿವೃದ್ಧಿಪಡಿಸಲು ಹಾಗೂ ಸ್ಥಳೀಯ ಸಂಸ್ಥೆಗಳನ್ನು ಕ್ರಿಯಾಶೀಲಗೊಳಿಸುವಲ್ಲಿ ಜನಪ್ರತಿನಿಧಿಗಳ ಪಾಲ್ಗೊಳ್ಳುವಿಕೆ ಹಾಗೂ ಮಾರ್ಗದರ್ಶನ ಮಹತ್ವದ್ದಾಗಿರುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಶುದ್ಧ ಕುಡಿಯುವ ನೀರು ಎಲ್ಲರಿಗೂ ಲಭ್ಯವಾಗಬೇಕು. ಬಯಲು ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿಸಲು ಮನೆಗೊಂದು ಶೌಚಾಲಯ ನಿರ್ಮಾಣವಾಗಬೇಕು. ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಪಂಚಾಯಿತಿಯ ಕಟ್ಟಡ, ಮಕ್ಕಳಿಗೆ ಆಟದ ಮೈದಾನ, ರೈತನ ಜಮೀನು ಅಭಿವೃದ್ಧಿ, ಗ್ರಾಮಕ್ಕೊಂದು ಸ್ಮಶಾನ, ಕೆರೆ, ಉದ್ಯಾನವನ ಅಭಿವೃದ್ಧಿ ಪಡಿಸುವುದು. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ವಯ ಗ್ರಾಮೀಣ ಬದುಕಿನಲ್ಲಿ ಅವಶ್ಯಕ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಕುರಿ, ದನದ ದೊಡ್ಡಿ ನಿರ್ಮಾಣ, ನಮ್ಮ ಹೊಲ ನಮ್ಮ ದಾರಿ, ರೈತರ ಕಣ ನಿರ್ಮಾಣ ಮಾಡುವ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಎಲ್ಲಾ ಗ್ರಾಮಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಪ್ರತಿಯೊಂದು ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಕಾರ್ಯಕ್ರಮಗಳು ಅನುಷ್ಠಾನ ಗೊಂಡಾಗ ಗ್ರಾಮೀಣ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಯ ಕಲ್ಪನೆ ಸಾಕಾರಗೊಳ್ಳುತ್ತದೆ. ಈ ನಿಟ್ಟಿನಲ್ಲಿ 189 ಗ್ರಾಮೀಣ ವಿಧಾನ ಸಭಾ ಕ್ಷೇತ್ರಗಳ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಮಗ್ರ ಮಾಹಿತಿಯನ್ನು ಕ್ರೋಢೀಕರಿಸಿ ಮುದ್ರಿಸಲಾಗುತ್ತಿದೆ. ಪ್ರಥಮವಾಗಿ 11 ಜಿಲ್ಲೆಗಳ 80 ವಿಧಾನ ಸಭಾ ಕ್ಷೇತ್ರಗಳ ಸಮಗ್ರ ಮಾಹಿತಿಯನ್ನೊಳೊಂಡ "ಪ್ರಗತಿ ಪಥ" ಪುಸ್ತಕಗಳನ್ನು ಮುದ್ರಿಸಿ ವಿದಾನ ಸಭಾ ಶಾಸಕರು ಹಾಗೂ ಅಧಿಕಾರಿಗಳೊಂದಿಗೆ ಒಂದು ದಿನದ ಕಾರ್ಯಾಗಾರ ಏರ್ಪಡಿಸಿ "ಪ್ರಗತಿ ಪಥದ" ಪುಸ್ತಕಗಳನ್ನು ಇತ್ತೀಚೆಗೆ ವಿತರಿಸಲಾಗಿದೆ. ಇದು ಕಾಮಗಾರಿಗಳ ವೇಗವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗುತ್ತದೆ.

ಮೂರು ಹಂತದ ಪಂಚಾಯತ್ ಪ್ರತಿನಿಧಿಗಳು ಹಾಗೂ ಅಧಿಕಾರಿ/ ಸಿಬ್ಬಂದಿಗಳು ವಿಧಾನ ಸಭಾ ಕ್ಷೇತ್ರವಾರು ವಿತರಿಸಿದ "ಪ್ರಗತಿ ಪಥ" ಪುಸ್ತಕಗಳ ಮಾಹಿತಿಯನುಸಾರ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಶಾಸಕರೊಂದಿಗೆ ಸಮನ್ವಯ ಮಾಡಿಕೊಂಡು ಇಲಾಖೆಯ ಯೋಜನೆಗಳ ಜವಾಬ್ದಾರಿ, ಉಸ್ತುವಾರಿ ಹಾಗೂ ಅನುಷ್ಠಾನದಲ್ಲಿ ನಿಯಮಾನುಸಾರ ಕ್ರಮವಹಿಸಿ ಗುಣಮಟ್ಟದ ಕಾಮಗಾರಿಗಳಗಳನ್ನು ನಿರ್ಮಾಣ ಮಾಡುವಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಎಲ್ಲರೂ ಈ ನಿಟ್ಟಿನಲ್ಲಿ ಸಮನ್ವಯ ಮಾಡಿಕೊಂಡು ಆಧ್ಯತೆಯ ಮೇರೆಗೆ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಶೌಚಾಲಯ ನಿರ್ಮಾಣ, ಗ್ರಾಮಗಳ ಪರಿಸರ ಮತ್ತು ನೈರ್ಮಲ್ಯ ಕಾಪಾಡುವುದು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಶ್ರಮ ವಹಿಸುವಿರೆಂದು ಆಶಿಸುತ್ತೇನೆ.

ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು



**(ಟಿ.ಎಂ. ವಿಜಯಭಾಸ್ಕರ್)**

ಮುಖಪುಟ ವರದಿ

# ಗ್ರಾಮೀಣಾಭಿವೃದ್ಧಿ ಪಥ ಒಂದು ದಿನದ ಕಾರ್ಯಗಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ" ಗ್ರಾಮಾಭಿವೃದ್ಧಿ ಪಥ" ಎಂಬ ಒಂದು ದಿನದ ಕಾರ್ಯಾಗಾರವನ್ನು ದಿನಾಂಕ: 25.11.2014 ರಂದು ಹಮ್ಮಿಕೊಳ್ಳಲಾಗಿದ್ದು ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಉದ್ಘಾಟನೆ ಹಾಗೂ ಪುಸ್ತಕ ಬಿಡುಗಡೆ ಸಮಾರಂಭವನ್ನು ವಿಶೇಷ ಆಹ್ವಾನಿತರ ಸಮ್ಮುಖದಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಾಗಾರಕ್ಕೆ 11 ಜಿಲ್ಲೆಗಳ(ಬಾಗಲಕೋಟೆ, ಬೆಳಗಾವಿ, ಬೀದರ್, ವಿಜಯಪುರ, ಗದಗ, ಹಾವೇರಿ, ಮೈಸೂರು, ಉತ್ತರಕನ್ನಡ, ಯಾದಗಿರಿ, ಗುಲ್ಬರ್ಗಾ ಹಾಗೂ ಧಾರವಾಡ) ಮಾನ್ಯ ಸಚಿವರುಗಳನ್ನು, ವಿಧಾನಸಭಾ ಕ್ಷೇತ್ರದ ಶಾಸಕರುಗಳನ್ನು, ಅವರ ಆಪ್ತ ಸಹಾಯಕರನ್ನು, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಉಪಕಾರ್ಯದರ್ಶಿ, ಎಕ್ಸಿಕ್ಯೂಟಿವ್ ಆಫೀಸರ್ಸ್, ಯೋಜನಾ ಅಭಿವೃದ್ಧಿ ಅಧಿಕಾರಿಯವರನ್ನು, ಪತ್ರಿಕಾ ಮಾದ್ಯಮ ಹಾಗೂ ದೂರದರ್ಶನ ಮಾಧ್ಯಮದವರನ್ನು ಸಹ ಆಹ್ವಾನಿಸಲಾಗಿತ್ತು.

'ಗ್ರಾಮೀಣಾಭಿವೃದ್ಧಿ ಪಥ' ಎಂಬ ಒಂದು ದಿನದ ಕಾರ್ಯಗಾರ ಅಯೋಜಿಸಿದ್ದು, ಅದರ ಬಗ್ಗೆ ಸಂಕ್ಷಿಪ್ತ ವರದಿ.



ಈ ಕಾರ್ಯಾಗಾರವು ನಾಡಗೀತೆಯೊಂದಿಗೆ ಪ್ರಾರಂಭಗೊಂಡು ಜ್ಯೋತಿ ಬೆಳಗಿಸುವ ಮೂಲಕ ಆರಂಭಗೊಂಡಿತು. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ತ.ಮ.ವಿಜಯಭಾಸ್ಕರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು "ಗ್ರಾಮಾಭಿವೃದ್ಧಿ ಪಥ "ದ ವಿಧಾನಸಭಾ ಸದಸ್ಯರ ಒಂದು ದಿನದ ಕಾರ್ಯಾಗಾರಕ್ಕೆ ಸನ್ಮಾನ್ಯ ಮುಖ್ಯಮಂತ್ರಿಯವರನ್ನು, ವೇದಿಕೆಯಲ್ಲಿದ್ದ ಮಾನ್ಯ ಸಚಿವರುಗಳನ್ನು ಕಾರ್ಯಾಗಾರಕ್ಕೆ ಆಹ್ವಾನಿತರಾಗಿ ಬಂದಿದ್ದ ಮಾನ್ಯ ಶಾಸಕರುಗಳನ್ನು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು.

ಈ ಕಾರ್ಯಾಗಾರದ ಉದ್ಘಾಟನೆ ಹಾಗೂ ಪುಸ್ತಕ ಬಿಡುಗಡೆ ಸಮಾರಂಭವನ್ನು ಶ್ರೀ ಸಿದ್ಧರಾಮಯ್ಯ, ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಬೆಂಗಳೂರು ಇವರು ನೆರವೇರಿಸಿದರು.

* ಮುಖ್ಯ ಕಾರ್ಯಚರಣೆ ಆಧಿಕಾರಿಗಳು, ಕರ್ನಾಟಕ ರಾಜ್ಯ ಗ್ರಾಮೀಣಾ ರಸ್ತೆ ಅಭಿವೃದ್ಧಿ ನಿಗಮ, ಬೆಂಗಳೂರು

11 ಜಿಲ್ಲೆಗಳ ವಿಧಾನಸಭಾ ಕ್ಷೇತ್ರಗಳ 2014–15ನೇ ಸಾಲಿನ ಕ್ರಿಯಾ ಯೋಜನೆಯನ್ನು ಒಳಗೊಂಡ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಪಟ್ಟ ಎಲ್ಲ ಯೋಜನೆಗಳ ಅಬಿವೃದ್ಧಿ ಕಾಮಗಾರಿಗಳನ್ನು ಒಳಗೊಂಡ ಪುಸ್ತಕಗಳನ್ನು ಶ್ರೀ ಎಚ್.ಕೆ.ಪಾಟೀಲ ಮಾನ್ಯ ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಅರ್ಪಿಸಿದರು.

ಸಚಿವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಇದೊಂದು ಅಭೂತಪೂರ್ವ ಕಾರ್ಯಾಗಾರ ಆಗಿದ್ದು, ಈ ರೀತಿಯ ಕಾರ್ಯಾಗಾರವು ದೇಶದಲ್ಲೇ ಪ್ರಪ್ರಥಮವಾಗಿ ಯೋಜಿಸಲಾಗಿದ್ದು ಎಲ್ಲ ಮಾನ್ಯ ಶಾಸಕರುಗಳಿಗೆ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪ್ರಸ್ತುತ ಸಾಲಿನ ಕ್ರಿಯಾ ಯೋಜನೆಯ ಕ್ಷೇತ್ರವಾರು ಪುಸ್ತಕಗಳನ್ನು ವಿತರಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ತಿಳಿಸಿದರು. ಈ ಪುಸ್ತಕಗಳಲ್ಲಿ ಇಲಾಖೆಯಿಂದ ನಿರ್ವಹಿಸುತ್ತಿರುವ ಎಲ್ಲ ಯೋಜನೆಗಳ ಪ್ರತಿಯೊಂದು ಕಾಮಗಾರಿವಾರು ವಿವರ, ಅನುದಾನದ ವಿವರ, ಫಲಾನುಭವಿಗಳ ವಿವರ ಇತ್ಯಾದಿ ಎಲ್ಲಾ ವಿವರಗಳನ್ನು ಒಳಗೊಂಡಂತೆ ಸಮಗ್ರ ಮಾಹಿತಿಯನ್ನು ಒಳಗೊಂಡಿದ್ದು ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರುಗಳಿಗೆ ವಿತರಿಸಲಾಯಿತು. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ ಮೂಲಕ ಇಲಾಖೆಯಲ್ಲಿ ನಡೆಯುತ್ತಿರುವ ಎಲ್ಲ ಕಾಮಗಾರಿಗಳ ಬಗ್ಗೆ ಜನ ಸಾಮಾನ್ಯರು ಅಂತರ್ಜಾಲದಲ್ಲಿ ವೀಕ್ಷಿಸಬಹುದಾಗಿದೆ ಎಂದು ತಿಳಿಸಿದರು.

ಶ್ರೀ ಸಿದ್ಧರಾಮಯ್ಯ, ಸನ್ಮಾನ್ಯ ಮುಖ್ಯಮಂತ್ರಿಯವರು ಮಾತನಾಡುತ್ತಾ ಸದರಿ ಕಾರ್ಯಾಗಾರದ ಬಗ್ಗೆ ಹಾಗೂ ಇಲಾಖೆಯ ಕಾರ್ಯ ಚಟುವಟಿಕೆಗಳ ಬಗ್ಗೆ ಶ್ಲಾಘಿಸಿ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಮುಂದಾಳತ್ವದಲ್ಲಿ ನಡೆದ ಈ ಕಾರ್ಯಾಗಾರ ಕುರಿತು ಹರ್ಷ ವ್ಯಕ್ತಪಡಿಸಿದರು.

ಶ್ರೀ ಆರ್.ರೋಷನ್ ಬೇಗ್, ಮಾನ್ಯ ಮೂಲ ಸೌಕರ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು ಅಧ್ಯಕ್ಷೀಯ ಬಾಷಣ ಮಾಡಿದರು.



ವಿಶೇಷ ಅಹ್ವಾನಿತರಾಗಿ ಆಗಮಿಸಿದ್ದ "ದಿ ವೀಕ್" ವರ್ಷದ ವಿಶೇಷ ವ್ಯಕ್ತಿ ಶ್ರೀ ಆರ್. ಇಲ್ಯಾಂಗೋ ರವರು ಉಪನ್ಯಾಸ ನೀಡುತ್ತಾ ಗ್ರಾಮೀಣಾಭಿವೃದ್ಧಿ ಇಲಾಖೆಯ ಕಾರ್ಯ ಚಟುವಟಿಕೆ ಬಗ್ಗೆ ಮಾತನಾಡುತ್ತಾ, ಗ್ರಾಮ ಪಂಚಾಯಿತಿ ಹಂತದಲ್ಲಿ ಕೈಗೊಳ್ಳುತ್ತಿರುವ ಕಾಮಗಾರಿಗಳ ಬಗ್ಗೆ ಸ್ಥಳೀಯವಾಗಿ ಲಭ್ಯವಿರುವ ಉತ್ಪನ್ನಗಳನ್ನು ಕ್ರೋಢೀಕರಿಸಿ ಪಂಚಾಯಿತಿ ವತಿಯಿಂದ ಸಂಪನ್ಮೂಲಗಳನ್ನು ವೃದ್ಧಿಗೊಳಿಸಬಹುದಾಗಿದ್ದು ಈ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿಯಲ್ಲಿನ ಅಧಿಕಾರಿಗಳು ಹಾಗೂ ಸ್ಥಳೀಯ ಸಮಿತಿ ಮುಖಂಡರುಗಳು ಹೆಚ್ಚಿನ ಪಾತ್ರ ವಹಿಸಿದಲ್ಲಿ ಹೆಚ್ಚಿನ ಸಂಪನ್ಮೂಲವನ್ನು ರೂಪಿಸಿಕೊಳ್ಳಬಹುದಾಗಿರುತ್ತದೆ ಎಂದು ತಮ್ಮ ಅನಿಸಿಕೆಯನ್ನು ಹಂಚಿಕೊಂಡರು. ಶ್ರೀ ಕೃಷ್ಣ ಬುಗುಟ್ಯಾಗೋಳ, ಆಂತರಿಕ ಆರ್ಥಿಕ ಸಲಹೆ ಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ಕಾಮಗಾರಿಗಳ ಪ್ರಗತಿಯನ್ನು ಸಂಕ್ಷಿಪ್ತವಾಗಿ ವೀಕ್ಷಿಸುವ ಬಗ್ಗೆ ವಿವರಿಸಿದರು.

ಶ್ರೀ ಕೃಷ್ಣ ಉದುಪುಡಿ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರು ಘನ ತ್ಯಾಜ್ಯ ವಿಲೇವಾರಿ ಹಾಗೂ ಸಂಸ್ಕರಣ ಕುರಿತು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು.

ಶ್ರೀ ಮಹೇಶ್ ಎಂ ಹಿರೇಮಠ, ಮುಖ್ಯ ಕಾರ್ಯಚರಣಾಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರ ವಂದನಾರ್ಪಣೆಯೊಂದಿಗೆ ಕಾರ್ಯಾಗಾರವು ಮುಕ್ತಾಯಗೊಂಡಿತು.

ಪರಿಚಯ

# ಶ್ರೀ ಎಸ್.ಆರ್.ಪಾಟೀಲ್ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ನೂತನ ಕಾರ್ಯಕಾರಿ ಅಧ್ಯಕ್ಷರು

ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಕಾರ್ಯಕಾರಿ ಅಧ್ಯಕ್ಷರನ್ನಾಗಿ ಶ್ರೀ ಶಿವಣ್ಣಗೌಡ ಆರ್. ಪಾಟಿಲ್ ಅವರನ್ನು ಸರ್ಕಾರ ನೇಮಕ ಮಾಡಿದ್ದು, ದಿ.10.12.2014ರಂದು ಅಧಿಕಾರ ಸ್ವೀಕರಿಸಿರುತ್ತಾರೆ. ಶ್ರೀಯುತರು ಹಾವೇರಿ ಜಿಲ್ಲೆಯ ಬ್ಯಾಡಗಿ ಪಟ್ಟಣದಲ್ಲಿ 1953ರಲ್ಲಿ ಜನಿಸಿ ವಾಣಿಜ್ಯ ಹಾಗೂ ಕಾನೂನು ಪದವಿ ಹೊಂದಿದ್ದು ಕೃಷಿ, ವ್ಯಾಪಾರ ಮತ್ತು ಸಮಾಜ ಸೇವೆಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿ ಕೊಂಡಿದ್ದಾರೆ. ಅವರು ಹಾವೇರಿಯ ಛೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.



ಬ್ಯಾಡಗಿ ಪಟ್ಟಣ ಪಂಚಾಯತಿಗೆ ಸತತ 25 ವರ್ಷ ಕೌನ್ಸಿಲ್‌ರಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದಾರೆ. ಮೂರು ಬಾರಿ ಬ್ಯಾಡಗಿ ಟೌನ್ ಮುನಿಸಿಪಾಟಿಲಿಟಿ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಅಲ್ಲದೇ ಶ್ರೀಯುತರು ಮೆ॥ ಹಾವೇರಿ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತದ ಅಧ್ಯಕ್ಷರಾಗಿಯೂ (1994–2001) ಸೇವೆ ಸಲ್ಲಿಸಿದ್ದಾರೆ.

ಬ್ಯಾಡಗಿ ಶಿಕ್ಷಣ ಸಂಸ್ಥೆಯ ಗೌರವಾನ್ವಿತ ಕಾರ್ಯದರ್ಶಿಯಾಗಿ, ಯೂಥ್ ಕಾಂಗ್ರೆಸ್ ಅಧ್ಯಕ್ಷರಾಗಿ (1977–1980), ಬ್ಯಾಡಗಿ ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿಯೂ (2004–2009), ಪ್ರದೇಶ ಕಾಂಗ್ರೆಸ್ ಸಮಿತಿ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಶ್ರೀಯುತರ ಹಿರಿಯ ಅನುಭವ ಹಾಗೂ ಮುಂದಾಳತ್ವದಲ್ಲಿ "ಕರ್ನಾಟಕ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ"ಯ ನೇತೃತ್ವ ವಹಿಸಿರುವುದು ಸ್ವಾಗತಾರ್ಹ. ಇವರ ಮುಂದಾಳದಲ್ಲಿ ಜೈವಿಕ ಇಂಧನ ಕಾರ್ಯಕ್ರಮಗಳು ಹೆಚ್ಚು ಪರಿಣಾಮಕಾರಿಯಾಗಿ ಅಭಿವೃದ್ಧಿಗೊಳ್ಳಲಿ ಎಂದು ಮಂಡಳಿ ಹಾರೈಸುತ್ತದೆ.

* ಬಸವರಾಜ್, ತಾಂತ್ರಿಕ ಅಧಿಕರಿ, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು

ವರದಿ

# ಮಾಹಿತಿ, ಶಿಕ್ಷಣ, ಸಂವಹನ (IEC) ಸಭೆ

ದಿನಾಂಕ:12.12.2014ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ರಾಕ್ ಗಾರ್ಡ್‌ನ್, ಗೊಟಗೋಡಿ, ಶಿಗ್ಗಾಂವ್ ತಾಲ್ಲೂಕು, ಹಾವೇರಿ ಜಿಲ್ಲೆ ಇಲ್ಲಿ ನಡೆದ ಇಲಾಖೆಯ ಮಾಹಿತಿ, ಶಿಕ್ಷಣ, ಸಂವಹನ (ಐಇಸಿ) ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆ ನಡೆಸಲಾಯಿತು.

ಸದರಿ ಸಭೆಯಲ್ಲಿ ಮಾನ್ಯ ಮುಖ್ಯ ಕಾರ್ಯಚರಣಾಧಿಕಾರಿಯವರು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ 2014–15ನೇ ಸಾಲಿನ ಮಾಹಿತಿ, ಶಿಕ್ಷಣ, ಸಂವಹನ (ಐಇಸಿ) ಕಾರ್ಯಕ್ರಮದ ಕ್ರಿಯಾ ಯೋಜನೆಯ ಹಾಗೂ ಇದುವರೆಗೆ ಸಾಧಿಸಿದ ಪ್ರಗತಿ ವಿವರಗಳನ್ನು ಮತ್ತು ಮುಂದಿನ ಮಾಹೆಗಳಲ್ಲಿ ಅನುಷ್ಠಾನ ಮಾಡುವ ಕಾರ್ಯಕ್ರಮ ಕುರಿತು ಸಚಿವರಿಗೆ ಮಾಹಿತಿ ನೀಡಿದರು.



ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಐ.ಇ.ಸಿ. ಸಭೆಯ ಮಾಹಿತಿ

ಮಾನ್ಯ ಸಚಿವರು ತುರ್ತಾಗಿ ಜಾಹೀರಾತು ಮತ್ತು ಪ್ರಚಾರ ಕಾರ್ಯಗಳನ್ನು ಆಂಧೋಲನ ರೂಪದಲ್ಲಿ ಕ್ರಮವಹಿಸಲು ಸೂಚಿಸಿದರು.

ಸದರಿ ಸಭೆಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾ.ಅ.ಪಂ.ರಾಜ್ ಇಲಾಖೆ, ಮುಖ್ಯ ಕಾರ್ಯಾಚರಣೆ ಆಧಿಕಾರಿಗಳು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಅಪರ ನಿರ್ದೇಶಕರು, ಸ್ವಚ್ಛ ಭಾರತ ಮಿಷನ್, ಅಪರ ನಿದೇಶಕರು, ಗ್ರಾಮೀಣ ನೀರು ಮತ್ತು ನೈರ್ಮಲ್ಯ ಸಂಸ್ಥೆ, ಜಂಟಿ ನಿರ್ದೇಶಕರು, ವಾರ್ತಾ ಮತ್ತು ಸಂಪರ್ಕ ಇಲಾಖೆ, ಉಪ ನಿದೇಶಕರು, ವಾರ್ತಾ ಮತ್ತು ಸಂಪರ್ಕ ಇಲಾಖೆ, ಹಾಗೂ ಇಲಾಖೆಯ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ವರದಿ

# ಸಾರ್ವಜನಿಕ ಮಾಹಿತಿ ಆಂದೋಲನ

ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದ ವಾರ್ತಾ ಶಾಖೆ ಹಾಗೂ ಗದಗ ಜಿಲ್ಲಾಡಳಿತ ಇವರ ವತಿಯಿಂದ ಸಾರ್ವಜನಿಕ ಮಾಹಿತಿ ಆಂದೋಲನವನ್ನು ದಿನಾಂಕ:13.12.2014 ರಿಂದ 15.12.2014ರ ವರೆಗೆ ಗದಗ ನಗರದ ಮುನಿಸಿಪಲ್ ಹೈಸ್ಕೂಲ್ ಮೈದಾನದಲ್ಲಿ ಏರ್ಪಡಿಸಲಾಗಿತ್ತು.

ಸದರಿ ಆಂದೋಲನ ಕಾರ್ಯಕ್ರಮವನ್ನು ದಿನಾಂಕ 13.12.2014ರಂದು ಹಾವೇರಿ ಲೋಕಸಭಾ ಸದಸ್ಯರಾದ ಶ್ರೀ ಶಿವಕುಮಾರ ಉದಾಸಿಯವರು ಉದ್ಘಾಟಿಸಿದರು ಹಾಗೂ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಚ್.ಕೆ.ಪಾಟೀಲ ರವರು ವಹಿಸಿದ್ದರು.

ಗದಗ ನಗರದಲ್ಲಿ ನಡೆದ ಸಾರ್ವಜನಿಕ ಮಾಹಿತಿ ಅಂದೋಲನ ಕುರಿತ ವರದಿ




ಪ್ರಚಾರ ಆಂದೋಲನದ ವಸ್ತು ಪ್ರದರ್ಶನದಲ್ಲಿ 40 ಮಳಿಗೆಗಳನ್ನು ಏರ್ಪಡಿಸಲಾಗಿತ್ತು. ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಿದ್ಧಪಡಿಸಿರುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಬಿಂಬಿಸುವ ಲೇಸರ್ ಶೋ ಏರ್ಪಡಿಸಲಾಗಿತ್ತು. ದಿನಾಂಕ:15.12.2014 ರಂದು ವಿವಿಧ ಇಲಾಖೆಯ ಅಧಿಕಾರಿಗಳು ನೆರೆದಿದ್ದ ಸಾರ್ವಜನಿಕರಿಗೆ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ವೇದಿಕೆ ಮುಖಾಂತರ ಮಾಹಿತಿ ನೀಡಿದರು. ಪ್ರತಿ ದಿನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಹ ಏರ್ಪಡಿಸಲಾಗಿತ್ತು.

ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್ ಗದಗ

ವರದಿ

# ಬಯಲು ಶೌಚ ಮುಕ್ತ ಕರ್ನಾಟಕ

2018ರ ಅಕ್ಟೋಬರ್ 2ರೊಳಗಾಗಿ ಕರ್ನಾಟಕವನ್ನು ಬಯಲು ಶೌಚ ಮುಕ್ತ ರಾಜ್ಯವನ್ನಾಗಿಸಲು ಸರ್ಕಾರ ಯೋಜನೆ ಹಾಕಿಕೊಂಡಿದೆ ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾದ ಶ್ರೀ ಎಚ್.ಕೆ.ಪಾಟೀಲ ಹೇಳಿದ್ದಾರೆ.

ದಿನಾಂಕ: 12.12.2014 ರಂದು ಸುವರ್ಣ ವಿಧಾನ ಸೌಧದ ಆವರಣದಲ್ಲಿ ಶೇ.100 ರಷ್ಟು ಕುಟುಂಬಗಳಿಗೆ ಶೌಚಾಲಯ ನಿರ್ಮಿಸಿ ಬಯಲು ಮುಕ್ತ ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಪಿಡಿಓಗಳಿಗೆ ಏರ್ಪಡಿಸಿದ್ದ ಚಹಾ ಕೂಟದಲ್ಲಿ ಮಾತನಾಡಿದ ಸಚಿವರು ಅವರು, ರಾಜ್ಯ ಸರ್ಕಾರ ಮಹಾತ್ಮ ಗಾಂಧೀಜಿ ಅವರ ಗ್ರಾಮ ಸ್ವರಾಜ್ ಕನಸು ನನಸಾಗಿಸಲು ಶ್ರಮಿಸುತ್ತಿದ್ದು, ಪ್ರತಿಯೊಬ್ಬರೂ ಶೌಚಾಲಯ ಸಮರದಲ್ಲಿ ಪಾಲ್ಗೊಳ್ಳಬೇಕಾದ ಅವಶ್ಯಕತೆಯಿದೆ ಎಂದರು.

**ಬೆಳಗಾವಿ ಜಿಲ್ಲೆಯ ಸುವರ್ಣ ಸೌಧದ ಅವರಣದಲ್ಲಿ ಏರ್ಪಡಿಸಿದ ಸಭೆಯಲ್ಲಿ ಮಾನ್ಯ ಸಚಿವರು ಪ್ರತಿಯೊಬ್ಬರೂ ಶೌಚಾಲಯ ಸಮರದಲ್ಲಿ ಸಂಕ್ಷಿಪ್ತ ಪಾಲ್ಗೊಳ್ಳಬೇಕಾದ ಅವಶ್ಯಕತೆಯಿದೆ ಎಂದು ತಿಳಿಸಿದರು.**



ಕಳೆದ ವರ್ಷ ರಾಜ್ಯದಲ್ಲಿ 5.60 ಲಕ್ಷ ಶೌಚಾಲಯ ನಿರ್ಮಿಸಲಾಗಿದ್ದು, ಪ್ರಸಕ್ತ ವರ್ಷ 10 ಲಕ್ಷ ಶೌಚಾಲಯ ನಿರ್ಮಿಸುವ ಗುರಿ ಹಾಕಿಕೊಳ್ಳಲಾಗಿದೆ. ಜನವರಿ 26 ರಂದು ಒಂದು ಸಾವಿರ ಗ್ರಾಮಗಳನ್ನು, 2015ರ ಅಗಸ್ಟ್ 15ಕ್ಕೆ 10 ಸಾವಿರ ಗ್ರಾಮ, 2015ರ ಅಕ್ಟೋಬರ್ 2ಕ್ಕೆ 20 ಸಾವಿರ ಗ್ರಾಮಗಳನ್ನು ಬಯಲು ಶೌಚ ಮುಕ್ತ ಗ್ರಾಮಗಳನ್ನಾಗಿ ರೂಪಿಸಲು ಸರ್ಕಾರ ಮಹತ್ವದ ಹೆಜ್ಜೆಯಿಟ್ಟಿದೆ. 2018ಕ್ಕೆ ಇಡೀ ರಾಜ್ಯವನ್ನು ಬಯಲು

* ಜಿಲ್ಲಾ ಸಂಯೋಜಕರು, ಸ್ವಚ್ಛ ಭಾರತ ಅಭಿಯಾನ, ಜಿಲ್ಲಾ ಪಂಚಾಯತ್, ಬೆಳಗಾವಿ



ಶೌಚ ಮುಕ್ತ ಮಾಡಲು ಸಮರೋಪಾದಿಯಲ್ಲಿ ಕಾಮಗಾರಿ ಅನುಷ್ಠಾನಗೊಳಿಸಲು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು.

ರಾಜ್ಯದಲ್ಲಿರುವ 60 ಸಾವಿರ ಜನವಸತಿ ಪ್ರದೇಶಗಳಲ್ಲಿ ಈ ಕಾರ್ಯಕ್ರಮ ಅನುಷ್ಠಾನ ಗೊಳಿಸಬೇಕಾಗಿದೆ. ಜನಪ್ರತಿನಿಧಿಗಳು ಮತ್ತು ಸಾರ್ವಜನಿಕ ಸಹಕಾರ ಇದಕ್ಕೆ ಅವಶ್ಯವಾಗಿದೆ ಎಂದರು.

ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲ್ಲೂಕಿನ ಬೆನಕನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಸಾವಗಾಂವ, ಕಿಣಿಯೇ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಿಣಿಯೇ, ರಣಕುಂಡೆ, ಕರ್ಲೇ ಹಾಗೂ ಸುಳಗಾ (ವಾಯ್) ಗ್ರಾಮ ಪಂಚಾಯತಿ ವ್ಯಾಪ್ತಿಯ ರಾಜಹಂಸಗಡ ಅದೇ ರೀತಿಯಾಗಿ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹರಿರಾಯನಹಳ್ಳಿ, ಮದ್ದೂರು ತಾಲ್ಲೂಕಿನ ಹೆಮ್ಮನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕದಲೀಪುರ, ಮಳವಳ್ಳಿ ತಾಲ್ಲೂಕಿನ ರಾಗಿಬೊಮ್ಮನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಗಣಗನೂರು ಹಾಗೂ ಶ್ರೀರಂಗಪಟ್ಟಣ ತಾಲ್ಲೂಕಿನ ಮಹದೇವಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ತರೀಪುರ ಗ್ರಾಮಗಳನ್ನು ಬಯಲು ಶೌಚ ಮುಕ್ತ ಗ್ರಾಮವನ್ನಾಗಿಸಿದ ಅಧ್ಯಕ್ಷರು ಹಾಗೂ ಪಿಡಿಓಗಳನ್ನು ಸಚಿವರು ಇದೇ ಸಂದರ್ಭದಲ್ಲಿ ಅಭಿನಂದಿಸಿದರು. ತಾವು ತಮ್ಮ ವ್ಯಾಪ್ತಿಯ ಇತರ ಗ್ರಾಮಗಳನ್ನು ಸಹ ಶೀಘ್ರವೇ ಬಯಲು ಶೌಚ ಮುಕ್ತ ಗ್ರಾಮ ಮಾಡುವಲ್ಲಿ ಪ್ರಯತ್ನಿಸಬೇಕು. ನಿಮ್ಮ ಕಾರ್ಯ ಇತರರಿಗೂ ಮಾದರಿಯಾಗಿದೆ ಎಂದರು.

ಬೆಳಗಾವಿ ಜಿಲ್ಲಾ ಪಂಚಾಯತ್ ಸಿಇಓ, ದೀಪಾ ಚೋಳನ್ ಹಾಗೂ ಮಂಡ್ಯ ಜಿಲ್ಲಾ ಪಂಚಾಯತ್ ಸಿಇಓ, ರೋಹಿಣಿ ಸಿಂಧೂರಿ ಅವರ ಕಾರ್ಯವೈಖರಿಗೆ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಶ್ರೀ ವಿಜಯ ಭಾಸ್ಕರ್, ಕಾರ್ಯದರ್ಶಿ ಗಂಗಾರಾಮ್ ಬಡೇರಿಯಾ ಮತ್ತು ಮುನೀಷ್ ಮೌದ್ಗಿಲ್, ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಉಪಸ್ಥಿತರಿದ್ದರು.

ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ

# ಅಭಿವೃದ್ಧಿ ಪಥದತ್ತ ದಾಪುಗಾಲು ಹಾಕುತ್ತಿರುವ ಹುನಗುಂಡಿ ಗ್ರಾಮ ಪಂಚಾಯತಿ



ಮಂಜುನಾಥ್ ಗಣಿ

ಅಭಿವೃದ್ಧಿಯತ್ತ ಯಶಸ್ವಿಯಾಗಿ ಮುನ್ನುಗ್ಗುತ್ತಿರುವ ಗದಗ ಜಿಲ್ಲೆ, ರೋಣ ತಾಲ್ಲೂಕಿನ, ಹನಗುಂಡಿ ಗಾಮ ಪಂಚಾಯತಿಯ ಕಿರು ಪರಿಚಯ.

ಗದಗ ಜಿಲ್ಲೆ ರೋಣ ತಾಲ್ಲೂಕಿನ ವ್ಯಾಪ್ತಿಗೆ ಸೇರಿದ ಹುನಗುಂಡಿ ಗ್ರಾಮ ಪಂಚಾಯತಿಯು ತಾಲ್ಲೂಕು ಕೇಂದ್ರದಿಂದ 10 ಕಿ.ಮೀ. ದೂರದಲ್ಲಿದೆ. ಸದರಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಹಳ್ಳಿಗಳು ಸಂಪೂರ್ಣ ಹಿಂದುಳಿದ ಗ್ರಾಮಗಳಾಗಿದ್ದು. ಬಹುತೇಕ ಜನರು ಅನಕ್ಷರಸ್ಥರಾಗಿದ್ದು, ಜೀವನೋಪಾಯಕ್ಕಾಗಿ ಕೃಷಿಯನ್ನು ಅವಲಂಬಿಸಿರುತ್ತಾರೆ. ಅಲ್ಲದೇ ಅನೇಕ ಜನರು ಉದ್ಯೋಗಕ್ಕಾಗಿ ಮಂಗಳೂರು, ಗೋವಾಗಳಿಗೆ ವಲಸೆ ಹೋಗುತ್ತಾರೆ.

ಸದರಿ ಗ್ರಾಮ ಪಂಚಾಯತ್ ವ್ಯಾಪ್ತಿಗೆ 7 ಗ್ರಾಮಗಳು ಸೇರಿದ್ದು, ಒಟ್ಟು 6922 ಜನ ಸಂಖ್ಯೆ ಹೊಂದಿರುತ್ತದೆ. ಹಿಂದುಳಿದ ಕಡು ಬಡತನದ ಕುಟುಂಬಗಳು ಹೆಚ್ಚಾಗಿದ್ದು. ಸರಕಾರಿ ಯೋಜನೆಗಳ ಬಗ್ಗೆ ಆಸಕ್ತಿ ಹೊಂದಿದವರಾಗಿರುತ್ತಾರೆ.

## ಗ್ರಾಮದ ಸಂಕ್ಷೀಪ್ತ ವಿವರ:

| ಕ್ರ.ಸಂ | ಗ್ರಾಮದ ಹೆಸರು | ಜನಸಂಖ್ಯೆ | ಸಾಕ್ಷರತೆಯ ಪ್ರಮಾಣ |
|---|---|---|---|
| 1 | ಹುನಗುಂಡಿ | 1594 | 68% |
| 2 | ಬೆನಹಾಳ | 1666 | 67% |
| 3 | ಅಮರಗೋಳ | 1092 | 66% |
| 4 | ಹೊಳೆಹಡಗಲಿ | 831 | 65% |
| 5 | ಬಸರಕೋಡ | 581 | 68% |
| 6 | ಬಿ.ಎಸ್.ಬೇಲೇರಿ | 866 | 67.34% |
| 7 | ಕುರುವಿನಕೊಪ್ಪ | 292 | 63.42% |

ಸದರಿ ಗ್ರಾಮ ಪಂಚಾಯತಿಯ ವ್ಯಾಪ್ತಿಗೊಳಪಡುವ ಅಮರಗೋಳ, ಹೊಳೆಹಡಗಲಿ, ಬಸರಕೋಡ, ಬಿ.ಎಸ್.ಬೇಲೇರಿ, ಮತ್ತು ಕುರುವಿನಕೊಪ್ಪ ಗ್ರಾಮಗಳು ಮಲಪ್ರಭಾ ನದಿಯ ದಂಡೆಯ ಮೇಲೆ ಬರುವುದರಿಂದ ಪ್ರವಾಹದಿಂದ ಸದರಿ ಗ್ರಾಮಗಳು ಸಂಪೂರ್ಣ ಸ್ಥಳಾಂತರ ಗ್ರಾಮಗಳಾಗಿರುತ್ತವೆ.

## ಹುನಸಗುಂಡಿ ಗ್ರಾಮ ಪಂಚಾಯತಿಯಲ್ಲಿರು ಶಾಲೆಗಳ ವಿವರ :

- ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ – 2
- ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ – 5
- ಸರಕಾರಿ ಪ್ರೌಢಶಾಲೆಗಳ ಸಂಖ್ಯೆ – 2

*ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಹುನಗುಂಡಿ ಗ್ರಾಮ ಪಂಚಾಯತಿ, ರೋಣ ತಾಲ್ಲೂಕು, ಗದಗ ಜಿಲ್ಲೆ

## ಅಂಗನವಾಡಿಗಳ ವಿವರ:

| ಕ್ರ.ಸಂ | ಗ್ರಾಮದ ಹೆಸರು | ಅಂಗನವಾಡಿ ಕೇಂದ್ರಗಳ ಸಂಖ್ಯೆ |
|---|---|---|
| 1 | ಹುನಗುಂಡಿ | 2 |
| 2 | ಬೆನಹಾಳ | 2 |
| 3 | ಅಮರಗೋಳ | 1 |
| 4 | ಹೊಳೆಹಡಗಲಿ | 1 |
| 5 | ಬಸರಕೋಡ | 1 |
| 6 | ಬಿ.ಎಸ್.ಬೇಲೇರಿ | 1 |
| 7 | ಕುರುವಿನಕೊಪ್ಪ | 1 |

## ಸ್ತ್ರೀ ಶಕ್ತಿ ಸಂಘಗಳ ವಿವರ :

| ಕ್ರ.ಸಂ | ಗ್ರಾಮದ ಹೆಸರು | ಸ್ತ್ರೀ ಶಕ್ತಿ ಸಂಘಗಳ ಸಂಖ್ಯೆ |
|---|---|---|
| 1 | ಹುನಗುಂಡಿ | 8 |
| 2 | ಬೆನಹಾಳ | 5 |
| 3 | ಅಮರಗೋಳ | 5 |
| 4 | ಹೊಳೆಹಡಗಲಿ | 4 |
| 5 | ಬಸರಕೋಡ | 4 |
| 6 | ಬಿ.ಎಸ್.ಬೇಲೇರಿ | 4 |
| 7 | ಕುರುವಿನಕೊಪ್ಪ | 4 |

## ಗ್ರಾಮ ಪಂಚಾಯತ ಸದಸ್ಯರುಗಳ ವಿವರ

| ಕ್ರ. ಸಂ | ಸದಸ್ಯರ ಹೆಸರು | ಗ್ರಾಮ | ಪದನಾಮ |
|---|---|---|---|
| 1 | ಶ್ರೀಮತಿ ಸುಶೀಲವ್ವ ರು ಪಾಟೀಲ | ಬೆನಹಾಳ | ಅಧ್ಯಕ್ಷರು |
| 2 | ಶ್ರೀ ಬಸವಂತಪ್ಪ ಹ ತಳವಾರ | ಹುನಗುಂಡಿ | ಉಪಾಧ್ಯಕ್ಷರು |
| 3 | ಶ್ರೀ ಗಂಗಾಧರ ಶಂ ಮಂಡಸೊಪ್ಪಿ | ಹುನಗುಂಡಿ | ಸದಸ್ಯರು |
| 4 | ಶ್ರೀ ಮಳಿಯಪ್ಪ ತಾ/ಮುದಕವ್ವ ಹಾದಿಮನಿ | ಹುನಗುಂಡಿ | ಸದಸ್ಯರು |
| 5 | ಶ್ರೀಮತಿ ಶಾಂತವ್ವ ನಿಂ ದೊಡ್ಡಗೌಡ್ರ | ಹುನಗುಂಡಿ | ಸದಸ್ಯರು |
| 6 | ಶ್ರೀ ರಾಮನಗೌಡ ಶಂ ಪಾಟೀಲ | ಬೆನಹಾಳ | ಸದಸ್ಯರು |
| 7 | ಶ್ರೀ ಮೈಲಾರಪ್ಪ ಪ ಜಂಗಣ್ಣವರ | ಬೆನಹಾಳ | ಸದಸ್ಯರು |
| 8 | ಶ್ರೀ ಬೈಲಪ್ಪ ಕು ಕಂಬಳಿ | ಬೆನಹಾಳ | ಸದಸ್ಯರು |
| 9 | ಶ್ರೀ ಪೋಲೀಸಗೌಡ ರಾ ಪೋಲಿಸ ಪಾಟೀಲ | ಅಮರಗೋಳ | ಸದಸ್ಯರು |
| 10 | ಶ್ರೀಮತಿ ರಂಗವ್ವ ಬ ಬಾಲನಗೌಡ್ರ | ಅಮರಗೋಳ | ಸದಸ್ಯರು |
| 11 | ಶ್ರೀಮತಿ ಲಕ್ಷ್ಮವ್ವ ಮರಿಯಪ್ಪ ಮಾದರ | ಅಮರಗೋಳ | ಸದಸ್ಯರು |
| 12 | ಶ್ರೀಮತಿ ಮಾಳವ್ವ ಶಂ ಹೊಸಮನಿ | ಹೊಳೆ–ಹಡಗಲಿ | ಸದಸ್ಯರು |
| 13 | ಶ್ರೀ ನಿಂಗಪ್ಪ ಗಿ ಪೂಜಾರ | ಹೊಳೆ–ಹಡಗಲಿ | ಸದಸ್ಯರು |
| 14 | ಶ್ರೀಮತಿ ರತ್ನವ್ವ ಹ ಮೂರಪಡಿ | ಬಸರಕೋಡ | ಸದಸ್ಯರು |
| 15 | ಶ್ರೀ ಶಿವಪುತ್ರಪ್ಪ ರೇ ಸೂಳಿಕೇರಿ | ಬಿ.ಎಸ್.ಬೇಲೇರಿ | ಸದಸ್ಯರು |
| 16 | ಶ್ರೀ ನಿಂಗಪ್ಪ ಶಂ ಹೊಸಮನಿ | ಬಿ.ಎಸ್.ಬೇಲೇರಿ | ಸದಸ್ಯರು |
| 17 | ಶ್ರೀಮತಿ ಶರಣವ್ವ ಯ ಪೂಜಾರ | ಬಿ.ಎಸ್.ಬೇಲೇರಿ | ಸದಸ್ಯರು |
| 18 | ಶ್ರೀ ಪವಾಡೆಪ್ಪ ಭೀ ಹವಾಜಿ | ಕುರುವಿನಕೊಪ್ಪ | ಸದಸ್ಯರು |

## ಕೊಳವೆ ಭಾವಿಗಳ ವಿವರ :

| ಕ್ರ. ಸಂ. | ಗ್ರಾಮದ ಹೆಸರು | ಕೊಳವೆ ಭಾವಿಗಳ ಸಂಖ್ಯೆ | ಕೀರು ನೀರು ಸರಬರಾಜು ಯೋಜನೆ | ಕೈಪಂಪು ಯೋಜನೆ |
|---|---|---|---|---|
| 1 | ಹುನಗುಂಡಿ | 4 | 2 | 5 |
| 2 | ಬೆನಹಾಳ | 4 | 1 | 6 |
| 3 | ಅಮರಗೋಳ | 2 | 1 | 2 |
| 4 | ಹೊಳೆಹಡಗಲಿ | 4 | 2 | 2 |
| 5 | ಬಸರಕೋಡ | 2 | 2 | 2 |
| 6 | ಬಿ.ಎಸ್.ಬೇಲೇರಿ | 4 | 2 | 4 |
| 7 | ಕುರುವಿನಕೊಪ್ಪ | 2 | 2 | 2 |
| | ಒಟ್ಟು | 22 | 12 | 23 |

## ತೆರಿಗೆ ವಸೂಲಾತಿ ಸಾಧನೆ :

| ಕ್ರ ಸಂ | ವರ್ಷ | ತೆರಿಗೆ ಸ್ವರೂಪ | ಒಟ್ಟು ಬೇಡಿಕೆ | ಒಟ್ಟು ವಸೂಲಾತಿ |
|---|---|---|---|---|
| 1 | 2013-14 | ಮನೆ ಮತ್ತು ನಿವೇಶನ | 8,95,000 | 3,00,240 |
| 2 | 2013-14 | ನೀರಿನ ತೆರಿಗೆ | 3,64,800 | 1,20,140 |
| 3 | 2014-15 | ಮನೆ ಮತ್ತು ನಿವೇಶನ | 8,95,000 | 1,00,684 ಅಕ್ಟೋಬರ ವರಗೆ |
| 4 | 2014-15 | ನೀರಿನ ತೆರಿಗೆ | 3,90,240 | 40,000 ಅಕ್ಟೋಬರ ವರಗೆ |

## ಸಂಪೂರ್ಣ ಸ್ವಚ್ಛತೆಗೆ ಸಂಘರ್ಷ

ಹಳ್ಳಿಗಳ ಉದ್ಧಾರವಾಗದೆ ದೇಶದ ಉದ್ದಾರವು ಸಾದ್ಯವಿಲ್ಲಾ ಎಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ "ಗ್ರಾಮ ಸ್ವರಾಜ್ಯ"ದ ಕನಸು ನನಸು ಮಾಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ರಾಷ್ಟ್ರಪಿತನ ಹೆಸರಿನಲ್ಲಿ " ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೆ ತಂದಿದ್ದು, ಸದರಿ ಯೋಜನೆಯನ್ನು ಸಮರ್ಪಕವಾಗಿ



ಅನುಷ್ಠಾನಗೊಳಿಸಿದ ಹುನಗುಂಡಿ ಗ್ರಾಮ ಪಂಚಾಯತಿಯು ಈ ಯೋಜನೆಯಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆರೆಗಳ ಅಭಿವೃದ್ಧಿ, ರಸ್ತೆ ಬದಿಯಲ್ಲಿ ಗಿಡಗಳನ್ನು ನೆಡೆಸುವುದು, ಚರಂಡಿ ನಿರ್ಮಾಣ, ರಸ್ತೆ ನಿರ್ಮಾಣ, ಶೌಚಾಲಯಗಳ ನಿರ್ಮಾಣ, ದನದ ದೊಡ್ಡಿ ನಿರ್ಮಾಣ, ಶಾಲಾ ಮೈದಾನ ಅಭಿವೃದ್ಧಿ, ಶಾಲಾ ಕಾಂಪೌಡ್‌ಗಳ ನಿರ್ಮಾಣ ಇನ್ನೂ ಮುಂತಾದ ಅಭಿವೃದ್ಧಿ ಕಾಮಗಾರಿಗಳನ್ನು ಕೈಕೊಂಡಿದೆ. ಇದರಿಂದ ಗ್ರಾಮಸ್ಥರು ಕೆಲಸಕ್ಕಾಗಿ ಮಂಗಳೂರು, ಗೋವಾಗಳಿಗೆ ವಲಸೆ ಹೋಗುವುದು ಕಡಿಮೆಯಾಗಿದ್ದು, ಸದರಿಯವರು ಆರ್ಥಿಕವಾಗಿ ಮುಂದುವರೆದು ಜೀವನದಲ್ಲಿ ಮಹತ್ವದ ಬದಲಾವಣೆಗಳನ್ನು ಕಂಡಿದ್ದಾರೆ.

ಗ್ರಾಮದಲ್ಲಿ ನೈರ್ಮಲ್ಯೀಕರಣಕ್ಕಾಗಿ ಪ್ರಯತ್ನಿಸುತ್ತಿದ್ದು ಇದಕ್ಕಾಗಿ ಪ್ರತಿಯೊಂದು ಫಲಾನುಭವಿಗಳು ಮೊದಲು ಶೌಚಾಲಯ ನಿರ್ಮಿಸಿಕೊಳ್ಳಬೇಕೆಂದು ಮತ್ತು ಅಂಥವರನ್ನು ಸರಕಾರದ ಯೋಜನೆ ಫಲಾನುಭವಿಗಳಾಗಿ ಆಯ್ಕೆ ಮಾಡಲಾಗುತ್ತಿದೆ. ಅಲ್ಲದೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಮೂಲಕ ಗ್ರಾಮದಲ್ಲಿ ಹಂತ ಹಂತವಾಗಿ ಗಟಾರುಗಳನ್ನು ನಿರ್ಮಿಸುತ್ತಿದ್ದು ಇನ್ನೂ 2-3 ವರ್ಷಗಳಲ್ಲಿ ಗ್ರಾಮದಲ್ಲಿ ಸಂಪೂರ್ಣ ಗಟಾರ ನಿರ್ಮಾಣ ಮಾಡುವ ಗುರಿಯನ್ನು ಹೊಂದಿದೆ.



## ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಾಧನೆಗಳು

* ದುಡಿಯುವ ಕೈಗಳಿಗೆ ಕೆಲಸ ನೀಡಿದಲ್ಲಿ ಜನರ ಆರ್ಥಿಕ ಜೀನವ ಶೈಲಿ ಸುದಾರಣೆಯಾಗವುದರಲ್ಲಿ ಸಂದೇಹವೆ ಇಲ್ಲಾ, ಅಲ್ಲದೆ ಸಾರ್ವಜನಿಕ ಆಸ್ತಿಗಳಾದ ಕೆರೆಗಳನ್ನು ರಕ್ಷಿಸಿ, ಅಭಿವೃದ್ಧಿ ಪಡಿಸಲು ಈ ಯೋಜನೆ ತುಂಬಾ ಸಹಾಯಕಾರಿ.
* ಗ್ರಾಮದಲ್ಲಿರುವ ಸ್ತ್ರೀ ಶಕ್ತಿ ಸಂಘಗಳ ಮೂಲಕ ಜನರಿಗೆ ಉದ್ಯೋಗ ಖಾತ್ರಿಯ ಯೋಜನೆಯ ಅರಿವನ್ನು ಮೂಡಿಸಲಾಗಿದೆ.
* ಎನ್.ಜಿ.ಓ.ಗಳ ಸಹಾಯ ಪಡೆದು ಕೂಲಿ ಕಾರ್ಮಿಕರ ಸಂಘಗಳನ್ನು ರಚನೆ ಮಾಡಿ ನಿಯಮಿತವಾಗಿ ಉದ್ಯೋಗ ನೀಡಲಾಗಿದೆ.
* ಗ್ರಾಮ ಸಭೆ, ವಾರ್ಡ್ ಸಭೆಗಳಲ್ಲಿ ಗ್ರಾಮದಲ್ಲಿ ತಗೆದುಕೊಳ್ಳುವಂತ ಕಾಮಗಾರಿಗಳನ್ನು ಅದರಲ್ಲಿ ಕೂಲಿ ಕಾರ್ಮಿಕರು ಮಾಡುವ ಕಾಮಗಾರಿಗಳನ್ನು ಆಯ್ಕೆ ಮಾಡಿ ಜನರಿಗೆ ಉದ್ಯೋಗ ನೀಡಲಾಗಿದೆ.
* ಕೂಲಿ ಕಾರ್ಮಿಕರಿಗೆ ಸಕಾಲದಲ್ಲಿ ವೇತನ ಪಾವತಿಯಾಗುವಂತೆ ಮಾಡುವ ಮೂಲಕ ಈ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನ ಗೊಳಿಸಲಾಗಿದೆ.

## ಕುಡಿಯುವ ನೀರಿನ ಬಗ್ಗೆ

ಹುನಗುಂಡಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗಾಗಿ ಮುಖ್ಯವಾಗಿ ಕೊಳವೆಬಾವಿಗಳನ್ನು ಅವಲಂಬಿಸಿದ್ದು ಕುಡಿಯಲು ಸಂಪೂರ್ಣ ಯೋಗ್ಯವಾಗಿರುವುದಿಲ್ಲ ಆದ್ದರಿಂದ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಈಗಾಗಲೇ 4 ಶುದ್ದ ಕುಡಿಯುವ ನೀರಿನ ಘಟಕಗಳನ್ನು ನಿರ್ಮಿಸಲಾಗಿದೆ. ಇನ್ನೂ 2 ಘಟಕಗಳು ಪ್ರಗತಿಯಲ್ಲಿರುತ್ತವೆ. ವರ್ಷದ 365 ದಿನಗಳು ತಪ್ಪದೆ ಕುಡಿಯುವ ನೀರನ್ನು ಪೊರೈಸಿದ ದಾಖಲೆ ಹುನಗುಂಡಿ ಗ್ರಾಮ ಪಂಚಾಯತಿ ಯದ್ದಾಗಿರುತ್ತದೆ. ಇದಕ್ಕಾಗಿ ಪಂಚಾಯತಿಯಲ್ಲಿ ಮೋಟಾರ್ ರೀಪೇರಿಗಾಗಿ ಒಬ್ಬ ಮೇಕ್ಯಾನಿಕನಿಗೆ ಒಂದು ವರ್ಷಕ್ಕೆ 1 ಮೋಟಾರಿಗೆ 3 ಸಾವಿರಗಳಿಗೆ ಗುತ್ತಿಗೆಯನ್ನು ನೀಡಿದ್ದು, ಇದರಿಂದ ಮೋಟಾರ ರಿಪೇರಿಗಾಗಿ ಅಲೆಯುವುದು ತಪ್ಪಿದಂತಾಗಿದೆ.

ಈ ರೀತಿಯಾಗಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಸಂಪೂರ್ಣ ಅಭಿವೃದ್ಧಿಗಾಗಿ ಶ್ರಮವಹಿಸಲಾಗುತ್ತಿದೆ.




# ಗ್ರಾಮ ಪಂಚಾಯಿತಿ ಪುನರ್ ವಿಂಗಡಣೆ ಮತ್ತು ಗ್ರಾಮ ಸ್ವರಾಜ್

* ಡಾ॥ ರೇವಯ್ಯ ಒಡೆಯರ್

ಪಂಚಾಯತ್ ರಾಜ್ ವ್ಯವಸ್ಥೆಯ ಆಡಳಿತವನ್ನು ಜನರಲ್ಲಿಗೆ ತೆಗೆದುಕೊಂಡು ಹೋಗಬೇಕೆನ್ನುವ ಮಹಾದಾಸೆಯಿಂದ, 2014ರ ಮಾರ್ಚ್‌ನಲ್ಲಿ ಸರ್ಕಾರವು ಶ್ರೀಯುತ ನಂಜಯ್ಯನ ಮಠರವರ ಅಧ್ಯಕ್ಷತೆಯಲ್ಲಿ 8 ಸದಸ್ಯರ ಗ್ರಾಮ ಪಂಚಾಯಿತಿ ಪುನರ್ ವಿಂಗಡಣಾ ಸಮಿತಿಯನ್ನು ನೇಮಿಸಿತು. ಈ ಸಮಿತಿಯು ವರದಿಯನ್ನು 2014ರ ಅಕ್ಟೋಬರ್ 28ರಂದು ಸರ್ಕಾರಕ್ಕೆ ಸಲ್ಲಿಸಿದೆ. ವರದಿಯಲ್ಲಿ ಸರ್ಕಾರ ಸೂಚಿಸಿದ 4 ಅಂಶಗಳ ಬಗ್ಗೆ ಮತ್ತು ಇತರೆ ಕೆಲ ಶಿಫಾರಸ್ಸುಗಳನ್ನು ಮಾಡಿದೆ. ಪ್ರಸ್ತುತ ದಿನಗಳಲ್ಲಿ ಗ್ರಾಮ ಪಂಚಾಯಿಗಳ ಪುನರ್ ವಿಂಗಡಣೆಯ ಕಾರ್ಯ ಅತ್ಯಗತ್ಯವಾಗಿತ್ತು. ಸುಮಾರು 24 ವರ್ಷಗಳ ಹಿಂದೆ 1991ರ ಜನಗಣತಿಯನ್ನು ಆಧರಿಸಿ ಗ್ರಾಮ ಪಂಚಾಯಿತಿಗಳನ್ನು

**ರಾಜ್ಯದ ಗ್ರಾಮ ಪಂಚಾಯಿತಿಗಳ ಪುನರ್ ವಿಂಗಡಣೆ ಕಾರ್ಯವು ದೇಶದಲ್ಲಿಯೇ ಪ್ರಥಮವಾದದು.**



ಅಂದಿನ ದಿನಮಾನಗಳಿಗೆ ಅನುಗುಣವಾಗಿ ಮತ್ತು ಅಧಿಕಾರಿಗಳ ಅಗತ್ಯಕ್ಕೆ ತಕ್ಕಂತೆ ರಚಿಸಲಾಗಿತ್ತು. ಅದಕ್ಕೂ ಪೂರ್ವದಲ್ಲಿ ಗ್ರಾಮ ಪಂಚಾಯಿತಿ, ಮಂಡಲ ಪಂಚಾಯಿತಿ ಮತ್ತೆ ಗ್ರಾಮ ಪಂಚಾಯಿತಿಗಳಾಗಿ ರಚನೆಯಾಗಿದ್ದವು. ಅದರಲ್ಲಿ ಅನೇಕ ಪಂಚಾಯಿತಿಗಳ ಕೇಂದ್ರಸ್ಥಾನಗಳು ಜನರಿಗೆ ದೂರವಾಗಿಯೇ ಇದ್ದವು. ಇವುಗಳನ್ನು ಸರಿಪಡಿಸುವ ಬೇಡಿಕೆ ಹಾಗೂ ಬೆಳೆದ ಜನಸಂಖ್ಯೆಗೆ ಅನುಗುಣವಾಗಿ ಪಂಚಾಯಿತಿ ರಚನೆಯ ಅವಶ್ಯಕತೆಯನ್ನು ಜನರಿಂದ ಬಂದ 4750ಕ್ಕೂ ಹೆಚ್ಚು ಬೇಡಿಕೆಗಳೇ ಸಾಬೀತು ಪಡಿಸಿವೆ. ಜನರಿಂದ, ಜನ ಪ್ರತಿನಿಧಿಗಳಿಂದ ಅಷ್ಟೇ ಅಲ್ಲ ಆಡಳಿತದ ತೊಡಕು ನಿವಾರಣೆಗಾಗಿ ಅಧಿಕಾರಿಗಳ ಬೇಡಿಕೆಯು ಸಹ ಪುನರ್ ವಿಂಗಡಣೆಯ ಅವಶ್ಯಕತೆಯನ್ನು ಎತ್ತಿ ಹೇಳಿದೆ. ಪ್ರಸ್ತುತ ಶ್ರೀ ನಂಜಯ್ಯನ ಮಠರವರ ಸಮಿತಿಯು ಈ ಬೇಡಿಕೆಯನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದೆ.

*ಜಂಟಿಕಾರ್ಯದರ್ಶಿ, ಗ್ರಾಮ ಪಂಚಾಯತ್ ಪುನರ್ ವಿಂಗಡಣಾ ಸಮಿತಿ ಹಾಗೂ ಸಂಶೋಧನಾ ಮುಖ್ಯಸ್ಥರು, ಕಾಸಂಸು, 11ನೇ ಮಹಡಿ, ವಿಶ್ವೇಶ್ವರಯ್ಯ ಮುಖ್ಯಗೋಪುರ, ಬೆಂಗಳೂರು–01

ಪಂಚಾಯಿತಿ ವ್ಯವಸ್ಥೆಯನ್ನು ಸುಧಾರಿಸುವಲ್ಲಿ ನಾವು ಎಷ್ಟು ಮುತುವರ್ಜಿ ವಹಿಸುತ್ತೇವೆಯೋ ಅಷ್ಟೇ ಕಾಳಜಿಯನ್ನು ಜನರೆಡೆಗೆ ಆಡಳಿತವನ್ನು ತೆಗೆದುಕೊಂಡು ಹೋಗುವ ನಿಟ್ಟಿನಲ್ಲಿ ವಹಿಸಬೇಕು. ಜನಸ್ನೇಹಿ ಮತ್ತು ಜನಸನಿಹದ ಆಡಳಿತಕ್ಕೂ ಪ್ರಾಮುಖ್ಯತೆಯನ್ನು ನೀಡಬೇಕಾಗುತ್ತದೆ. ಆಡಳಿತವು ಜನರ ಸನಿಹದಲ್ಲಿಯೇ ದೊರೆತಾಗ ಮಾತ್ರ ಜನರಿಗೆ ಆಡಳಿತದಲ್ಲಿ ನಂಬಿಕೆ ಬರುತ್ತದೆ ಮತ್ತು ಪಾರದರ್ಶಕತೆ ಸಾಧ್ಯ. ಗ್ರಾಮೀಣ ಜನರಿಗೆ ಸಾಧ್ಯವಾದಷ್ಟು ತಮ್ಮ ಸನಿಹದಲ್ಲಿ ಗ್ರಾಮ ಪಂಚಾಯಿತಿಗಳನ್ನು ಒದಗಿಸುವ ನಿಟ್ಟಿನಲ್ಲಿ ನಂಜಯ್ಯನಮಠ ಸಮಿತಿ ಅಧ್ಯಯನ ಮಾಡಿ ಗ್ರಾಮ ಪಂಚಾಯಿತಿಗಳನ್ನು ಪುನರ್ ವಿಂಗಡಣೆಗೆ ಶಿಫಾರಸ್ಸು ಮಾಡಿದೆ. ಇದು ಒಂದು ನಿಟ್ಟಿನ ಚಿಂತನೆಯಲ್ಲ, ಗಾಂಧೀಜಿಯವರ ಗ್ರಾಮಸ್ವರಾಜ್ಯ ಚಿಂತನೆ, ಭಾರತದ ಇತರೆ ರಾಜ್ಯಗಳಲ್ಲಿರುವ ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ಅಧ್ಯಯಿಸಿ ಮಾಡಲಾಗಿದೆ. ಸಮಿತಿಯು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮತ್ತು ನೆರೆಯ ರಾಜ್ಯಗಳಲ್ಲಿ ಸಂಚರಿಸಿ ಜನರಿಂದ, ಜನ ಪ್ರತಿನಿಧಿಗಳಿಂದ ಸಂಘ-ಸಂಸ್ಥೆಗಳಿಂದ ಮಾಹಿತಿಯನ್ನು ಸಂಗ್ರಹಿಸಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರ ವಿದ್ಯಾ ಮಂಡಳಿಯ ನಕಾಶೆ ತಜ್ಞರ ನೆರವಿನೊಂದಿಗೆ ವೈಜ್ಞಾನಿಕವಾಗಿ ಗ್ರಾಮ ಪಂಚಾಯಿತಿಗಳನ್ನು ಪುನರ್ ವಿಂಗಡಿಸುವ ಪ್ರಯತ್ನ ಮಾಡಿದೆ.

ಸಮಿತಿಗೆ ಮುಖ್ಯವಾಗಿ ಮುಂದಿನ ನಾಲ್ಕು ಅಂಶಗಳ ಕುರಿತಂತೆ ವರದಿ ನೀಡಲು ಸರಕಾರ ಆದೇಶಿಸಿತ್ತು. ಗ್ರಾಮ ಪಂಚಾಯಿತಿಗಳ ಪುನರ್ ರಚನೆ ಬಗ್ಗೆ ಸರ್ಕಾರದಲ್ಲಿ ಈಗಾಗಲೇ ಸ್ವೀಕೃತವಾಗಿರುವ ಮತ್ತು ಸ್ವೀಕೃತಗೊಳ್ಳಲಿರುವ ಮನವಿಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದು. ಗ್ರಾಮ ಪಂಚಾಯತಿಗಳ ಜನಸಂಖ್ಯೆಗಳಿಗನುಗುಣವಾಗಿ ಪ್ರತ್ಯೇಕ ಗ್ರಾಮ ಪಂಚಾಯಿತಿಗಳನ್ನು ರಚಿಸುವ ಅಥವಾ ಸಂಯೋಜಿಸುವ ಅಥವಾ ವಿಭಜಿಸುವ ಬಗ್ಗೆ ಪರಿಶೀಲನೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದು. ಗ್ರಾಮ



ಪಂಚಾಯಿತಿಗಳ ಕೇಂದ್ರ ಸ್ಥಾನವನ್ನು ಬದಲಾಯಿಸುವ ಅಥವಾ ಸ್ಥಳಾಂತರಿಸುವ ಪ್ರಸ್ತಾವನೆಗಳ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಶಿಫಾರಸ್ಸು ಮಾಡುವುದು. ಗ್ರಾಮ ಪಂಚಾಯಿತಿಗಳ ಸದಸ್ಯರ ಸ್ಥಾನಗಳ ಹೆಚ್ಚಳಕ್ಕೆ ಕುರಿತಂತೆ ಸೂಕ್ತ ಶಿಫಾರಸ್ಸು ಮಾಡುವುದು.

ಸಮಿತಿಯು ಆಯಾ ಜಿಲ್ಲೆಗಳಿಗೆ ಹೋಗಿ ಜನರ ಅಹವಾಲುಗಳನ್ನು ಸ್ವೀಕರಿಸಿ, ಪರಿಶೀಲಿಸಿ, 2011ರ ಜನಗಣತಿಯನ್ನು ಆಧರಿಸಿ ಹೊಸದಾಗಿ 439 ಗ್ರಾಮ ಪಂಚಾಯಿತಿಗಳ ರಚನೆಗೆ ಮತ್ತು ಆ ಗ್ರಾಮ ಪಂಚಾಯಿತಿಗಳ ದೊಡ್ಡಗ್ರಾಮಗಳನ್ನು ನಗರ ಸ್ಥಳೀಯ ಸಂಸ್ಥೆಗಳನ್ನಾಗಿ ಮೇಲ್ದರ್ಜೆಗೇರಿಸಲು ಶಿಫಾರಸ್ಸು ಮಾಡಿದೆ. 439 ಗ್ರಾಮ ಪಂಚಾಯಿತಿಗಳಲ್ಲಿ ಕೆಲವು ಪ್ರಕರಣಗಳನ್ನು ವಿಶೇಷ ಪ್ರಕರಣಗಳಡಿ ಪರಿಶೀಲಿಸಿ ಅಲ್ಲಿನ ಜನತೆಯ ಹಿತದೃಷ್ಟಿಯಿಂದ ಪಂಚಾಯಿತಿ ರಚನೆಗೆ ಶಿಫಾರಸ್ಸು ಮಾಡಿದೆ. ಉದಾಹರಣೆಗೆ ಚಾಮರಾಜ ನಗರ ಜಿಲ್ಲೆಯಲ್ಲಿ ಸೋಲಿಗರು ವಾಸಿಸುವ ಬಿಳಿಗಿರಿ ರಂಗನ ಬೆಟ್ಟ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೆಳವರು ವಾಸಿಸುವಂತಹ ಹರಳಘಟ್ಟದಂತಹ ಕಂದಾಯೇತರ ಗ್ರಾಮಗಳನ್ನು ಹೊಸ ಪಂಚಾಯಿತಿಗಾಗಿ ಶಿಫಾರಸ್ಸು ಮಾಡಲಾಗಿದೆ. ಗ್ರಾಮ ಪಂಚಾಯತಿಗಳ ಕೇಂದ್ರ ಸ್ಥಾನವನ್ನು ಬದಲಾಯಿಸುವ ಕುರಿತಂತೆ ಸಮಿತಿಗೆ ನೂರಕ್ಕೂ ಹೆಚ್ಚು ಅಹವಾಲುಗಳು ಬಂದವು. ಅವುಗಳ ಹಿಂದೆ ಎಷ್ಟೇ ರಾಜಕೀಯ ಒತ್ತಡವಿದ್ದರೂ ಸಮಿತಿಯು ಕೇಂದ್ರ ಸ್ಥಾನಗಳನ್ನು ಬದಲಾಯಿಸುವ ಒಂದೇ ಒಂದು



ಪ್ರಕರಣವನ್ನೂ ಶಿಫಾರಸ್ಸು ಮಾಡಿಲ್ಲ. ಕಾರಣ ಈಗಾಗಲೇ ಆ ಪಂಚಾಯಿತಿಯು ಮೂಲಭೂತ ಸೌಲಭ್ಯಗಳನ್ನು ಹೊಂದಿರುತ್ತದೆ. ಅವುಗಳನ್ನು ವರ್ಗ ಮಾಡುವುದು ಸರ್ಕಾರಕ್ಕೆ ಕಷ್ಟ ಮತ್ತು ಜನತೆಯ ನಡುವೆ ಭಿನ್ನಾಭಿಪ್ರಾಯವನ್ನು ಸಮಿತಿಯೇ ಸೃಷ್ಠಿ ಮಾಡಿದಂತಾಗುತ್ತದೆ. ಸಾಧ್ಯವಾದಲ್ಲಿ ಹೊಸ ಪಂಚಾಯಿತಿ ರಚನೆಗೆ ಶಿಫಾರಸ್ಸು ಮಾಡಲಾಗಿದೆ.

ರಾಜ್ಯದ ಗ್ರಾಮ ಪಂಚಾಯಿತಿಗಳ ಪುನರ್ ವಿಂಗಡಣೆ ಕಾರ್ಯವು ದೇಶದಲ್ಲಿಯೇ ಪ್ರಥಮವಾದದು. ಪುನರ್ ರಚನೆ ಎಂಬುದು ಅಷ್ಟೊಂದು ಸುಲಲಿತವಾದ ಕಾರ್ಯವೇನಲ್ಲ. ಲೋಕಸಭೆ ಮತ್ತು ವಿಧಾನ ಸಭೆ ಕ್ಷೇತ್ರಗಳ ಪುನರ್ ವಿಂಗಡಣೆ ಸವಾಲುಗಳನ್ನು ಎದುರಿಸಿಯಾಗಿದೆ. ಅಂತಹುದೇ ಮತ್ತೊಂದು ತೆರನಾದ ಸವಾಲು ಇದು. ಗ್ರಾಮ ಪಂಚಾಯಿತಿ ಪುನರ್ ವಿಂಗಡಣೆ ಎಂಬುದು ಜೇನು ಗೂಡಿಗೆ ಕಲ್ಲೆಸೆದಂತೆ. ಇದನ್ನರಿತು ಸಮಿತಿ ಕಾರ್ಯ ನಿರ್ವಹಿಸಿದೆ. ಸಮಿತಿಯು ಅತ್ಯಂತ ಕಡಿಮೆ ಅವಧಿಯಲ್ಲಿ ರಾಜ್ಯದಾದ್ಯಂತ ಸಂಚರಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಸಮಿತಿಯು ಕೇವಲ ಗ್ರಾಮ ಪಂಚಾಯಿತಿಗಳ ಪುನರ್ ವಿಂಗಡಣೆಯ ಶಿಫಾರಸ್ಸು ಜೊತೆಗೆ ಹೊಸ ಗ್ರಾಮ ಪಂಚಾಯಿತಿಗಳ ರಚನೆಯಾದ ನಂತರ ಉದ್ಭವಿಸಬಹುದಾದ ಅಂಶಗಳನ್ನ ಸ್ಪಷ್ಟಪಡಿಸಿದೆ. ಗ್ರಾಮ ಪಂಚಾಯಿತಿಯ ಅಧ್ಯಕ್ಷರ ನೇರ ಆಯ್ಕೆಗೆ ಶಿಫಾರಸ್ಸು ಮಾಡಿದೆ. ಇದು 30 ಜಿಲ್ಲೆಗಳಲ್ಲಿ ಅಹವಾಲು ಸ್ವೀಕಾರ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಗಳ ಪ್ರತಿನಿಧಿಗಳಿಂದ ವ್ಯಕ್ತವಾದ ನಿಲುವು. ಈ ನಿಲುವನ್ನು ಯಾರೊಬ್ಬರೂ ವಿರೋಧಿಸಿಲ್ಲ. ರೆಸಾರ್ಟ್ ರಾಜಕಾರಣವನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲೂ ಅನುಭವಿಸಿದವರು ನೀಡಿದ ಅಭಿಪ್ರಾಯ ಇದಾಗಿದೆ. ಗ್ರಾಮ ಪಂಚಾಯಿತಿ ಸದಸ್ಯನಾಗಿ ಚುನಾಯಿತನಾಗಲು ಕನಿಷ್ಠ ವಿದ್ಯಾರ್ಹತೆ ನಿಗದಿಗೊಳಿಸಲು ಕೇಳಿದ್ದು ಇನ್ನೊಂದು ಪ್ರಮುಖ ಅಭಿಪ್ರಾಯ. ಇದನ್ನು ಸಮಿತಿ ಶಿಫಾರಸ್ಸು ಮಾಡಲಿಲ್ಲ. ಶಾಸಕರಿಗೆ ಇಲ್ಲದ ವಿದ್ಯಾರ್ಹತೆ ಇವರಿಗೇಕೆ ಎನ್ನುವುದು ತೇಲುಮಾತಿನ ಉತ್ತರ. ನಮ್ಮ ಗ್ರಾಮಗಳಲ್ಲಿನ 21 ವರ್ಷ ಮೇಲ್ಪಟ್ಟ ಯುವಕರು ಇನ್ನೂ ಅನಕ್ಷರರು. ಈ ವಿದ್ಯಾರ್ಹತೆ ನಿಗದಿ ಮಾಡಿದರೆ ಯಾರೂ ಚುನಾವಣೆಗೆ ಸ್ಪರ್ಧಿಸಲು ಸಾಧ್ಯವೇ ಇಲ್ಲದಂತಾಗುತ್ತದೆ. ಆದರೆ ಕನಿಷ್ಠ ವಿದ್ಯಾರ್ಹತೆ ಮಾಡುವುದು ಸೂಕ್ತವೆನಿಸುತ್ತದೆ. ಏಕೆಂದರೆ ಯಾವುದೇ ಜನಪ್ರತಿನಿಧಿಗಳಿಗೆ (ಶಾಸಕರು, ಸಂಸದರಿಗೂ) ಇಲ್ಲದ ಬ್ಯಾಂಕ್ ಚೆಕ್‌ಗಳಿಗೆ ಸಹಿ ಮಾಡುವ ಅಧಿಕಾರ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗಿದೆ ಮತ್ತು ನರೇಗಾ ಯೋಜನೆಗಳಲ್ಲಿ ಅವ್ಯವಹಾರ ನಡೆದಿರುವುದು ಅಧ್ಯಕ್ಷರಿಗಿರುವ ಅಕ್ಷರ ಜ್ಞಾನದ ಕೊರತೆಯಿಂದಾಗಿ. ಹೀಗಾಗಿ ವಿಧ್ಯಾರ್ಹತೆ ಅಗತ್ಯ ವೆನಿಸುತ್ತದೆ.

ಗ್ರಾಮ ಪಂಚಾಯಿತಿಗೆ ಹೆಚ್ಚಿನ ಅಧಿಕಾರಗಳನ್ನು ನೀಡಲು ಸಮಿತಿ ತಿಳಿಸಿದೆ. ಉದಾಹರಣೆ ಗ್ರಾಮ ಪಂಚಾಯಿತಿಯಲ್ಲಿ ಏಕ ಗವಾಕ್ಷಿ ವ್ಯವಸ್ಥೆ ಜಾರಿಗೆ ಬರಬೇಕು. ಸಾಮಾಜಿಕ ಭದ್ರತೆ ಯೋಜನೆಗಳನ್ನು ಗ್ರಾಮ ಪಂಚಾಯಿತಿಗಳ ಮೂಲಕ ಗುರುತಿಸಿ ಅವುಗಳಿಂದ ಹಣಕಾಸಿನ ಸಹಾಯ ನೆರವು ನೀಡಬೇಕು. ಆದಾಯ, ಜಾತಿ, ಜನನ/ಮರಣ ಪ್ರಮಾಣ ಪತ್ರಗಳು, ವೃದ್ಧಾಪ್ಯ ವೇತನ, ವಿಧವಾ ವೇತನ, ವಿಕಲ ಚೇತನರ ವೇತನಗಳ ನೀಡಿಕೆ ಸಹ ಗ್ರಾಮ ಪಂಚಾಯಿತಿಯ ಕಾರ್ಯವಾಗಬೇಕು. ಸಿಬ್ಬಂದಿಯನ್ನು ಹೆಚ್ಚಿಸಬೇಕು ಮತ್ತು ತರಬೇತುಗೊಳಿಸಬೇಕು.

ಯಾವುದೇ ಉದ್ದೇಶಕ್ಕಾಗಿ ನೇಮಕಗೊಂಡಿರುವ

ಸಮಿತಿಗಳು ತಮಗೆ ವಹಿಸಿದ ಮತ್ತು ಅದಕ್ಕೆ ಸಂಬಂಧಿಸಿದ ಸಂಗತಿಗಳ ಕುರಿತಂತೆ ಸಲಹೆಗಳನ್ನು ನೀಡುತ್ತವೆ. ಆದರೆ ಇತ್ತೀಚಿನ ದಿನಗಳಲ್ಲಿ ಸಮಿತಿಗಳು ನಿರ್ದಿಷ್ಟಪಡಿಸಿದ ಸಂಗತಿಗೆ ಮಾತ್ರ ಶಿಫಾರಸ್ಸು ಮಾಡಬೇಕು ಅದರಾಚೆ ಚರ್ಚೆಯನ್ನೇ ಮಾಡಬಾರದು ಎಂಬುದು ಕೆಲವರ ಧೋರಣೆಯಾಗಿದೆ. ಶ್ರೀ ನಂಜಯ್ಯನ ಮಠ ಅಧ್ಯಕ್ಷತೆಯ ಸಮಿತಿ ತನ್ನ ಮಿತಿಯಲ್ಲಿಯೇ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ ವಿಷಯಗಳಿಗೆ ಮಾತ್ರ ಸಲಹೆ ನೀಡಿದೆ. ಗಾಂಧೀಜಿ ಕಂಡ ಗ್ರಾಮ ಸ್ವರಾಜ್ಯದ ಪಥ ಹೇಗಿರಬೇಕೆಂಬುದನ್ನು ಸೂಚಿಸಿದೆ. ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಪಂಚಾಯಿತಿ ವ್ಯವಸ್ಥೆ ನಡೆದು ಬಂದ ಬಗ್ಗೆ, ಪ್ರಸ್ತುತ ಗ್ರಾಮ ಪಂಚಾಯಿತಿಗಳ ವಿಂಗಡಣೆಯ ಅವಶ್ಯಕತೆ ಬಗ್ಗೆ ಸುದೀರ್ಘವಾದ ಚರ್ಚೆಯನ್ನು ಮಾಡಿದೆ. ಯಾವುದೇ ಸಂಗತಿಯನ್ನು ವಿವಿಧ ಮಗ್ಗಲುಗಳಿಂದ ಅರಿಯಬೇಕಾಗುತ್ತದೆ. ಜನರು ಸಮಿತಿಗೆ ತಿಳಿಸಿದ ಸಂಗತಿಗಳನ್ನು ಸರ್ಕಾರದ ಗಮನಕ್ಕೆ ತರುವ ಉದ್ದೇಶದಿಂದ ಶ್ರೀ ನಂಜಯ್ಯನ ಮಠ ಸಮಿತಿ ಶಿಫಾರಸ್ಸುಗಳನ್ನು ನೀಡಿದೆ.

ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಜನರು ನೇರವಾಗಿ ಪಾಲ್ಗೊಳ್ಳಬೇಕು. ಅಭಿವೃದ್ಧಿಯು ಜನರನ್ನು ಆವರಿಸಿಕೊಳ್ಳಬೇಕೇ ಹೊರತು, ಜನರು ಅಭಿವೃದ್ಧಿಯ ಹಿಂದೆ ಸುತ್ತುವರಿಯಬಾರದು. ಆಡಳಿತ ವ್ಯವಸ್ಥೆಯನ್ನು ಹುಡುಕಿಕೊಂಡು ಜನರು ವಿವಿಧ ಕಚೇರಿಗಳಿಗೆ ಎಡತಾಕುವುದರ ಬದಲು, ಆಡಳಿತ ವ್ಯವಸ್ಥೆಯೇ ಜನರ ಮನೆ ಬಾಗಿಲಿಗೆ ತಲುಪಬೇಕು. ಜನರಿಗಾಗಿ ಆಡಳಿತವೇ ಹೊರತು, ಆಡಳಿತಕ್ಕಾಗಿ ಜನರು ಅಲ್ಲ. ಅದೇ ರೀತಿಯಲ್ಲಿ ಜನರಿಗಾಗಿ ಅಭಿವೃದ್ಧಿ. ಅಭಿವೃದ್ಧಿಯ ರೀತಿ-ನೀತಿಗಳಲ್ಲಿ ಬಡ ಜನರು, ಮಹಿಳೆಯರು, ಮಕ್ಕಳು ಮುಖ್ಯ ಕೇಂದ್ರ ಬಿಂದುವಾಗಿರಬೇಕು. ಇಂದಿಗೂ ಸಹ ಒಂದು ಗ್ರಾಮದ ಜನತೆ ಪಂಚಾಯಿತಿಯ ಕೇಂದ್ರ ಸ್ಥಾನಕ್ಕೆ ಹೋಗಬೇಕಾದರೆ ಹಲವು ಕಿ.ಮೀ.ಗಳವರೆಗೆ ಸಾಗಬೇಕಾದ ಪರಿಸ್ಥಿತಿಯು ಕರ್ನಾಟಕದಲ್ಲಿದೆ. ಇಂತಹ



ಕೆಲ ದೂರುಗಳನ್ನು ಬಗೆಹರಿಸದ ನೋವು ಸಮಿತಿಗೆ ಕಾಡಿತು. ಇದಕ್ಕೆ ಕಾರಣ ಕಂದಾಯೇತರ ಗ್ರಾಮ, ಗಡಿ/ಅರಣ್ಯ ಪ್ರದೇಶ ಮತ್ತು ಜನಸಂಖ್ಯಾ ಮಾಹಿತಿಯ ಕೊರತೆ.

ಸರಕಾರಗಳು ಇರುವುದೇ ಜನರಿಗಾಗಿ. ಈ ನಿಟ್ಟಿನಲ್ಲಿ, ಅವುಗಳು ಜನರ ಕಲ್ಯಾಣಕ್ಕಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲೇಬೇಕಾಗುತ್ತದೆ. ಜಾಗತೀಕರಣದಂತಹ ಇಂದಿನ ಪರಿಸ್ಥಿತಿಯಲ್ಲಿ, ಮಾರುಕಟ್ಟೆಗಳ ಶಕ್ತಿಗಳು ಪ್ರಬಲಗೊಂಡು, ಸರ್ಕಾರದ ಪಾತ್ರ ಕಿರಿದಾಗುತ್ತಿದೆ. ಮಾರುಕಟ್ಟೆ, ಖಾಸಗೀಕರಣ ವ್ಯವಸ್ಥೆಯಲ್ಲಿ, ಬಡವರು, ನಿರ್ಗತಿಕರು, ಮಹಿಳೆಯರು, ಅಲಕ್ಷಿತ ಸಮುದಾಯಗಳು, ಅಂಚಿಗೆ ತಳ್ಳಲ್ಪಡುವ ಸಾಧ್ಯತೆ ಇರಬಹುದು. ಇಂತಹ ಸನ್ನಿವೇಶದಲ್ಲಿ ಸರಕಾರ ಈ ಎಲ್ಲಾ ಸಮುದಾಯಗಳ ಹಿತವನ್ನು ಕಾಯಬೇಕಾಗುತ್ತದೆ. ಸರಕಾರವೇ ಎಲ್ಲವನ್ನು ಮಾಡಲು ಸಾಧ್ಯವಾಗದಿದ್ದರೂ, ತನಗೆ ಲಭ್ಯವಿರುವ ಆರ್ಥಿಕ ಸಂಪನ್ಮೂಲಗಳ, ಸಾಧನ ಸೌಕರ್ಯಗಳ ಹಿನ್ನೆಲೆಯಲ್ಲಿ ತನ್ನ ಪ್ರಯತ್ನವನ್ನು ಮಾಡಬೇಕಾಗುತ್ತದೆ.

ಗಾಂಧೀಜಿಯವರು ಹೇಳುವಂತೆ, ಗ್ರಾಮಗಳ ಉದ್ಧಾರವಾಗದ ಹೊರತು ಭಾರತ ಉದ್ಧಾರ ವಾಗಲಾರದು. ಗ್ರಾಮಗಳ ಅಭಿವೃದ್ಧಿಗಾಗಿ, ನಾವು ಕೆಲವು ಮಾನದಂಡಗಳನ್ನು ಹಾಕಿಕೊಂಡು ಅವುಗಳನ್ನು ಸಾಧಿಸುವತ್ತ ಗಮನಹರಿಸಿದ್ದಾದರೆ, ಅಂತಹ ಗ್ರಾಮಗಳು ಮಾದರಿ ಗ್ರಾಮಗಳು ಅಥವಾ ಗ್ರಾಮ ಪಂಚಾಯತಿಗಳು



ಆಗುವುದರಲ್ಲಿ ಸಂದೇಹವಿಲ್ಲ. ಈಗಾಗಲೇ ಸರಕಾರಗಳು ಗ್ರಾಮಗಳ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳು ಮತ್ತು ನೀತಿಗಳನ್ನು ಜಾರಿಗೆ ತಂದಿವೆಯಾದರೂ, ಅವುಗಳ ಫಲವು, ಸರಕಾರಗಳ, ಜನರ ನಿರೀಕ್ಷೆಗಳ ಮಟ್ಟದಲ್ಲಿಲ್ಲ. ಕೇವಲ ಒಂದು ವಲಯವನ್ನು ಕೇಂದ್ರೀಕರಣ ವಾಗಿಟ್ಟುಕೊಳ್ಳುವುದಕ್ಕಿಂತ ಹಲವಾರು ವಲಯಗಳನ್ನು ಏಕಕಾಲದಲ್ಲಿಯೇ ಅಭಿವೃದ್ಧಿಯತ್ತ ತೆಗೆದುಕೊಂಡು ಹೋಗುವಂತಹ ಪ್ರಯತ್ನಗಳು ಆಗಬೇಕಾಗಿವೆ.

ಗ್ರಾಮ ಪಂಚಾಯಿತಿಗಳು ಪಂಚಾಯತ್ ರಾಜ್ ವ್ಯವಸ್ಥೆಯ ಅತ್ಯಂತ ತಳಮಟ್ಟದ ಸಂಸ್ಥೆಗಳು. ಇವು ಜನರಿಗೆ ನೇರವಾಗಿ ಸೇವೆಗಳನ್ನು ನೀಡುವ ಸಂಸ್ಥೆಗಳು. ಇಂಥ ಸಂಸ್ಥೆಗಳು ದಕ್ಷ ರೀತಿಯಲ್ಲಿ ಕಾರ್ಯನಿರ್ವಹಿಸಬೇಕಾದರೆ, ಅವುಗಳ ಮೇಲಿರುವ ಕೆಲವು ಒತ್ತಡಗಳನ್ನು ಕಡಿಮೆ ಮಾಡಬೇಕಾಗುತ್ತದೆ. ಗ್ರಾಮ ಪಂಚಾಯಿತಿಗಳ ಆಡಳಿತ ಸೇವೆಗಳು ಜನರಿಗೆ ಸುಲಭದಲ್ಲಿ ದೊರೆತರೆ, ಸರಕಾರಗಳು ಒಳ್ಳೆಯ ಆಡಳಿತ ನೀಡಿದಂತಾಗುತ್ತದೆ. ಒಂದು ಆಡಳಿತ ಸಂಸ್ಥೆಯ ಗಾತ್ರ (ಭೌಗೋಳಿಕ ಮತ್ತು ಜನಸಂಖ್ಯೆ) ಅಧಿಕವಾದರೆ, ಆ ಸಂಸ್ಥೆಯು ದಕ್ಷತೆಯಿಂದ ಕೆಲಸ ನಿರ್ವಹಿಸಲು ಸಾಧ್ಯವಾಗದೇ ಹೋಗಬಹುದು. ಆಡಳಿತ ಮತ್ತು ಸೇವೆಗಳನ್ನು ನೀಡುವ ಸಂಸ್ಥೆಗಳ ಗಾತ್ರ ಮತ್ತು ಭೌಗೋಳಿಕ ವಿಸ್ತೀರ್ಣದ ದೃಷ್ಟಿಯಿಂದ ಚಿಕ್ಕವಾಗಿದ್ದರೆ, ಆಡಳಿತವನ್ನು ದಕ್ಷ ರೀತಿಯಿಂದ ನಿರ್ವಹಿಸಲು ಸಾಧ್ಯವಾಗುತ್ತದೆ. ಆಡಳಿತದಲ್ಲಿ ದಕ್ಷತೆಯನ್ನು ತರುವ ಮೂಲಕ ಜನರ ಸಬಲೀಕರಣಕ್ಕೆ ಸಾಧ್ಯವಾಗುತ್ತದೆ.

ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ವಿಕೇಂದ್ರೀಕರಣದ ಪ್ರಮುಖ ಆಶಯವೇ ಆಡಳಿತ ಮತ್ತು ಅಭಿವೃದ್ಧಿ ಕಾರ್ಯಗಳು ಜನ ಕೇಂದ್ರಿತ ವಾಗಿರಬೇಕೆನ್ನುವುದು. ಕರ್ನಾಟಕದಲ್ಲಿ ಸಂವಿಧಾನದ 73ನೇ ತಿದ್ದುಪಡಿಯ ನಂತರ ಪಂಚಾಯತ್ ರಾಜ್ ವ್ಯವಸ್ಥೆಯು ಹೆಚ್ಚು ಸಂವಿಧಾನಬದ್ಧವಾಗಿ ಅನುಷ್ಠಾನಗೊಂಡಿತು. 1991ರ ಜನಸಂಖ್ಯೆಯ ಆಧಾರದ ಮೇಲೆ ಅಂದು ಗ್ರಾಮ ಪಂಚಾಯತಿಗಳು ಅಸ್ತಿತ್ವಕ್ಕೆ ಬಂದವು. 1991ರಲ್ಲಿ ಕರ್ನಾಟಕದಲ್ಲಿ ಗ್ರಾಮೀಣ ಜನಸಂಖ್ಯೆಯ ಪ್ರಮಾಣ 3,10,69,413 ಆಗಿದ್ದು, ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ.69.08 ರಷ್ಟು ಗ್ರಾಮೀಣ ಜನಸಂಖ್ಯೆ ಇತ್ತು. 2011ರ ಜನಗಣತಿ ಪ್ರಕಾರ ರಾಜ್ಯದ ಗ್ರಾಮೀಣ ಜನಸಂಖ್ಯೆಯ ಪ್ರಮಾಣ 3,74,69,335 ಆಗಿದೆ. ಅಂದರೆ ಎರಡು ದಶಕಗಳ ಅವಧಿಯಲ್ಲಿ ಕರ್ನಾಟಕದ ಗ್ರಾಮೀಣ ಭಾಗದ ಜನಸಂಖ್ಯೆಯಲ್ಲಿ ಶೇ.17.08 ರಷ್ಟು ಜನಸಂಖ್ಯೆ ಏರಿಕೆಯಾಗಿದೆ. ಅಲ್ಲದೆ 2011 ಜನಗಣತಿ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ.61.32 ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಪ್ರಸ್ತುತ ಇರುವ ಗ್ರಾಮ ಪಂಚಾಯಿತಿಗಳು ಮತ್ತು ಪಂಚಾಯತಿಗಳ ಸದಸ್ಯರ ಸಂಖ್ಯೆಯನ್ನು 1991 ರ ಜನಗಣತಿಯ ಆಧಾರದ ಮೇಲೆ ನಿರ್ಧರಿಸಲಾಗಿದೆ. ಅಂದರೆ, ಈ ವ್ಯವಸ್ಥೆ ಬಂದು ಎರಡು ದಶಕಗಳು ಸಂದಿವೆ. ಅಲ್ಲದೆ 2001 ಮತ್ತು 2011ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಗ್ರಾಮೀಣ ಜನಸಂಖ್ಯೆಯಲ್ಲಿ ಶೇ. 6.89ರಷ್ಟು ಏರಿಕೆಯಾಗಿದೆ. ಜನಸಂಖ್ಯೆಯ ಹೆಚ್ಚಳದ ಹಿನ್ನಲೆಯಲ್ಲಿ ಗ್ರಾಮ ಪಂಚಾಯಿತಿಗಳ ಸಂಖ್ಯೆಗಳನ್ನು ಹೆಚ್ಚಿಸುವ ಅಗತ್ಯವಿದೆ.

ಇಂದಿಗೂ ಕರ್ನಾಟಕದಲ್ಲಿ ಶೇ.61.32 ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದಾರೆ. ಗ್ರಾಮ

ಆಡಳಿತ ಘಟಕಗಳಾದ ಗ್ರಾಮ ಪಂಚಾಯಿತಿಗಳ ಗಾತ್ರ ಒಂದು ಮಾದರಿ ರೂಪದಲ್ಲಿದ್ದರೆ, ಜನರಿಗೆ ಸೂಕ್ತ ಸೇವೆಗಳನ್ನು ಒದಗಿಸಲು ಸಾಧ್ಯವಾಗುತ್ತದೆ. ಜನರು ಸಹ ಆಡಳಿತ ಮತ್ತು ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ನೆರವಾಗುತ್ತದೆ. ಆಡಳಿತ ಘಟಕಗಳು ದೊಡ್ಡದಾದಂತೆ, ಆ ಸಂಸ್ಥೆಗಳು ಜನರಿಂದ ದೂರವಾಗುವ ಸಾಧ್ಯತೆ ಹೆಚ್ಚು.

ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ, ಮೂಲಭೂತ ವ್ಯವಸ್ಥೆಗಳನ್ನು ದಕ್ಷ ರೀತಿಯಲ್ಲಿ ಜಾರಿಗೆ ತರಲು ಸಹ ಈಗಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯವಿದೆ. ಪಂಚಾಯಿತಿಗಳ ಗಾತ್ರ ಅಧಿಕವಾದಂತೆ, ಸಾರ್ವಜನಿಕ ವಿತರಣಾ ವ್ಯವಸ್ಥೆಗಳು ಪರಿಣಾಮಕಾರಿ ಮತ್ತು ಹೆಚ್ಚು ಫಲಕಾರಿಯಾಗಲಾರವು ಎಂದು ಹೇಳಬಹುದು. ಇಂದು ಗ್ರಾಮ ಪಂಚಾಯಿತಿಗಳಿಗೆ ಹಲವಾರು ಕಾರ್ಯಗಳನ್ನು ನಿಯೋಜಿಸಲಾಗುತ್ತಿದೆ. ಮಾಹಿತಿ ಹಕ್ಕು, ಸಕಾಲ ಕಾಯ್ದೆಗಳು ಜಾರಿಯಾಗಿ ಪಂಚಾಯಿತಿಗಳ ಜವಾಬ್ದಾರಿಯನ್ನು ಹೆಚ್ಚಿಸಿವೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣಾ ಉದ್ಯೋಗ ಖಾತ್ರಿಯಂಥ ಬೃಹತ್ ಕಾರ್ಯಕ್ರಮಗಳ ಅನುಷ್ಠಾನದ ಜವಾಬ್ದಾರಿಯನ್ನು ಪಂಚಾಯಿತಿಗಳಿಗೆ ವಹಿಸಲಾಗಿದೆ. ಈ ಕಾರ್ಯಕ್ರಮವನ್ನು ಅನುಷ್ಠಾನ ಮಾಡದ ಪಂಚಾಯಿತಿಗಳು ಕರ್ನಾಟಕದಲ್ಲಿವೆ. ಈ ಕಾರ್ಯಕ್ರಮ ಬಡ ಜನತೆಯ ದುಡಿಯುವ ಶಕ್ತಿಗೆ ಮಾನ್ಯತೆ ನೀಡುತ್ತದೆ. ಆದರೆ ಈ ಕಾರ್ಯಕ್ರಮ ಜಾರಿಯಾಗದ ಪಂಚಾಯಿತಿಯಲ್ಲಿ ಬಡವರಿಲ್ಲವೋ? ಇದ್ದರೂ ಕಾರ್ಯಕ್ರಮದ ಅವಶ್ಯಕತೆ ಇಲ್ಲವೋ? ಅವಶ್ಯಕತೆ ಇದ್ದರೂ ಪಂಚಾಯಿತಿ ಜಾರಿ ಮಾಡಿಲ್ಲವೋ? ಅಥವಾ ಬೇರೆ ಕಾರಣಗಳಿವೆಯೋ ಎಂಬುದನ್ನು ಸರ್ಕಾರ ಮನವರಿಕೆ ಮಾಡಿಕೊಳ್ಳ ಬೇಕಾಗಿದೆ.

ಸ್ಥಳೀಯ ಆಡಳಿತದಲ್ಲಿ ಗ್ರಾಮ ಸಭೆಗಳ ಪಾತ್ರ ಬಹು ದೊಡ್ಡದು. ಗ್ರಾಮ ಸಭೆಗಳು ಅಥವಾ ವಾರ್ಡು



ಸಭೆಗಳು ಸ್ಥಳೀಯ ವಿಷಯಗಳ ಕುರಿತಂತೆ ನಿರ್ಧಾರಗಳನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಜನರಿಗೆ ಭಾಗವಹಿಸುವ ಅಧಿಕಾರವನ್ನು ನೀಡುತ್ತವೆ. ಹಾಗಾಗಿ ಗ್ರಾಮದ ಪ್ರತಿಯೊಬ್ಬ ಪ್ರಜೆ ಈ ನಿರ್ಣಾಯಕ ಪ್ರಕ್ರಿಯೆಯಲ್ಲಿ ಇರುತ್ತಾನೆ. ಗ್ರಾಮ ಸಭೆಗಳ ಯಶಸ್ವಿ ಅನುಷ್ಠಾನ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಬಲೀಕರಣ ಇವೆರಡರ ನಡುವೆ ನೇರ ಸಂಬಂಧವಿದೆ. ಜನರು ಪಂಚಾಯತ್ ಮತ್ತು ವಿಕೇಂದ್ರೀಕರಣ ಪ್ರಕ್ರಿಯೆಗಳಲ್ಲಿ ಭಾಗವಹಿಸದೆ ಹೋದರೆ, ಪಂಚಾಯತ್ ರಾಜ್ ವ್ಯವಸ್ಥೆಯ ಧ್ಯೇಯ ಸಫಲವಾಗದೆ ಹೋಗಬಹುದು. ಗ್ರಾಮ ಪಂಚಾಯಿತಿಗಳು ನಿರ್ದಿಷ್ಟ ಗಾತ್ರದಲ್ಲಿ ಇದ್ದರೆ ಮಾತ್ರ ಜನರು ಗ್ರಾಮ ಸಭೆಗಳಲ್ಲಿ ಭಾಗವಹಿಸಲು ಸಾಧ್ಯವಾಗಿ ಪಂಚಾಯತ್ ರಾಜ್ ಸಂಸ್ಥೆಗಳ ಸದೃಢತೆ ಮತ್ತು ಬಲಿಷ್ಠತೆಯ ಧ್ಯೇಯ ಈಡೇರುತ್ತದೆ. ಇಲ್ಲವೆಂದಾದರೆ, ಜನರ ಪಾಲ್ಗೊಳ್ಳುವಿಕೆ ಇಲ್ಲದೆ ಪಂಚಾಯತ್ ಸಂಸ್ಥೆಗಳು ಕೊರಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ನಮ್ಮ ಸಂವಿಧಾನದಲ್ಲಿ ಜನಸಂಖ್ಯೆ ಮತ್ತು ಭೌಗೋಳಿಕ ವಿಸ್ತಾರಕ್ಕೆ ಸಂಬಂಧಿಸಿದಂತೆ, ಗ್ರಾಮ ಪಂಚಾಯಿತಿಗಳು ಇಷ್ಟೇ ಜನರನ್ನು ಹೊಂದಿರಬೇಕು ಮತ್ತು ಇಷ್ಟೇ ಭೌಗೋಳಿಕ ವಿಸ್ತೀರ್ಣ ಇರಬೇಕೆಂಬ ಆಶಯ ಇಲ್ಲ. ಆದರೆ, ಪಂಚಾಯಿತಿಗಳು ಪಾರದರ್ಶಕವಾಗಿ ಜನಕೇಂದ್ರೀತ ನೆಲೆಯಲ್ಲಿ, ಜನರ ಸಹಭಾಗಿತ್ವವಾದಿ ನೆಲೆಯಲ್ಲಿ ಕಾರ್ಯನಿರ್ವಹಿಸಬೇಕಾದರೆ, ಅವುಗಳಿಗೆ ಹೆಚ್ಚಿನ ಜನಸಂಖ್ಯಾ ಒತ್ತಡ ಇರುವುದು ಸರಿಯಲ್ಲ.

ಕೇರಳ, ಪಶ್ಚಿಮ ಬಂಗಾಳ ಮತ್ತು ಅಸ್ಸಾಂಗಳಲ್ಲಿದ್ದಂತೆ ಗ್ರಾಮ ಪಂಚಾಯಿತಿಗಳ ಗಾತ್ರ ದೊಡ್ಡದಾಗಿದ್ದರೆ, ಜನರ ಮತ್ತು ಗ್ರಾಮ ಪಂಚಾಯಿತಿಗಳ ನಡುವಿನ ಸಂಪರ್ಕದ ಅಂತರಗಳು ದೂರವಾಗಿರುತ್ತವೆ. ಸಣ್ಣ ಸಣ್ಣ ಪ್ರದೇಶಗಳನ್ನು ಕಡೆಗಣಿಸುವ, ನಿರ್ಲಕ್ಷಿಸುವಂತಹ ಪರಿಸ್ಥಿತಿಗಳು ಸಹ ಉದ್ಭವಿಸಬಹುದು.

## ಭಾರತದ ಪ್ರಮುಖ ರಾಜ್ಯಗಳಲ್ಲಿರುವ ಗ್ರಾಮ ಪಂಚಾಯಿತಿಗಳ ವಿವರಗಳ ಪಟ್ಟಿ

ಕೇಂದ್ರ ಯೋಜನಾ ಇಲಾಖೆ ಮತ್ತು ಪಂಚಾಯತ್ ರಾಜ್ ಸಚಿವಾಲಯ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ

| ಕ್ರ.ಸಂ. | ರಾಜ್ಯಗಳು | ಗ್ರಾಮೀಣಾ ಜನಸಂಖ್ಯೆ (2001ರ ಜನಗಣತಿ) | ಗ್ರಾಮ ಪಂಚಾಯಿತಿಗಳು | ಪ್ರತಿ ಗ್ರಾಮ ಪಂಚಾಯಿತಿ ಸರಾಸರಿ ಜನಸಂಖ್ಯೆ |
|---|---|---|---|---|
| 01 | ಕರ್ನಾಟಕ | 3,48,89,033 | 5653 (5629) | 6173 |
| 02 | ಆಂಧ್ರಪ್ರದೇಶ | 5,54,01,067 | 21,825 | 2528 |
| 03 | ಗುಜರಾತ್ | 3,17,40,767 | 13,819 | 2297 |
| 04 | ಮಧ್ಯಪ್ರದೇಶ | 4,43,80,878 | 23,051 | 2051 |
| 05 | ರಾಜಸ್ಥಾನ | 4,32,92,813 | 9188 | 4712 |
| 06 | ಹರಿಯಾಣ | 1,50,29,260 | 6187 | 2429 |
| 07 | ತಮಿಳುನಾಡು | 3,49,21,681 | 12,618 | 2768 |
| 08 | ಪಶ್ಚಿಮ ಬಂಗಾಳ | 5,77,48,946 | 3354 | 17,218 |
| 09 | ಕೇರಳ | 2,35,74,449 | 999 | 23,789 |
| 10 | ಅಸ್ಸಾಂ | 2,32,16,288 | 2223 | 10,783 |

ಮತ್ತು ಪಂಚಾಯತ್ ರಾಜ್ ವ್ಯವಸ್ಥೆ ಕುರಿತಾದ ವರದಿಯ ಮೇಲಿನ ಅಂಕಿ-ಅಂಶ ತಿಳಿಸುವಂತೆ, ದೇಶದ 23 ರಾಜ್ಯಗಳ ಪೈಕಿ 18 ರಾಜ್ಯಗಳಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ಇರುವ ಗ್ರಾಮೀಣ ಜನಸಂಖ್ಯೆಯ ಪ್ರಮಾಣ ಕರ್ನಾಟಕದ ಪ್ರಮಾಣವಾದ 6173ಕ್ಕಿಂತಲೂ ಕಡಿಮೆ ಇದೆ. ಕೇವಲ ಐದು ರಾಜ್ಯಗಳಲ್ಲಿ ಮಾತ್ರ ಪ್ರತಿ ಗ್ರಾಮ ಪಂಚಾಯಿತಿಗಳಿಗೆ ಇರುವ ಗ್ರಾಮೀಣ ಜನಸಂಖ್ಯೆಯ ಪ್ರಮಾಣ ಹೆಚ್ಚಿದೆ. ಅಂದರೆ, ಕರ್ನಾಟಕದಲ್ಲಿ ಪ್ರತಿ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಜನಸಂಖ್ಯಾ ಇದ್ದು, ಜನಸ್ನೇಹಿ ಪಂಚಾಯಿತಿ ವ್ಯವಸ್ಥೆಗೆ ಗ್ರಾಮಪಂಚಾಯಿತಿಗಳ ಮೇಲಿನ ಜನಸಂಖ್ಯಾ ಒತ್ತಡ ಕಡಿಮೆ ಮಾಡಬೇಕೆಂಬುದನ್ನು ಮೇಲಿನ ಅಂಕಿ ಅಂಶಗಳು ಹೇಳುತ್ತವೆ. 2011ರ ಜನಗಣತಿ ಪ್ರಕಾರ ಕರ್ನಾಟಕದ ಗ್ರಾಮೀಣ ಜನಸಂಖ್ಯೆ ಪ್ರಮಾಣ 3,74,69,335 ಆಗಿದೆ. ಪ್ರಸ್ತುತ ರಾಜ್ಯದಲ್ಲಿ 5629 ಗ್ರಾಮ ಪಂಚಾಯಿತಿಗಳಿವೆ. ಅಂದರೆ ಪ್ರತಿ ಗ್ರಾಮ ಪಂಚಾಯಿತಿಗೆ 6656 ಸರಾಸರಿ ಜನಸಂಖ್ಯೆ ಎಂದಾಗುತ್ತದೆ.

ರಾಜ್ಯದಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ಇರುವ ಗ್ರಾಮೀಣ ಜನಸಂಖ್ಯೆಯು ಈಗಿರುವ 6656 ರಿಂದ 6175 ಕಡಿಮೆಯಾಗುತ್ತದೆ. ಈ ಅಂಶವನ್ನು ಕೆಳಗಿನ ಪಟ್ಟಿಯಲ್ಲಿ ತೋರಿಸಲಾಗಿದೆ. ಸಮಿತಿಯು ಶಿಫಾರಸ್ಸು ಮಾಡಿದ 40 ನಗರ ಸ್ಥಳೀಯ ಸಂಸ್ಥೆಗಳು ರಚನೆಗೊಂಡರೆ ಪ್ರತಿ ಗ್ರಾಮ ಪಂಚಾಯತಿಗೆ ಇರುವ ಜನಸಂಖ್ಯೆಯ ಪ್ರಮಾಣ ಇನ್ನೂ ಕಡಿಮೆಯಾಗಲಿದೆ.

ಭಾರತದ ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ

| ಕ್ರ.ಸಂ. | ವರ್ಷ/ವಿವರ | ಒಟ್ಟು ಗ್ರಾಮೀಣ ಸಂಖ್ಯೆ | ಗ್ರಾಮ ಪಂಚಾಯಿತಿಗಳ ಸಂಖ್ಯೆ | ಪ್ರತಿ ಗ್ರಾಮ ಪಂ.ಯ ಸರಾಸರಿ ಜನಸಂಖ್ಯೆ |
|---|---|---|---|---|
| 1 | 1991 (1995) | 3,10,69,413 | 5629 | 5519 |
| 2 | 2001 | 3,48,89,033 | 5629 | 6198 |
| 3 | 2011 | 3,74,69,335 | 5629 | 6656 |
| 4 | ಗ್ರಾಮ ಪಂಚಾಯಿತಿಗಳ ಪುನರ್ ವಿಂಗಡನೆ ಸಮಿತಿಯ ಶಿಫಾರಸ್ಸು ಅನುಷ್ಠಾನದ ನಂತರ | 3,74,69,335 | 6068 (5629+439) | 6175 |

ಪ್ರದೇಶಗಳ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಧ್ಯಯನ ಮಾಡಿದ ಸಂಸ್ಥೆಯೊಂದು ಈ ಕೆಳಗಿನ ಕೆಲ ಅಂಶಗಳನ್ನು ಹೊರಹಾಕುತ್ತದೆ. (ನೋಡಿ: http://lgdirectory.gov.in/rptConsolidateforRuralLB.do?OWASP..)

1. ದೇಶದ 7 ರಾಜ್ಯಗಳು ಆಂಧ್ರ ಪ್ರದೇಶ, ಗುಜರಾತ್, ಜಾರ್ಖಂಡ್, ಪಂಜಾಬ್, ಉತ್ತರಖಂಡ, ಛತ್ತೀಸ್‌ಗಡ ಮತ್ತು ಹರಿಯಾಣ –

ಕರ್ನಾಟಕಕ್ಕಿಂತಲೂ ಕಡಿಮೆ ಸಂಖ್ಯೆಯ ಜಿಲ್ಲಾ ಪಂಚಾಯಿತಿಗಳನ್ನು ಹೊಂದಿದ್ದರೂ ಅಲ್ಲಿನ ಗ್ರಾಮ ಪಂಚಾಯಿತಿಗಳ ಸಂಖ್ಯೆ ಕರ್ನಾಟಕಕ್ಕಿಂತಲೂ ಹೆಚ್ಚಿವೆ.

2. ಬಿಹಾರ, ತಮಿಳುನಾಡು, ಉತ್ತರ ಪ್ರದೇಶ ರಾಜ್ಯಗಳಲ್ಲಿರುವ ಜಿಲ್ಲಾ ಮತ್ತು ಗ್ರಾಮ ಪಂಚಾಯಿತಿಗಳು ಕರ್ನಾಟಕಕ್ಕಿಂತಲೂ ಅಧಿಕವಾಗಿವೆ.

3. ಓರಿಸ್ಸಾ ರಾಜ್ಯವು ಕರ್ನಾಟಕದಷ್ಟೇ ಜಿಲ್ಲಾ ಪಂಚಾಯಿತಿಗಳನ್ನು ಹೊಂದಿದ್ದರೂ ಗ್ರಾಮ ಪಂಚಾಯಿತಿಗಳನ್ನು ಮಾತ್ರ ಹೆಚ್ಚು ಹೊಂದಿದೆ.

4. ದೇಶದಲ್ಲಿ ಒಂದು ಜಿಲ್ಲಾ ಪಂಚಾಯಿತಿಗೆ ಸರಾಸರಿ 403 ಗ್ರಾಮ ಪಂಚಾಯಿತಿಗಳಿವೆ. ಆದರೆ ಕರ್ನಾಟಕದಲ್ಲಿ ಅದರ ಪ್ರಮಾಣ 187 ಮಾತ್ರ ಆಗಿದೆ. ದೇಶದ ಸರಾಸರಿ ಮಟ್ಟವನ್ನು ತಲುಪಬೇಕಾದರೆ ನಾವೆಷ್ಟು ದೂರ ಕ್ರಮಿಸಬೇಕು ಯೋಚಿಸಿ.

"ಗ್ರಾಮ ಸ್ವರಾಜ್ಯವೆಂಬುದು ಸಂಪೂರ್ಣ ಪ್ರಜಾಪ್ರಭುತ್ವವಾಗಿದ್ದು, ಜೀವನಾವಶ್ಯಕತೆಗಳನ್ನು ನೀಗಿಸುವಲ್ಲಿ ಸ್ವಾವಲಂಬನೆ ಸಾಧಿಸುವುದು. ಗ್ರಾಮ ಸ್ವರಾಜ್ ಸಂಪೂರ್ಣ ಪ್ರಜಾಸತ್ತಾತ್ಮಕವಾಗಿದ್ದು ನೆರೆಹೊರೆಯುವರನ್ನು ಅವಲಂಬಿಸದೆಯೇ ಸ್ವತಂತ್ರವಾದುದ್ದಾಗಿರುತ್ತದೆ." ಇದು ಮಹಾತ್ಮಾ ಗಾಂಧೀಜಿಯವರು ಸಾರಿದ ಗ್ರಾಮ ಸ್ವರಾಜ್ಯದ ಪಥ. "ಪಂಚಾಯತ್ ರಾಜ್‌ಗಳಲ್ಲಿ ಕೇವಲ ಪಂಚಾಯತ್‌ಗೆ ಮಾತ್ರ ಸ್ಥಾನಮಾನ ನೀಡಿದರೆ ಸಾಲದು, ಅಲ್ಲಿನ ಜನತೆಗೆ ಅಧಿಕಾರ ನೀಡಬೇಕು. ಅವರು ಅಧಿಕಾರಸ್ಥರನ್ನು ಪ್ರಶ್ನಿಸುವ ಗುಣವನ್ನು ಬೆಳೆಸಿಕೊಳ್ಳಬೇಕು, ಆಗಲೇ ನಾವು ಸ್ವರಾಜ್ಯಕ್ಕೆ ಹತ್ತಿರವಾಗುತ್ತೇವೆ" (ಹರಿಜನ್ 1.6.1947) ಎನ್ನುವುದು ಮಹಾತ್ಮ ಗಾಂಧಿಯವರ ಇನ್ನೊಂದು ಅಭಿಮತ. ಕರ್ನಾಟಕದ ಗ್ರಾಮ ಪಂಚಾಯಿತಿಗಳು ಈ



ಪಥದಲ್ಲಿಯೇ ಸಾಗಲಿ ಎನ್ನುವುದು ಗ್ರಾಮ ಪಂಚಾಯತ್ ಪುನರ್ ವಿಂಗಡಣಾ ಸಮಿತಿ ವರದಿಯ ಆಶಯ.

ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಪರಿಕಲ್ಪನೆ ಜಾರಿಗೊಳ್ಳಬೇಕಾಗಿದೆ. ಒಂದು ಗ್ರಾಮಕ್ಕೆ ಒಂದು ಗ್ರಾಮ ಪಂಚಾಯಿತಿ ಎಂಬುದು 'ಮಾದರಿ ಕಲ್ಪನೆ'ಯಾದರೂ, ಕಟ್ಟಡ, ಸಿಬ್ಬಂದಿ, ಆರ್ಥಿಕ ಸಂಪನ್ಮೂಲ, ಜನಸಂಖ್ಯೆ ಮತ್ತು ಇತರೆ ಆಡಳಿತಾತ್ಮಕ ಕಾರಣಗಳಿಂದ ಎಲ್ಲಾ ಗ್ರಾಮಗಳಿಗೆ ಪ್ರತ್ಯೇಕವಾದ ಗ್ರಾಮ ಪಂಚಾಯಿತಿಗಳನ್ನು ರಚಿಸಲು ಸಾಧ್ಯವಾಗುವುದಿಲ್ಲ. ಆದರೆ ಗ್ರಾಮ ಪಂಚಾಯಿತಿಗಳ ಸಂಖ್ಯೆಗಳನ್ನು ಹೆಚ್ಚಿಸುವುದರಿಂದ ಗ್ರಾಮ ಪಂಚಾಯಿತಿಗಳ ಮೇಲಿನ ಒತ್ತಡ ಇಳಿಸಬಹುದು. 'ಚಿಕ್ಕ ಘಟಕ ಚೊಕ್ಕ ಆಡಳಿತ' ಎನ್ನುವ ತತ್ವದಡಿಯಲ್ಲಿ ಗ್ರಾಮ ಪಂಚಾಯಿತಿಗಳು ರಚನೆಯಾದರೆ ಗಾಂಧೀಜಿಯ 'ಗ್ರಾಮ ಸ್ವರಾಜ್' ಕನಸು ನನಸಾಗುತ್ತದೆ. ಕರ್ನಾಟಕದ ಗ್ರಾಮಗಳು ವ್ಯಾಜ್ಯ ಮುಕ್ತ, ತ್ಯಾಜ್ಯ ಮುಕ್ತ, ವ್ಯಸನ ಮುಕ್ತ, ಋಣ ಮುಕ್ತ, ಬಯಲು ಬಹಿರ್ದೆಸೆ ಮುಕ್ತ ಮತ್ತು ಬಡತನ ಮುಕ್ತ ಗ್ರಾಮಗಳಾಗಿ ರೂಪುಗೊಳ್ಳುತ್ತವೆ. ಗ್ರಾಮ ಪಂಚಾಯಿತಿಗಳನ್ನು ಸದೃಡಗೊಳಿಸಬೇಕು ಮತ್ತು ಗಾಂಧೀಜಿ ಕಂಡ ಗ್ರಾಮ ಸ್ವರಾಜ್ ಕನಸು ಸಾಕಾರಗೊಳ್ಳಬೇಕೆಂಬುದು ಸಮಿತಿಯ ಬಹುಮುಖ್ಯ ಆಶಯ




# ಪಂಚಾಯತ್ ರಾಜ್ ವ್ಯವಸ್ಥೆಯ ಬಲವರ್ಧನೆಯಲ್ಲಿ ಗ್ರಾಮ ಸಭೆಯ ಮಹತ್ವ

*ಸಂತೋಷ ಕುಮಾರ. ಹೆಚ್.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಸಭೆಯ ಮಹತ್ವದ ಕುರಿತು ಒಂದು ವಿಶ್ಲೇಷಣೆ

ಪಂಚಾಯತ್ ರಾಜ್ ವ್ಯವಸ್ಥೆಯ ಮೂಲ ಆಶಯವೇ ಅಧಿಕಾರದ ವಿಕೇಂದ್ರೀಕರಣ ಮತ್ತು ಗ್ರಾಮೀಣ ಜನರನ್ನು ಆಡಳಿತದಲ್ಲಿ ಭಾಗವಹಿಸುವಂತೆ ಮಾಡುವುದಾಗಿದೆ. ಭಾರತದ ಪ್ರಥಮ ಪ್ರಧಾನಿ ಜವಹಾರ್‌ಲಾಲ ನೆಹರು ರವರು 1959 ಅಕ್ಟೋಬರ್ 2ರಂದು ಪಂಚಾಯತ್ ರಾಜ್ ವ್ಯವಸ್ಥೆಯನ್ನು ರಾಜಸ್ಥಾನದ ನಾಗೂರಿನಲ್ಲಿ ಪ್ರಥಮ ಬಾರಿಗೆ ಪ್ರಾರಂಭಿಸಿದರು. ಈ ಪ್ರಯತ್ನ ಗ್ರಾಮೀಣ ಪ್ರಜಾ ಪ್ರಭುತ್ವ ಮತ್ತು ಸ್ಥಳೀಯ ಸಂಸ್ಥೆಗಳ ಪರಿಕಲ್ಪನೆಗೆ ನಾಂದಿಯಾಯಿತು. ಭಾರತ ಸರ್ಕಾರ 2009ನೇ ಇಸವಿಯನ್ನು ಪಂಚಾಯತ್ ವ್ಯವಸ್ಥೆಯ ಸುವರ್ಣ ಮಹೋತ್ಸವ ವರ್ಷಾಚರಣೆಯನ್ನಾಗಿ ಆಚರಿಸಿತು. ಸುವರ್ಣ ವರ್ಷಾಚರಣೆಯ ಭಾಗವಾಗಿ 2000-2010ನ್ನು "ಗ್ರಾಮ ಸಭೆಯ ವರ್ಷ" ಎಂದು ಘೋಷಿಸಿತು. ಇದರ ಉದ್ದೇಶ ಗ್ರಾಮ ಸಭೆಯ ಮಹತ್ವವನ್ನು ಜನರಿಗೆ ತಿಳಿಸುವುದರ ಜೊತೆಗೆ ಗ್ರಾಮ ಸಭೆಯನ್ನು ಬಲವರ್ಧನೆಗೊಳಿಸುವುದಾಗಿದೆ.



ಮೂರು ಹಂತಗಳ ಸ್ಥಳೀಯ ಸರ್ಕಾರ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತ್‌ಗೆ ತುಂಬಾ ಮಹತ್ವದ ಸ್ಥಾನವಿದೆ, ಗ್ರಾಮೀಣ ಜನರ ಆಶೋತ್ತರಗಳನ್ನು ಪ್ರತಿನಿಧಿಸುವ ವೇದಿಕೆಯಾಗಿ ಗ್ರಾಮ ಪಂಚಾಯತ್ ಕಾರ್ಯನಿರ್ವಹಿಸುತ್ತಿದೆ. ಭಾರತದಲ್ಲಿ ಶೇಕಡಾ 60 ಕ್ಕಿಂತ ಅಧಿಕ ಜನರು ಗ್ರಾಮೀಣ ಭಾಗದಲ್ಲಿ ವಾಸಿಸುತ್ತಿದ್ದಾರೆ. 1992ರ ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳು ಸ್ಥಳೀಯ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಕಾಯಕಲ್ಪ ನೀಡಿದೆ. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಯಲದ ಪ್ರಕಾರ ಭಾರತದಲ್ಲಿ 249764 ಗ್ರಾಮ ಪಂಚಾಯತಿಗಳಿವೆ (2010 ರಂತೆ). ಈ ಗ್ರಾಮ ಪಂಚಾಯತಿಗಳ ಮೂಲಕ ಗ್ರಾಮೀಣ ಜನರು ಅಧಿಕಾರ ವಿಕೇಂದ್ರೀಕರಣದಲ್ಲಿ

* MSW, NET, PGDJ, ಸಮಾಜ ಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜ್, ಚಿಕ್ಕಜಂಜೂರು, ಶಿವಮೊಗ್ಗ-28

ಭಾಗವಹಿಸಲು ಸಹಕಾರಿಯಾಗಿವೆ. ಗ್ರಾಮ ಪಂಚಾಯತಿ ಮತ್ತು ಗ್ರಾಮ ಸಭೆ ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯ ಚಿಗುರಿಗೆ ನೀರೆರದಿವೆ.

## ಗ್ರಾಮ ಸಭೆ:



ಸಂವಿಧಾನಾತ್ಮಕವಾಗಿ ರಚನೆಯಾಗಿರುವ ಗ್ರಾಮ ಸಭೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ತುಂಬಾ ಮಹತ್ವವಾದುದು. ಇದು ಹಳ್ಳಿಯ ವಯಸ್ಕ ಮತದಾರರನ್ನು ಪ್ರತಿನಿಧಿಸುತ್ತದೆ, ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮ ಸಭೆ ಕನಿಷ್ಠ 6 ತಿಂಗಳಿಗೊಮ್ಮೆ ಸಭೆ ಸೇರಬೇಕು(ಪ್ರಕರಣ-3ರ ಅನ್ವಯ). ಗ್ರಾಮ ಸಭೆಯ ಒಂದು ವಿಶೇಷ ಸಭೆಗೂ ಮತ್ತೊಂದು ಸಭೆಗೂ ಕನಿಷ್ಠ 3 ತಿಂಗಳ ಅಂತರವಿರಬೇಕು. ಒಂದು ಸಭೆ ಸೇರಬೇಕಾದರೆ ಒಟ್ಟು ಸಂಖ್ಯೆಯ 1/10 ರಷ್ಟು ಕೋರಂ ಇರಬೇಕು. ಗ್ರಾಮ ಸಭೆಗೆ ಹಾಜರಾಗಲು ಜನರಲ್ಲಿ ಶೇಕಡಾ 30 ಕ್ಕಿಂತ ಕಡಿಮೆ ಇಲ್ಲದಂತೆ ಮಹಿಳೆಯರು ಇರಬೇಕು.

ಸಂವಿಧಾನದ 243(ಎ) ವಿಧಿಯ ಅನ್ವಯ ಗ್ರಾಮ ಸಭೆಯು ಸಂವಿಧಾನಾತ್ಮಕ ಮಹತ್ವವನ್ನು 73ನೇ ತಿದ್ದುಪಡಿಯ ಮೂಲಕ ಒದಗಿಸಲಾಗಿದೆ.

ಗ್ರಾಮ ಸಭೆಗಳಲ್ಲಿ ಪಂಚಾಯತಿಯ ಕಾರ್ಯಗಳು ಮತ್ತು ನಿರ್ಣಯಗಳನ್ನು ಚರ್ಚಿಸಬಹುದಾಗಿದೆ. ವಿವಿಧ ವರದಿಗಳನ್ನು ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲು ಅನುಕೂಲವಾಗುತ್ತದೆ. ಹಳ್ಳಿಗಳ ಮಟ್ಟದಲ್ಲಿ ಗ್ರಾಮ ಸಭೆ ವೀಕ್ಷಕನಂತೆ ಕಾರ್ಯನಿರ್ವಹಿಸಲು ಸಹಕಾರಿಯಾಗಿದೆ. ಗ್ರಾಮ ಸಭೆಯ ಮುಖ್ಯ ಉದ್ದೇಶ ಯೋಜನೆ ಮತ್ತು ಮೌಲ್ಯಮಾಪನವನ್ನು ವಿಕೇಂದ್ರೀಕರಿಸಿ ಸ್ಥಳೀಯ ಜನರಲ್ಲಿ ತೀರ್ಮಾನಗೊಳ್ಳುವ ವಿಷಯಗಳಲ್ಲಿ ಭಾಗವಹಿಸುವಂತೆ ಮಾಡುವುದಾಗಿದೆ. ಗ್ರಾಮ ಸಭೆಯ ಮೂಲಕ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಯಶಸ್ವಿಯಾಗಿ ಕೈಗೊಂಡು ಪಂಚಾಯತಿಗಳ ಅವ್ಯವಹಾರಗಳನ್ನು ಬಯಲಿಗೆಳೆಯಬಹುದು. ಹಳ್ಳಿಯ ಪ್ರತಿಯೊಬ್ಬ ಮತದಾರ ನಿರ್ಣಯ ತೆಗೆದುಕೊಳ್ಳುವ ವಿಷಯದಲ್ಲಿ ಅಧಿಕಾರಯುತವಾಗಿ ಭಾಗವಹಿಸಲು ವೇದಿಕೆಯಾಗಿ ಕಾರ್ಯನಿರ್ವಹಿಸುತ್ತಿದೆ.

ಪ್ರಸ್ತುತ ಪರಿಸ್ಥಿತಿಯಲ್ಲಿ ಗ್ರಾಮ ಸಭೆಗಳಲ್ಲಿ ಜನರ ಸಹಭಾಗಿತ್ವ ಪ್ರಮಾಣ ಕಡಿಮೆಯಾಗಿದೆ. ಸಭೆಗಳು ಕೇವಲ ಔಪಚಾರಿಕವೆಂಬಂತೆ ನಡೆಯುತ್ತಿವೆ, ಕನಿಷ್ಠ ಕೋರಂನ ಕೊರತೆಯಿಂದ ಎಷ್ಟೋ ಗ್ರಾಮ ಸಭೆಗಳನ್ನು ಮುಂದೂಡಲಾಗಿದೆ, ವ್ಯವಸ್ಥಿತ ವಿಷಯಗಳ ಚರ್ಚೆ ಕಡಿಮೆಯಾಗಿತ್ತಿದೆ. ಅಧಿಕಾರಿಗಳಿಗೆ ಆಧ್ಯತಾ ವಿಷಯಗಳ ಬಗ್ಗೆ ಮಾಹಿತಿ ಇಲ್ಲ. ಪಂಚಾಯತಿ ಅಧಿಕಾರಿಗಳು ಗ್ರಾಮ ಸಭೆಗಳ ಬಗ್ಗೆ ಅಸಡ್ಡೆಯ ಭಾವನೆ ಹೊಂದಿರದೆ, ಫಲಾನುಭವಿಗಳ ಆಯ್ಕೆ ಗ್ರಾಮ ಸಭೆಯ ಮೂಲಕ ಸರಿಯಾದ ರೀತಿಯಲ್ಲಿ ನಡೆಯಬೇಕು. ಸಭೆಗೆ ಸರಿಯಾದ ಕಾರ್ಯಕಲ್ಪ ನೀಡುವುದು ಆಧ್ಯತೆಯಾಗಿದೆ. ಗ್ರಾಮ ಸಭೆಯನ್ನು ಬಲವರ್ಧನೆಗೊಳಿಸುವುದು ನಮ್ಮ ನೀತಿ ನಿರೂಪಕರ ಪ್ರಮುಖ ಕಾರ್ಯವಾಗಿದೆ, ಸರಿಯಾದ ಮಾಹಿತಿಯ ಕೊರೆತೆಯಿಂದ ಗ್ರಾಮ ಸಭೆಗಳು ವಿಫಲವಾಗುತ್ತಿವೆ.

## ಗ್ರಾಮ ಸಭೆ ಬಲಪಡಿಸಲು ಕೆಲವು ಕ್ರಮಗಳು:

- ಗ್ರಾಮೀಣ ಜನರಲ್ಲಿ ಗ್ರಾಮ ಸಭೆಯ ಮಹತ್ವ ಮತ್ತು ಅದರ ಅವಶ್ಯಕತೆಯ ಬಗ್ಗೆ ಜಾಗೃತಿ ಮೂಡಿಸುವುದರ ಮೂಲಕ ಜನರನ್ನು ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವುದು.
- ಗ್ರಾಮ ಸಭೆಗಳನ್ನು ವ್ಯವಸ್ಥಿತವಾಗಿ ನಡೆಸಲು

ಅಧಿಕಾರಿ ಮತ್ತು ಜನಪ್ರತಿನಿದಿಗಳಿಗೆ ತರಬೇತಿ ನೀಡುವುದು.

- ಗ್ರಾಮ ಸಭೆಗಳಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿ ಜನರ ಸಮಸ್ಯೆಗಳಿಗೆ ಸ್ಪಂದಿಸುವಂತೆ ಮಾಡುವುದು.

- ಗ್ರಾಮ ಸಭೆಯ ಮಹತ್ವ ಮತ್ತು ಅವಶ್ಯಕತೆಯನ್ನು ಭಿತ್ತಿ ಪತ್ರ, ಪತ್ರಿಕೆ ಮತ್ತು ಭಾನುಲಿಗಳ ಮೂಲಕ ಜನರಿಗೆ ತಿಳಿಯಪಡಿಸುವುದು.

- ಸಭೆಗಳಲ್ಲಿ ಎಲ್ಲಾ ವಿವರ ಮತ್ತು ವರದಿಗಳನ್ನು ಜನರ ಮುಂದೆ ಮುಕ್ತವಾಗಿ ಬಹಿರಂಗ ಗೊಳಿಸುವುದು ಹಾಗೂ ವರದಿಯ ವಿಸ್ತೃತ ಚರ್ಚೆ ನಡೆಯಬೇಕು.

- ಗ್ರಾಮ ಸಭೆಯ ಚರ್ಚಿತ ವಿಷಯಗಳನ್ನು ವಿಸ್ತರಿಸುವುದು, ಸ್ಥಳೀಯವಾಗಿ ಸುಸ್ಥಿರ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುವುದು.

- ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮ ಸಭೆಗಳ ಮೂಲಕ ವ್ಯವಸ್ಥಿತವಾಗಿ ನಡೆಯುವಂತೆ ಕಾಯಕಲ್ಪ ನೀಡುವುದು ಜೊತೆಗೆ ಸರಿಯಾದ ರೀತಿಯಲ್ಲಿ ಫಲಾನುಭವಿಗಳ ಆಯ್ಕೆ ನಡೆಯಬೇಕು.



- ಗ್ರಾಮ ಪಂಚಾಯತಿಗಳು ಕ್ರಿಯಾ ಯೋಜನೆಗಳನ್ನು ತಯಾರಿಸುವಾಗ ಸ್ಥಳೀಯ



ಯುವಕ ಮಂಡಳಿಗಳು, ರೈತ ಸಂಘಗಳು, ಮಹಿಳಾ ಸ್ವ-ಸಹಾಯ ಗುಂಪುಗಳು ಮತ್ತು ಸ್ಥಳೀಯ ಸರ್ಕಾರೇತರ ಸಂಸ್ಥೆಗಳನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು.

- ಮತದಾರ ವರ್ಗ ಗ್ರಾಮ ಸಭೆಗಳಲ್ಲಿ ಭಾಗವಹಿಸುವುದನ್ನು ತಮ್ಮ ಕರ್ತವ್ಯವೆಂದು ಅರಿತು ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಬೇಕಿದೆ.

## ಉಪಸಂಹಾರ

ಗ್ರಾಮ ಸಭೆಗಳ ಮೂಲಕವೇ ಎಷ್ಟೋ ಗ್ರಾಮ ಪಂಚಾಯತಿಗಳಲ್ಲಿ ಹಗರಣಗಳನ್ನು ಬಹಿರಂಗ ಪಡಿಸಿದ ಪ್ರಕರಣಗಳು ನಮ್ಮ ಮುಂದೆ ಸಾಕ್ಷಿವೆ. ಮಾಹಿತಿ ಹಕ್ಕು ಅಧಿನಿಯಮ 2005 ಆಡಳಿತ ವ್ಯವಸ್ಥೆಯ ಪಾರದರ್ಶಕತೆಗೆ ಒಂದು ಪ್ರಬಲ ಅಸ್ತ್ರವಾಗಿ ಪರಿಣಮಿಸಿದೆ. ಗ್ರಾಮೀಣ ಉತ್ತಮ ಆಡಳಿತ ನಿರ್ವಹಣೆಗೆ ಗ್ರಾಮ ಸಭೆ ತುಂಬಾ ಮುಖ್ಯವಾಗಿದೆ. ಅದೇ ರೀತಿ ಅಭಿವೃದ್ಧಿ ವಿಷಯಗಳ ಚರ್ಚೆ ನಡೆಸಲು ಮತ್ತು ಸಮಸ್ಯೆಗಳ ಪರಿಹಾರ ಪ್ರಯತ್ನ ಗ್ರಾಮ ಸಭೆಗಳಲ್ಲಿ ವ್ಯವಸ್ಥಿತವಾಗಿ ನಡೆಸುವುದರ ಮೂಲಕ ಅರ್ಹ ಫಲಾನುಭವಿಗಳ ಆಯ್ಕೆಗೆ ಗ್ರಾಮ ಸಭೆ ಸಹಾಯ ಮಾಡುತ್ತದೆ. ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಪರಿಕಲ್ಪನೆಗೆ ಕಾಯಕಲ್ಪ ನೀಡಬೇಕಾದರೆ ಗ್ರಾಮ ಸಭೆಗಳನ್ನು ಬಲವರ್ಧನೆಗೊಳಿಸಬೇಕಾಗಿದೆ.

ಲೇಖನ

# ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಸಾರ್ವಜನಿಕ ಅಭಿಮತ



ಪ್ರೊ: ಎ.ಎಚ್. ಮಾಸಾಪತಿ

ಭಾರತದ ಸಂವಿಧಾನ ರಚನೆಯ ಕಾಲದಲ್ಲಿ ಎರಡು ದೃಷ್ಟಿಕೋನಗೂ ಪ್ರಚಲಿತವಾಗಿದ್ದವು

1. ಡಾ: ಬಿ.ಆರ್. ಅಂಬೇಡ್ಕರ್ ಅಭಿಪ್ರಾಯದ ಮೇರೆಗೆ, ವ್ಯಕ್ತಿಯು ನೂತನ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಆಧಾರಶಿಲೆ ಆಗಿದ್ದಾನೆ. ಆದರ, ಗ್ರಾಮಗಳನ್ನು ಸ್ವಯಂ-ಸರ್ಕಾರದ ಘಟಕಗಳೆಂದು ಕರೆಯಲು ಸಾಧ್ಯವಿಲ್ಲ. ಇಂತಹ ದೃಷ್ಟಿಕೋನಕ್ಕೆ ಸಂವೈಧಾನಿಕ ಯೋಜನೆಯಲ್ಲಿ ಬೆಂಬಲ ಪ್ರಾಪ್ತವಾಗಿದೆ.
2. ಡಾ: ರಾಜೇಂದ್ರ ಪ್ರಸಾದ್ ವಿಚಾರದ ಮೇರೆಗೆ, ಗ್ರಾಮಗಳು ಸ್ವಯಂ-ಸರ್ಕಾರದ ಘಟಕಗಳೆಂಬ ಗಾಂಧೀಜಿಯವರ ಪರಿಕಲ್ಪನೆಗೆ ಅಧಿಕ ಆದ್ಯತೆಯನ್ನು ನೀಡಬೇಕು.

ಆದರೆ ಸಂವೈಧಾನಿಕ ವ್ಯವಸ್ಥೆಯಲ್ಲಿ, ಇಂತಹ ಪರಿಕಲ್ಪನೆಯನ್ನು ಸಮಾವೇಶಗೊಳಿಸಲು ವಿಳಂಬವಾಗಿದೆಯೆಂಬ ವಿವರಣೆಯನ್ನು ನೀಡಲಾಗಿದೆ. ಭಾರತದ ರಾಜಕೀಯ ವ್ಯವಸ್ಥೆ ಮತ್ತು ರಾಷ್ಟ್ರದ ಆಡಳಿತೆಯಲ್ಲಿ, ಗ್ರಾಮೀಣ ಸರ್ಕಾರ



ಅಥವಾ ಪಂಚಾಯತ್ ರಾಜ್ ಸಂಸ್ಥೆಗಳು ಪ್ರಾಥಮಿಕವಾದ ಪರಿಕಲ್ಪನೆಗಳಾಗಿವೆ. ನ್ಯಾಯಾಲಯಗಳ ಮೂಲಕ ಜಾರಿಗೊಳಿಸಲು ಅಸಾಧ್ಯವಾದರೂ ಸಹ ಸಂವಿಧಾನದ ಅನುಚ್ಛೇದ 40ರಲ್ಲಿ, ಪಂಚಾಯತ್‌ರಾಜ್ ಸಂಸ್ಥೆಗಳ ಪ್ರಾಧಾನ್ಯತೆಯನ್ನು ಗುರುತಿಸಲಾಗಿದೆ.

ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ, ಸಾರ್ವಜನಿಕ ಸಹಭಾಗಿತ್ವದ ತ್ವರಿತಗತಿಯ ಬೆಳವಣಿಗೆಯು ಅತ್ಯಂತ ಅವಶ್ಯಕವಾಗಿದೆ

* ನಿರ್ದೇಶಕರು, ವಿಕಾಸ ಪ್ರಕಾಶನ, ನಂ 1/4, 1ನೇ ಅಡ್ಡರಸ್ತೆ, ಕೆ.ಎಚ್.ಬಿ.ರೋಡ್, ಸುಲ್ತಾನ್ ಪಾಳ್ಯ, ಬೆಂಗಳೂರು-560 032 ಮೊಬೈಲ್ ನಂ. 93435 35229




ರಾಜಾಸ್ಥಾನದ ನಾಗೋರ್‌ನಲ್ಲಿ ಭಾರತದ ಪ್ರಥಮ ಪ್ರಧಾನಮಂತ್ರಿ ದಿ: ಜೆ.ಎಮ್. ನೆಹರೂ ಪಂಚಾಯತ್‌ರಾಜ್ ಸಂಸ್ಥೆಗಳ ಮಹತ್ವವನ್ನು ಕುರಿತು ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಈ ಸಂಸ್ಥೆಗಳು ತೃಣಮೂಲ ಪ್ರಜಾಸತ್ತಾತ್ಮಕ ವ್ಯವಸ್ಥೆಯ ತಳಹದಿ ಆಗಿವೆ. ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ, ಸಾರ್ವಜನಿಕ ಸಹಭಾಗಿತ್ವದ ತ್ವರಿತಗತಿಯ ಬೆಳವಣಿಗೆಯು ಅತ್ಯಂತ ಅವಶ್ಯಕವಾಗಿದೆ. ಸಹಭಾಗಿತ್ವದಿಂದ ಅಭಿವೃದ್ಧಿ ಪ್ರಕ್ರಿಯೆಯು ಅರ್ಥಪೂರ್ಣವಾಗುತ್ತದೆ. ತಳಮಟ್ಟದಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳು, ಪ್ರಜಾಸತ್ತಾತ್ಮಕ ಸ್ವಯಂ-ಸರ್ಕಾರ ಹಾಗೂ ಪ್ರಜಾಸತ್ತಾತ್ಮಕ ಅಭಿವೃದ್ಧಿಯ ಅವಿಭಾಜ್ಯವಾದ ಅಂಗಗಳೆಂದು ಪರಿಗಣಿಸಲ್ಪಟ್ಟಿವೆ. ಆದರೆ ದುರ್ದೈವದಿಂದ ಕಳೆದ ಹಲವಾರು ವರ್ಷಗಳಲ್ಲಿ ಪಿ.ಆರ್.ಐ.ಗಳ ಧ್ಯೇಯೋದ್ದೇಶಗಳನ್ನು ನಿರ್ಲಕ್ಷಿಸಲಾಗಿದೆ. ಆ ಸಂಸ್ಥೆಗಳು ಕೇವಲ ಆಡಳಿತಾತ್ಮಕ ಅನುಕೂಲತೆಗಾಗಿ ಅಸ್ತಿತ್ವದಲ್ಲಿವೆಯೆಂಬುದು ದೋಷಪೂರ್ಣವಾದ ತಿಳುವಳಿಕೆಯಾಗಿದೆ. ಇಂತಹ ಅಪಕ್ವ ವಿಚಾರದಿಂದ ಪಿ.ಆರ್.ಐ. ಗಳು ಸ್ವಾರ್ಥಸಾಧನೆ, ಆಂತರಿಕ-ಕಲಹ ಮತ್ತು ಸ್ವಯಂ-ಸರ್ಕಾರದ ಉನ್ನತವಾದ ಧ್ಯೇಯ ಸಂಬಂಧಿತ ವಿಷಯಗಳ ಬಗೆಗಿನ ಭಗ್ನವಾದ ತಿಳುವಳಿಕೆಗೆ ಬಲಿಪಶು ಆಗಿವೆ. ಇಂತಹ ವಿಷಮ ಪರಿಸ್ಥಿತಿಯಿಂದ ಮುಕ್ತಗೊಳಿಸಿ ಪಿ.ಆರ್.ಐ. ಗಳ ಸಶಕ್ತೀಕರಣಕ್ಕಾಗಿ ಪ್ರಾಮಾಣಿಕವಾದ ಪ್ರಯತ್ನಗಳು ನಡೆಯಬೇಕು.

## ತಜ್ಞರ ದೃಷ್ಟಿಕೋನ

1989ರಲ್ಲಿ, ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಕುರಿತು ಡಾ: ಎಲ್.ಎಮ್. ಸಿಂಘವಿ ಅವರೊಂದಿಗೆ ಕೈಗೊಂಡಿರುವ ಒಂದು ಸಂದರ್ಶನದಲ್ಲಿ ಹಲವಾರು ಪ್ರಧಾನ ವಿಚಾರಗಳನ್ನು ವಿವರಿಸಲಾಗಿದೆ. ಆರಂಭಿಕ ವರ್ಷಗಳಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯ ಬಗೆಗೆ, ಹೆಚ್ಚಿನ ಆಸಕ್ತಿಯನ್ನು ಪ್ರದರ್ಶಿಸಲಾಗಿತ್ತು. ಆದರೆ, ನಂತರದ ವರ್ಷಗಳಲ್ಲಿ ಕ್ರಮೇಣವಾಗಿ ಹಿಂದಿನ ಕಾರ್ಯೋತ್ಸಾಹವು ತಣ್ಣಗಾದುದರಿಂದ ಅಪೇಕ್ಷಿತವಾದ ಫಲಿತಾಂಶ ಪಡೆಯಲು ಸಾಧ್ಯವಾಗಲಿಲ್ಲ. ಇಂತಹ ಪರಿಸ್ಥಿತಿ ಉಂಟಾಗಲು ಕೆಲವು ಪ್ರಧಾನ ಕಾರಣಗಳನ್ನು ನೀಡಲಾಗಿದೆ.

1. ಸೈದ್ಧಾಂತಿಕವಾಗಿ ಪಿ.ಆರ್.ಐ. ಗಳು ಪ್ರಜಾಸತ್ತಾತ್ಮಕ ಸ್ವಯಂ-ಸರ್ಕಾರದ ಘಟಕಗಳು ಹಾಗೂ ಅಭಿವೃದ್ಧಿಯಲ್ಲಿ ಸಹಭಾಗಿತ್ವದ ಪ್ರಕ್ರಿಯೆಯ ವಾಹನಗಳೆಂದು ಪರಿಗಣಿಸಲಾಗಿದ್ದರೂ ಸಹ ವಾಸ್ತವಿಕವಾಗಿ, ಆಡಳಿತಾತ್ಮಕ ಸಲಕರಣೆಯ ಅನುಬಂಧಗಳಾಗುವಂತೆ ಕಾಣುತ್ತವೆ.

2. ಹಲವಾರು ಹಂತಗಳಲ್ಲಿ ಪಿ.ಆರ್.ಐ.ಗಳು ನೂತನ ಧುರೀಣತ್ವವನ್ನು ಸೃಷ್ಟಿಸುವುದರಿಂದ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ, ಪ್ರಜಾಪ್ರತಿನಿಧಿಗಳು ಅತೃಪ್ತಿ ಹಾಗೂ ಆತಂಕಕ್ಕೆ ಗುರಿಯಾಗಿರುವಂತೆ ಕಂಡುಬರುತ್ತದೆ. ಸ್ಥಾನಿಕ ಮಟ್ಟದಲ್ಲಿ, ಅವರು ಹೊಸ ಧುರೀಣರ ಮೇಲೆ ಅವಲಂಬಿತರಾಗುತ್ತಾರೆ. ಇಂತಹ ಸೂಕ್ಷ್ಮ ಸಂದರ್ಭದಲ್ಲಿ, ಪ್ರಜಾ ಪ್ರತಿನಿಧಿಗಳು, ಪಿ.ಆರ್.ಐ. ಗಳ ಅಧಿಕಾರ, ಪ್ರಾಮಾಣಿಕತೆ/ಸಮಗ್ರತೆ ಮತ್ತು ಪರಿಣಾಮಕಾರತ್ವವನ್ನು ಒಳಸಂಚಿನಿಂದ ನಾಶಮಾಡುತ್ತಿರುವಂತೆ ಕಾಣುತ್ತದೆ.

3. ಅಪಾರ ಬೆಂಬಲ ಹಾಗೂ ಅಮಿತೋತ್ಸಾಹದಿಂದ ಆರಂಭಿಸಲಾದ ಪಿ.ಆರ್.ಐ.ಗಳು ಮೂಲ ಸೌಲಭ್ಯಗಳ ಕೊರತೆಯಿಂದ, ಹಿನ್ನಡೆಯನ್ನು

ಅನುಭವಿಸುತ್ತದೆ. ಉದಾಹರಣೆಗಾಗಿ, ಶಿಕ್ಷಣ/ತರಬೇತಿ, ಸಂಘಟಿತ ಕಾರ್ಯನಿರ್ವಹಣೆ ಮತ್ತು ಸ್ವಾರ್ಥತ್ಯಾಗ ಚೈತನ್ಯದ ಕೊರತೆಯ ಜೊತೆಗೆ, ಭೋಗಾಸಕ್ತ ನಿರ್ಣಯ ಕೈಗೊಳ್ಳುವುದರಿಂದ, ಅಭಿವೃದ್ಧಿಯು ಕುಂಠಿತವಾಗುತ್ತದೆ.

## ಸಾರ್ವಜನಿಕರ ಅಭಿಮತ

ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಶ್ರೀಮಂತ ಮತ್ತು ಶಕ್ತಿಸಂಪನ್ನ ವರ್ಗಗಳು ಅಧಿಕ ಪ್ರಭಾವಶಾಲಿಗಳಾಗಿರುವುದರಿಂದ, ಬಹುಸಂಖ್ಯಾತ ದುರ್ಬಲ ವರ್ಗಗಳು ಪರಾಧೀನ/ಪರಕೀಯ ಭಾವನೆಗೆ ಒಳಗಾಗಿವೆ. ಯಜಮಾನಿಕೆಯು ಸಿದ್ಧಾಂತ ಕಾರ್ಯಾಚರಣೆಗೆ ಬಂದಿರುವುದರಿಂದ, ಕೆಲವು ಸಮುದಾಯಗಳು ನಿರ್ಲಕ್ಷಿತವಾಗಿ ದೂರೀಕರಿಸಲ್ಪಟ್ಟಿವೆ.

ಯಾವುದೇ ಸ್ಥಾನಿಕ ಸ್ವಯಂ-ಆಡಳಿತೆಯು, ಸ್ಥಾನಿಕ ಸಮುದಾಯಗಳ ಅವಕಾಶ ವಂಚಿತ/ದುರ್ಬಲ ವರ್ಗಗಳಿಗೆ ಅನ್ಯಾಯ ಹಾಗೂ ಅತ್ಯಾಚಾರ ಮಾಡಬಾರದು. ಇಂತಹ ಮಹತ್ವದ ರಾಷ್ಟ್ರೀಯ ಧ್ಯೇಯ ಸಾಧನೆಗಾಗಿ ನಿರಂತರವಾಗಿ ಶ್ರಮಿಸುವ ದಿಶೆಯಲ್ಲಿ, ಪಿ.ಆರ್.ಐ.ಗಳಿಗೆ ಪೂರ್ಣ ಅವಕಾಶ ನೀಡಬೇಕು.

## ಪಿ.ಆರ್.ಐ. ಗಳ ಬಲವರ್ಧನೆ

ಹಿಂದಿನ ದಶಕಗಳಲ್ಲಿ ಭಾರತದ ಪ್ರಧಾನ ಮಂತ್ರಿಗಳು ಪಿ.ಆರ್.ಐ.ಗಳ ಬಲವರ್ಧನೆಯ ದಿಶೆಯಲ್ಲಿ




ವಿಶಿಷ್ಟವಾದ ಆಸಕ್ತಿಯನ್ನು ಪ್ರದರ್ಶಿಸಿದ್ದಾರೆ. ಡಾ.ಎಲ್.ಎಮ್. ಸಿಂಘವಿ ಸಮಿತಿಯ ಕೆಲವು ಪ್ರಗತಿಪರ ಶಿಫಾರಸ್ಸುಗಳನ್ನು ಗಮನಿಸಲಾಗಿದೆ.

1. ಭಾರತೀಯ ಸಂವಿಧಾನದ ಅನುಚ್ಛೇದ 40ರ (ನಾಲ್ವತ್ತು) ತಿದ್ದುಪಡಿ :

2. ನಿಯಮಿತವಾಗಿ ಚುನಾವಣೆಗಳನ್ನು ನಡೆಸಬೇಕು.

3. ವಿವೇಚನಾಬದ್ಧವಾಗಿ, ಸೂಕ್ತವಾದ ಪ್ರಮಾಣದಲ್ಲಿ ಪಿ.ಆರ್.ಐ.ಗಳಿಗೆ ಸಂಪನ್ಮೂಲಗಳನ್ನು ಖಚಿತಪಡಿಸಬೇಕು.

4. ಪಿ.ಆರ್.ಐ.ಗಳನ್ನು ವಿವೇಚನಾರಹಿತವಾಗಿ ಆಕ್ರಮಿಸಿಕೊಳ್ಳಬಾರದು. ಇಂತಹ ಭರವಸೆಯು ಅತ್ಯವಶ್ಯಕವಾಗಿದೆ.

5. ಪಿ.ಆರ್.ಐ. ಸಂಬಂಧಿತ ವ್ಯಾಜ್ಯಗಳನ್ನು ಒಂದು ಪ್ರತ್ಯೇಕವಾದ ನ್ಯಾಯಪೀಠದ ಮೂಲಕ ಶೀಘ್ರವಾಗಿ ಪರಿಹರಿಸಬೇಕು.

## ಅಭಿವೃದ್ಧಿಪರ ಅಭಿಪ್ರಾಯ ನಿರ್ಮಾಣ

ಅತ್ಯಾಧುನಿಕ ಸಂವಹನ/ಸಂಪರ್ಕ ಮಾಧ್ಯಮಗಳು ವಿನೂತನವಾದ ಸಂಕೀರ್ಣ ಸಮಸ್ಯೆಗಳ ತಿರುಗಣೆ ಮಡುವಿನಲ್ಲಿ ಸಿಲುಕಿವೆ. ಇಂತಹ ಪರಿಸ್ಥಿತಿಯಲ್ಲಿ ಅಭಿವೃದ್ಧಿಪರ ಅಭಿಪ್ರಾಯಗಳ ಬೆಳವಣಿಗೆಯಲ್ಲಿ ಎಷ್ಟರ ಮಟ್ಟಿಗೆ ಅವುಗಳಿಂದ ಸಹಕಾರ-ಸಹಯೋಗ ಪ್ರಾಪ್ತವಾಗಲು ಸಾಧ್ಯವಿದೆ? ಕೇವಲ ಆಡಳಿತೆಯ ವಿನ್ಯಾಸ ಬದಲಾವಣೆ ಮತ್ತು ಜನಪ್ರಿಯವಾದ ಕೋಲಾಹಲದಿಂದ, ನೈಜವಾದ ಸಹಭಾಗಿತ್ವದ ಪ್ರಜಾಸತ್ತಾತ್ಮಕ ವ್ಯವಸ್ಥೆಯು ಧ್ಯೇಯಗಳನ್ನು ಸಾಕಾರಗೊಳಿಸಲು ಸಾಧ್ಯವಿಲ್ಲ. ತೃಣಮೂಲ ಪ್ರಜಾಪ್ರಭುತ್ವದೆಡೆಗೆ ರಾಷ್ಟ್ರವನ್ನು ಮುನ್ನಡೆಸುವ ದೃಢವಾದ ಸಂಕಲ್ಪವಿರಬೇಕು. ಈ ದಿಶೆಯಲ್ಲಿ ಆಧುನಿಕ ಮಾಧ್ಯಮಗಳು ಸುಜ್ಞವಾದ ಸಾರ್ವಜನಿಕ ಅಭಿಮತವನ್ನು ರೂಪಿಸುವಂತಹ ಮಹತ್ವದ ಹೊಣೆಗಾರಿಕೆ ಹೊಂದಿವೆ.

ಕಾವ್ಯ ವಿಕಾಸ

# ಹಳ್ಳಿಗಳ ಅಭಿವೃದ್ಧಿ

## 'ಸಂಕ್ರಾಂತಿ' (ಜನವರಿ–14)

ನವ್ಯ ವರುಷದ ಸಂಕ್ರಾಂತಿ
ಭವ್ಯ ಬದುಕಿನ ನವಕಾಂತಿ
ರೈತನ ಸುಗ್ಗಿಯ ಹಬ್ಬವು
ನೇಗಿಲ ಯೋಗಿಗೆ ಸಗ್ಗವು
ಋತುಗಳು ಸಾಗುತ ಉರುಳುತ
ಕಾಲವು ಮಾಗುತ ಮರಳುತ
ಬೆವರಿನ ಫಲವ ಕಾಣುವನು
ರೈತ ಹರ್ಷದಿ ಒಕ್ಕುವನು
ಕಾಳನು ರಾಶಿ ಮಾಡುವನು
ಕರ್ಮದಿ ಶಿವನ ನೆನೆಯುವನು
ಎಳ್ಳು-ಬೆಲ್ಲವ ಹಂಚುವನು
ಎಲ್ಲರ ಒಲುಮೆ ಗಳಿಸುವನು
ಮೊಗದಿ ಸಂತಸ ಬೀರುವನು
ಜಗಕೆ ಬೆಳಕವನಾಗುವನು.

## 'ಗಣರಾಜ್ಯೋತ್ಸವ'(ಜನವರಿ–26)

ಜನವರಿ ಬರುತಿರೆ ಉತ್ಸವ
ಭಾರತ ಗಣರಾಜ್ಯೋತ್ಸವ
ಭಾಷಾ ತೆರದಿ ಗಣವಾಗಿ
ಸಂಸ್ಕೃತಿ ಮುಖ್ಯ ಗುಣವಾಗಿ
ಭಾಷೆಗೆ ತಕ್ಕ ನಾಡಾಗಿ
ಜನಪದ ಕಲೆಯ ಬೀಡಾಗಿ
ಉದಿಸಿದವಂದು ಹೊಸರಾಜ್ಯ
ಲೀನವಾದವು ಸಾಮ್ರಾಜ್ಯ
ಸಾಹಿತ್ಯವು ಊಂಕರಿಸಿತು
ಲಾಲಿತ್ಯವು ಪಲ್ಲವಿಸಿತು
ರಚನೆಯಾದವು ಸರಕಾರ
ಹಂಚಿಕೆಗೊಂಡವು ಅಧಿಕಾರ
ಹೀಗೆ ಅರಳಿತು ಗಣರಾಜ್ಯ
ಗಣವು ಭಾರತ ಅವಿಭಾಜ್ಯ

**ಕೊಟ್ರೇಶ್ ಎಸ್. ಉಪ್ಪಾರ್**
ಭಾಷಾ ಶಿಕ್ಷಕರು
ಸರಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ
ತಾಳೂರು, ಆಲೂರು ತಾ|| , ಹಾಸನ ಜಿ||
ಮೊ. 9483470794, 9739878197

ಯಶೋಗಾಥೆ

# ಸಂಪೂರ್ಣ ಸ್ವಚ್ಛ ಗ್ರಾಮ ವಾಗಲು ಮಾಡಿದ ಸಾಧನೆಯ ಪರಿ:-

ಕಣ್ಣಂಗಾಲ ಗ್ರಾಮ ಪಂಚಾಯಿತಿ ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕು. ಅಮ್ಮತ್ತಿ ಹೋಬಳಿಯಲ್ಲಿರುವ ಒಂದು ಗ್ರಾಮ ಪಂಚಾಯಿತಿ. ಈ ಪಂಚಾಯಿತಿಯು ವಿರಾಜಪೇಟೆ ತಾಲ್ಲೂಕು ಪೊನ್ನಂಪೇಟೆಯಿಂದ 22ಕಿ.ಮೀ ದೂರದಲ್ಲಿದೆ ಮತ್ತು ಜಿಲ್ಲಾ ಕೇಂದ್ರ ಮಡಿಕೇರಿಗೆ 26ಕಿ.ಮೀ ದೂರದಲ್ಲಿರುತ್ತದೆ. ಗ್ರಾಮ ಪಂಚಾಯಿತಿಯು 5194.22 ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿರುತ್ತದೆ.

ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಶೇಕಡ80% ರಷ್ಟು ಕಾಫೀ ತೋಟವನ್ನು ಹೊಂದಿದ್ದು. ಉಳಿದಂತೆ ಬಾಳೆ, ಅಡಿಕೆ, ಭತ್ತದ ಕೃಷಿಗಳಿವೆ. ಗ್ರಾಮ ಪಂಚಾಯಿತಿಯ ಗಡಿಯಲ್ಲಿ ಕಾವೇರಿ ನದಿಯು 12ಕಿ.ಮೀ ವ್ಯಾಪ್ತಿವರೆಗೆ ಹರಿಯುತ್ತದೆ. ಶೇ80% ರಷ್ಟು ತೋಟಗಾರಿಕೆ ಮತ್ತು ಕೃಷಿಕರಿರುತ್ತಾರೆ. ಉಳಿದಂತೆ ವಿವಿಧ ಕಾರ್ಮಿಕ ವರ್ಗದವರು ಇರುತ್ತಾರೆ. ಗ್ರಾಮ ಪಂಚಾಯಿತಿಯ ಒಟ್ಟು ಜನ ಸಂಖ್ಯೆ. 3985 ಹೊಂದಿದ್ದು, 1076 ಕುಟುಂಬಗಳಿದ್ದು 113 ಪ.ಜಾತಿಯ 151 ಪ.ಪಂಗಡ ಕುಟುಂಬ, 806 ಇತರೆ ಕುಟುಂಬಗಳಿರುತ್ತದೆ. ಒಟ್ಟು ಕುಟುಂಬಗಳಲ್ಲಿ 942 ಬಿ.ಪಿ.ಎಲ್ 234 ಎ.ಪಿ.ಎಲ್ ಕುಟುಂಬಗಳಿರುತ್ತದೆ.

ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕು, ಅಮ್ಮತ್ತಿ ಹೋಬಳಿಯ, ಕಣ್ಣಾಂಗಾಲ ಗ್ರಾಮ ಪಂಚಾಯತಿಯ ಸಾಧನೆಯ ಚಿತ್ರಣ



ಪಂಚಾಯಿತಿಯಲ್ಲಿ ಎರಡು ಸರ್ಕಾರಿ ಪ್ರಾಥಮಿಕ ಶಾಲೆಗಳಿದ್ದು, ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶೌಚಾಲಯಗಳು ಇದ್ದು, ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಕೂಡ ಇದೆ. ಎಲ್ಲಾ ವಿದ್ಯಾರ್ಥಿಗಳು ಶೌಚಾಲಯವನ್ನು ಬಳಸುತ್ತಿದ್ದಾರೆ.

ಕಾರ್ಯದರ್ಶಿ, ಕಣ್ಣಾಂಗಾಲ ಗ್ರಾಮ ಪಂಚಾಯತಿ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ



ಹಾಗೆಯೇ ಪಂಚಾಯಿತಿ ವ್ಯಾಪ್ತಿಯಲ್ಲಿ ನಾಲ್ಕು ಅಂಗನವಾಡಿ ಕೇಂದ್ರಗಳಿದ್ದು ಎಲ್ಲದಕ್ಕೂ ಸೂಕ್ತ ನೀರಿನ ವ್ಯವಸ್ಥೆ ಇದ್ದು ಶೌಚಾಲಯವನ್ನು ಸಮರ್ಪಕವಾಗಿ ಬಳಸುತ್ತಿದ್ದಾರೆ.

ಪಂಚಾಯಿತಿ ವ್ಯಾಪ್ತಿಯಲ್ಲಿ 1076 ಎ.ಪಿ.ಎಲ್ ಮತ್ತು ಬಿ.ಪಿ.ಎಲ್ ಕುಟುಂಬಗಳಿದ್ದು ಪ್ರತಿಯೊಂದು ಕುಟುಂಬವೂ ವೈಯುಕ್ತಿಕ ಶೌಚಾಲಯವನ್ನು ಹೊಂದಿದೆ ಎನ್ನಲು ಹೆಮ್ಮೆ ಎನಿಸುತ್ತದೆ. ಗ್ರಾಮ ಪಂಚಾಯಿತಿಯ 234 ಎ.ಪಿ.ಎಲ್ ಕುಟುಂಬಗಳು ಬಹಳ ಹಿಂದೆಯೇ ವೈಯುಕ್ತಿಕ ಶೌಚಾಲಯಗಳನ್ನು ಹೊಂದಿ, ಬಳಸುತ್ತಿದ್ದರು. ಆದರೆ 876 ಬಿ.ಪಿ.ಎಲ್ ಕುಟುಂಬಗಳು ಅಭಿಯಾನದ ಪ್ರೇರೇಪಣೆಯಿಂದ ಶೌಚಾಲಯ ಹೊಂದಿ, ಬಳಸುತ್ತಿವೆ. ಗ್ರಾಮ ಪಂಚಾಯಿತಿಯ ಆಡಳಿತ ಮಂಡಳಿಯ ಎಲ್ಲಾ ಅವಧಿಯ ಅಧ್ಯಕ್ಷರಾದ ಶ್ರೀಮತಿ ಜ್ಯೋತಿ ನಾಣಯ್ಯ, ಶ್ರೀ ಬಿ.ಸಿ ಮಹೇಂದ್ರ ಹಾಗೂ ಕಾಳಪ್ಪರವರ ನೇತೃತ್ವದಲ್ಲಿ ನಡೆದ ಹತ್ತು ಹಲವು ಜಾಗೃತಿ ಕಾರ್ಯಕ್ರಮಗಳ ಮೂಲಕ ಎಲ್ಲಾ ಬಿ.ಪಿ.ಎಲ್ ಕುಟುಂಬಗಳು ಶೌಚಾಲಯುವನ್ನು ನಿರ್ಮಿಸಿ ಕೊಂಡಿರುತ್ತಾರೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಾಲ್ಕು ಕಾಲೋನಿಗಳಿದ್ದು, ಅದರಲ್ಲಿ ಒಂದು ಪ.ಜಾತಿಗೆ ಸೇರದ್ದಾಗಿದ್ದು, ಸದರಿ ಕಾಲೋನಿಗಳಲ್ಲಿ ಎಲ್ಲರೂ ಶೌಚಾಲಯವನ್ನು ಹೊಂದಿ, ಬಳಸುತ್ತಿದ್ದಾರೆ. ಪ್ರತಿ ಕಾಲೋನಿಗಳಿಗೂ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಕೂಡ ಕಲ್ಪಿಸಲಾಗಿದೆ.

ಪ್ರತಿ ಕುಟುಂಬವೂ ಶೌಚಾಲಯ ಹೊಂದಲು ಪಂಚಾಯಿತಿಯ ಆಡಳಿತ ಮಂಡಳಿ, ಅಭಿವೃದ್ಧಿ ಅಧಿಕಾರಿಯವರು ಹಾಗೂ ಸಿಬ್ಬಂದಿ ವರ್ಗದವರು ಮನಸಾರೆ ಶ್ರಮ ಪಟ್ಟಿರುತ್ತಾರೆ. ಇದಕ್ಕಾಗಿ ಹಲವು ಸಭೆಗಳನ್ನು ಹಮ್ಮಿಕೊಂಡು, ಎಲ್ಲರ ಸಹಕಾರದಿಂದ ಸಾಧನೆ ಮಾಡಲಾಗಿದೆ.

## ಯಶಸ್ವಿ ಅನುಷ್ಠಾನಕ್ಕೆ ತೆಗೆದುಕೊಂಡ ಕ್ರಮಗಳು:-

1. ಪ್ರತಿ ಗ್ರಾಮ ಮಟ್ಟದಲ್ಲಿ ಸಮಿತಿಗಳನ್ನು ರಚಿಸಲಾಯಿತು.
2. ಪಂಚಾಯಿತಿ ವ್ಯಾಪ್ತಿಯಲ್ಲಿದ್ದ 24ಸ್ವಸಹಾಯ ಗುಂಪುಗಳ ಸಹಕಾರ ಪಡೆದು, ಅವರಿಗೆ ಜವಾಬ್ದಾರಿ ನೀಡಲಾಯಿತು.
3. ಅಂಗನವಾಡಿ ಮತ್ತು ಆಶಾಕಾರ್ಯಕರ್ತೆಯರ ಸಹಕಾರ ಪಡೆಯಲಾಯ್ತು.
4. ಆರೋಗ್ಯ ಇಲಾಖೆ ಕಾರ್ಯಕರ್ತೆಯರು, ವೈದ್ಯಾಧಿಕಾರಿಗಳ ಮಾರ್ಗದರ್ಶನ, ನೆರವು ಸಹಕಾರ ಪಡೆಯಲಾಯ್ತು.
5. ಪ್ರತಿ ಮನೆ ಮನೆಗೆ ಕರಪತ್ರ ಹಂಚಲಾಯ್ತು.
6. ಕಾಲೋನಿಗಳಲ್ಲಿ ಕಡ್ಡಾಯ ಶೌಚಾಲಯ ನಿರ್ಮಾಣ, ಬಳಕೆಯ ಬಗ್ಗೆ ಬ್ಯಾನರ್/ಫ್ಲೆಕ್ಸ್ ಬೋರ್ಡ್‌ಗಳ ಮೂಲಕ ವಿಷಯ ತಿಳಿಸಲಾಯ್ತು.
7. ಪ್ರತಿ ಕಾಲೋನಿಗಳಲ್ಲಿ ಜಾಗೃತಿ ಬಗ್ಗೆ ಸಭೆ, ಸಮಾರಂಭ ಬೀದಿ ನಾಟಕಗಳನ್ನು ಏರ್ಪಡಿಸುವ ಮೂಲಕ ಜಾಗೃತಿ ಮೂಡಿಸಲಾಯಿತು.
8. ಆಕಾಶವಾಣಿಯ ಮೂಲಕ ಜಾಹಿರಾತು ಕೊಡಲಾಯಿತು.
9. ಸರಕಾರಿ ಪ್ರಾಥಮಿಕ ಶಾಲೆಯ ಮಕ್ಕಳಿಂದ ಮೆರವಣಿಗೆ ಭಾಷಣ, ಪ್ರಬಂಧ ಸ್ಪರ್ದೆ, ಚಿತ್ರ ಬಿಡಿಸುವ ಸ್ಪರ್ದೆಗಳ ಮೂಲಕ ಜಾಗೃತಿ ಮೂಡಿಸಲಾಯಿತು.
10. ಪಂಚಾಯಿತಿ ಕಛೇರಿಗೆ, ಬ್ಯಾಂಕ್, ವ್ಯವಸಾಯ ಸೇವಾ ಸಹಕಾರ ಸಂಘಗಳಿಗೆ ಬರುವ ಗ್ರಾಮಸ್ಥರಿಗೆ ಶೌಚಾಲಯ ಮಹತ್ವದ ಬಗ್ಗೆ ತಿಳುವಳಿಕೆ ನೀಡಲಾಯಿತು.

ಎ.ಪಿ.ಎಲ್ ವರ್ಗಕ್ಕೆ ಸೇರಿದ ಜಮೀನು ಮತ್ತು ತೋಟದ ಮಾಲೀಕರಿಗೆ, ತಮ್ಮ ಕಾರ್ಮಿಕ ವರ್ಗಕ್ಕೆ ಶೌಚಾಲಯ ನಿರ್ಮಿಸುವುದು ತಮ್ಮ ಜವಾಬ್ದಾರಿ ಎಂಬುದನ್ನು ಮನವರಿಕೆ ಮಾಡಿ ಕೊಡುವುದರಲ್ಲಿ ಯಶ್ವಸಿ ಕಂಡಿದ್ದೇವೆ. ಕೆಲವೊಂದು ಸಂದರ್ಭಗಳಲ್ಲಿ ಪಂಚಾಯಿತಿಯು ಕಠಿಣವಾಗಿ ವರ್ತಿಸಬೇಕಾಗಿದೆ.



ಗ್ರಾಮ ಪಂಚಾಯಿತಿಯು ಚಿಕ್ಕ ಪಟ್ಟಣದ ಮಾದರಿಯಲ್ಲಿರುವುದರಿಂದ, ಒಬ್ಬ ಪೌರ ಕಾರ್ಮಿಕ ಸಿಬ್ಬಂದಿಯು ಪ್ರತಿದಿನ ಪಟ್ಟಣದ ಸ್ವಚ್ಚತಾ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಕಸವಿಲೇವಾರಿಗೆ ಸೂಕ್ತ ಸ್ಥಳವಿರುತ್ತದೆ. ಸಾರ್ವಜನಿಕರಿಗೆ ಕುಡಿಯಲು ಐದು ನೀರು ಸರಬರಾಜು ಘಟಕಗಳಿದ್ದು ವ್ಯವಸ್ಥಿತವಾಗಿ ನಿರ್ವಹಿಸಲಾಗುತ್ತಿದೆ. ಸಾರ್ವಜನಿಕ ಮತ್ತು ಖಾಸಗಿ ಮಾಲೀಕರ ಕೊಳವೆ ಬಾವಿ, ತೆರೆದ ಬಾವಿಗಳ ಕುಡಿಯುವ ನೀರಿನ ಗುಣ ಮಟ್ಟವನ್ನು ಕಾಲಕಾಲಕ್ಕೆ ಪರೀಕ್ಷೀಸಲಾಗುತ್ತಿದೆ. ಮತ್ತು ಕುಡಿಯಲು ಯೋಗ್ಯವಲ್ಲದ ನೀರಿನ ಮೂಲಗಳನ್ನು ಪರೀಕ್ಷಿಸಿ ಕುಡಿಯಲು ಯ್ಯೋಗವಾಗುವಂತೆ ಸರಿ ಪಡಿಸಲಾಗುತ್ತದೆ. ಪ್ರಸ್ತುತ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಪಿ.ಯು. ಕಾಳಪ್ಪರವರ ನೇತೃತ್ವದಲ್ಲಿ ಗ್ರಾಮದ ಸ್ವಚ್ಚತೆ ಬಗ್ಗೆ ಹೆಚ್ಚಿನ ಆಧ್ಯತೆ ನೀಡಿ, ಮೂರು ಗ್ರಾಮಗಳನ್ನು ಬಯಲು ಬಹಿರ್ದೆಸೆ ಮುಕ್ತ ಗ್ರಾಮವಾಗಿ ಮಾಡಲು ಶ್ರಮಿಸಿದ್ದಾರೆ ಎಂಬುದು ಶ್ಲ್ಯಾಗನೀಯವಾಗಿದೆ.

ಯಶೋಗಾಥೆ

# ಸರ್ವಾಂಗೀಣ ಅಭಿವೃದ್ಧಿ ಸಾಧನೆಯತ್ತ ಸಾಗಿರುವ ಬೆಡಸಗಾಂವ ಗ್ರಾಮ ಪಂಚಾಯತ್



ಕೇಶವಮೂರ್ತಿ

ಬೆಡಸಗಾಂವ ಗ್ರಾಮ ಪಂಚಾಯತಿಯ ಇತಿಹಾಸದಲ್ಲೇ 2014 ರ ಅಕ್ಟೋಬರ 2ನೇ ತಾರೀಕು (ಗಾಂಧಿ ಜಯಂತಿ) ಮರೆಯಲಾಗದ ದಿನ. ಏಕೆಂದರೆ ಅಂದು ಕರ್ನಾಟಕ ಸರ್ಕಾರ ಬೆಂಗಳೂರಿನ ವಿಧಾನ ಸೌಧದ ಬ್ಯಾಂಕ್ವೆಟ ಹಾಲಿನಲ್ಲಿ ಬೆಡಸಗಾಂವ ಗ್ರಾಮ ಪಂಚಾಯತಿಯನ್ನು 2013 –14 ನೇ ಸಾಲಿನ "ಗಾಂಧಿ ಗ್ರಾಮ ಪುರಸ್ಕಾರ" ಪ್ರಶಸ್ತಿ ಹಾಗೂ ರೂ 5 ಲಕ್ಷಗಳ ನಗದು ಬಹುಮಾನವನ್ನು ನೀಡಿ ಗೌರವಿಸಿದ ದಿನ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಅತ್ಯಂತ ಯಶಶ್ವಿಯಾಗಿ ಅನುಷ್ಠಾನಗೊಳಿಸಿ ಸಾಧನೆಗೈದ ಗ್ರಾಮ ಪಂಚಾಯತಿಗಳಿಗೆ ನೀಡುವ ಪ್ರತಿಷ್ಠಿತ ಪ್ರಶಸ್ತಿ ಇದಾಗಿದ್ದು ಬೆಡಸಗಾಂವ ಗ್ರಾಮ ಪಂಚಾಯತಿಯು ಅಂತಹ ಸಾಧನೆಗೈದು ಪ್ರಥಮ ಬಾರಿಗೆ ಪ್ರಶಸ್ತಿಗೆ ಪಾತ್ರವಾಗಿರುವದು ಹೆಮ್ಮೆಯ ಸಂಗತಿಯಾಗಿದೆ. ಈ ಮೂಲಕ ಮುಂಡಗೋಡ ತಾಲ್ಲೂಕಿನ ಕೀರ್ತಿ ಪತಾಕೆಯನ್ನು ರಾಜ್ಯಮಟ್ಟದಲ್ಲಿ ಅಲ್ಲದೆ ರಾಷ್ಟ್ರಮಟ್ಟದಲ್ಲೂ ಹಾರಿಸಿದ ಹಿರಿಮೆ ಬೆಡಸಗಾಂವ ಗ್ರಾಮ ಪಂಚಾಯತಿಗೆ ಸಲ್ಲುತ್ತದೆ.



**2013–14ನೇ ಸಾಲಿನ ಪ್ರತಿಷ್ಟಿತ ಗಾಂಧಿ ಗ್ರಮಾ ಪುರಸ್ಕರ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡ ಬೇಡಸಗಾಂವ್ ಗ್ರಾಮ ಪಂಚಾಯತಿಯು ಮುಂಡಗೋಡ ತಾಲ್ಲೂಕಿನ ಕಿರ್ತಿ ಪತಾಕೆಯನ್ನು ರಾಜ್ಯ ಮಟ್ಟದಲ್ಲಿ ಅಲ್ಲದೆ ರಾಷ್ಟ್ರ ಮಟ್ಟದಲ್ಲಿ ಹಾಲಿಸಿದೆ.**

ಬೆಡಸಗಾಂವ ಗ್ರಾಮ ಪಂಚಾಯತಿಯು ಅತೀ ಹಿಂದುಳಿದ ಭಾಗವಾಗಿದ್ದದ್ದು, ತಾಲ್ಲೂಕು ಕೇಂದ್ರದಿಂದ ಸುಮಾರು 40 ಕಿ.ಮೀ ದೂರದಲ್ಲಿ ಇದ್ದು ಶಿರಸಿ ಹಾಗೂ ಯಲ್ಲಾಪುರ ತಾಲ್ಲೂಕುಗಳ ಗಡಿಭಾಗದಲ್ಲಿದೆ. ಬೆಡಸಗಾಂವ ಕೇಂದ್ರ ಸ್ಥಾನವಾಗಿರುವ ಈ ಗ್ರಾಮ ಪಂಚಾಯತಿಯು 11 ಗ್ರಾಮಗಳನ್ನು ಒಳಗೊಂಡಿರುತ್ತದೆ. ಬಹಳ ವರ್ಷಗಳ ಕಾಲ ಈ ಭಾಗವು ಭತ್ತದ ಬೆಳೆಗೆ ಮಾತ್ರ ಸೀಮಿತವಾಗಿತ್ತು.

4ನೇ ಅಡ್ಡ ರಸ್ತೆ, ಗಾಂಧಿ ನಗರ, ಶಿರಸಿ, ಉತ್ತರಕನ್ನಡ (ಕಾರವಾರ)

ಗುಡ್ಡಗಾಡು ಪ್ರದೇಶದಿಂದ ಕೂಡಿದ ಈ ಪಂಚಾಯತ್ ವ್ಯಾಪ್ತಿಯು ಪ್ರಾದೇಶಿಕವಾಗಿ ಬಹಳ ವಿಸ್ತಾರವಾಗಿದ್ದರೂ ಕೂಡ ಜನಸಂಖ್ಯೆಯಲ್ಲಿ ತೀರಾ ಕಡಿಮೆ ಇದೆ. ತಲಾನುದಾನದಲ್ಲೇ





ಅಭಿವೃದ್ಧಿ ಕಾರ್ಯಗಳನ್ನು ನೆಡೆಸಬೇಕಾಗಿದ್ದ ಕಾಲದಲ್ಲಿ ಈ ಪಂಚಾಯತಿಯು ಅಭಿವೃದ್ಧಿಯಲ್ಲಿ ತೀರಾ ಹಿಂದುಳಿದಿತ್ತು.

ಈ ಪಂಚಾಯತಿಯು 1994 ರಲ್ಲಿ ಅಸ್ತಿತ್ವಕ್ಕೆ ಬಂದಿದೆ. ಇದರ ಪ್ರಥಮ ಅಧ್ಯಕ್ಷರಾಗಿ ಶ್ರೀ ವಾಮನ ರಾಮಪ್ಪ ಕೊರ್ಸೆ ಇವರು 2000 ನೇ ಇಸವಿಯ ವರೆಗೆ 6 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದಾರೆ. ನಂತರ 2000–02ರ ಅವಧಿಗೆ ಶ್ರೀಮತಿ ಸೀತಾ ಬಂಗಾರಪ್ಪ ನಾಯ್ಕ ಬೆಕ್ಕೋಡ, 2002–05ರ ಅವಧಿಗೆ ಶ್ರೀ ಹನ್ಮಂತ ಕೆರಿಯಾ ನಾಯ್ಕ ತೊಗ್ರಳ್ಳಿ, 2005–07 ರ ಅವಧಿಯಲ್ಲಿ ಶ್ರೀಮತಿ ಶಾಂತವ್ವ ಟಿ ವಡ್ಡರ ಕೂರ್ಲಿ, 2007–10 ರ ಅವಧಿಗೆ ಪರಮೇಶ್ವರ ಚೌಡಪ್ಪ ನಾಯ್ಕ ಬೆಡಸಗಾಂವ ಮತ್ತು 2010–12 ರ ಅವಧಿಗೆ ಶ್ರೀಮತಿ ಭಾಗೀರಥಿ ರಾಮಾ ಶಿದ್ದಿ ಶಾನವಳ್ಳಿ ಇವರು ಕಾರ್ಯ ನಿರ್ವಹಿಸಿದ್ದು ಪ್ರಸ್ತುತ ಶ್ರೀ ಚಂದ್ರಶೇಖರ ಜಟ್ಟಯ್ಯ ಜೈನ ಇವರು ಅಧ್ಯಕ್ಷರಾಗಿ ಕೆಲಸ ನಿರ್ವಹಿಸುತ್ತಿದಾರೆ.

1983 ಕ್ಕಿಂತ ಮೊದಲು ಈ ಭಾಗದಲ್ಲಿ ವಿದ್ಯುತ್ ರಸ್ತೆ ಸಾರಿಗೆ ಮುಂತಾದ ಮೂಲಭೂತ ಸೌಕರ್ಯಗಳಿರಲಿಲ್ಲ ಈ ಭಾಗದ ಗ್ರಾಮಗಳೆಲ್ಲ ಕುಗ್ರಾಮಗಳೇ ಆಗಿದ್ದವು. ಪಂಚಾಯತಿಗಳಿಗೆ ಆ ಕಾಲದಲ್ಲಿ ಸರ್ಕಾರದಿಂದ ಆರ್ಥಿಕ ನೆರವು ಅಷ್ಟಾಗಿರಲಿಲ್ಲ. ಗ್ರಾಮ ಪಂಚಾಯತಿ ಕೂಡ ಆರ್ಥಿಕವಾಗಿ ಸದೃಡವಾಗಿರಲಿಲ್ಲ. ಪಂಚಾಯತಿಯು ವಸೂಲಿ ಮಾಡುವ ಮನೆ ತೆರಿಗೆ ಕಾರ್ಯದರ್ಶಿಯವರ ಸಂಬಳಕ್ಕೂ ಸಾಲುತ್ತಿರಲಿಲ್ಲ. ಇಂತಹ



ಪರಿಸ್ಥಿತಿಯಲ್ಲಿ ಪಂಚಾಯತ್ ಮಟ್ಟದಲ್ಲಿ ಏನಾದರೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳ ಬೇಕಾದರೆ ಅಧ್ಯಕ್ಷರು ಹಾಗೂ ಊರ ಪ್ರಮುಖರು ವಂತಿಗೆ ನೀಡಿ ಕಾರ್ಯಕ್ರಮ ನೆರವೇರಿಸಬೇಕಾಗಿತ್ತು.

ಬಹಳ ವರ್ಷಗಳ ಕಾಲ ಇದೇ ಪರಿಸ್ಥಿತಿ ಮುಂದುವರೆದು, ಕಾಲ ಕ್ರಮೇಣ ಸುಧಾರಣೆಗಳು ಕಂಡು ಬಂದು, ಈ ಭಾಗದಲ್ಲಿ ಚೇತರಿಕೆ ಮೂಡಿತು. ಆದರೂ ಪಂಚಾಯತಿಗಳಿಗೆ ಜನಸಂಖ್ಯೆ ಆಧಾರದಲ್ಲಿ ಸರ್ಕಾರ ನೀಡುವ ತಲಾನುದಾನ ಯಾವ ಮೂಲೆಗೂ ಸಾಕಾಗುತ್ತಿರಲಿಲ್ಲ, ಅದರಲ್ಲೂ ಬೆಡಸಗಾಂವ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಬಹುತೇಕ ಹಳ್ಳಿಗಳು ಗುಂಪು ಮನೆಗಳ ಜನವಸತಿ ಆಗಿಲ್ಲದಿರುವದು ಅಭಿವೃದ್ಧಿ ಸಾಧನೆ ಗುರುತಿಸುವದು ಅಸಾಧ್ಯವಾದ ಮಾತಾಗಿತ್ತು. ಈಗಲೂ ಅಂತಹ ಪರಿಸ್ಥಿತಿ ಇದ್ದರೂ ಕೆಲವೆಡೆ ಒಂದು ಎರಡು ಮನೆಗಳಿಗೂ ಪಂಚಾಯತ್ ವತಿಯಿಂದ ರಸ್ತೆಗಳನ್ನು ಕಲ್ಪಸಿಕೊಡಲಾಗಿರುವುದು ಮಹತ್ಸಾಧನೆಯೇ ಸರಿ .

ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಘನ ಸರ್ಕಾರ ಪಂಚಾಯತ ರಾಜ್ ವ್ಯವಸ್ಥಯಲ್ಲಿ ಅಮೂಲಾಗ್ರ ಬದಲಾವಣೆಯುನ್ನು ತಂದು ವಿಕೇಂದ್ರಿಕರಣ ವ್ಯವಸ್ಥೆಯಲ್ಲಿದ್ದ ಎರಡು ಹಂತದ ಅಂದರೆ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ ಗಳನ್ನು ಕೊನೆಗಾಣಿಸಿ ಮೂರು ಹಂತದ ಅಂದರೆ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ವ್ಯವಸ್ಥೆಯನ್ನು ಜಾರಿಗೆ ತಂದಿತು. ಹಾಗೆ ಜಾರಿಗೆ ಬಂದ ವ್ಯವಸ್ಥೆಯಲ್ಲಿ ಮಂಡಲ ಪಂಚಾಯತ್ ಮಳಗಿಯು ಗ್ರಾಮ ಪಂಚಾಯತ ಮಳಗಿ ಆಯಿತು, ಇದರಲ್ಲಿ ವಿಲೀನಗೊಂಡಿದ್ದ ಬೆಡಸಗಾಂವ ಗ್ರಾಮ ಪಂಚಾಯತಿಯು ಪ್ರತ್ಯೇಕವಾಗಿ ಪ್ರಥಮ ಹೆಜ್ಜೆ ಮೂಡಿಸಿತು.

1994 ರಿಂದ ಈಚೆಗೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆಗಳನ್ನು ತಂದಿರುವ ರಾಜ್ಯ ಸರ್ಕಾರವು ಗ್ರಾಮ ಪಂಚಾಯತಗಳ ಮೂಲಕ ಹಳ್ಳಿಗಳ ಉದ್ದಾರಕ್ಕೆ ಮುಂದಾಗಿದೆ. ಕಾಲಕಾಲಕ್ಕೆ ಕಾನೂನು ಮೂಲಕ ಈ ವ್ಯವಸ್ಥೆಯನ್ನು ಬಲಪಡಿಸುತ್ತಿರುವ ರಾಜ್ಯ ಸರ್ಕಾರವು ಗ್ರಾಮ ಪಂಚಾಯತಿಗಳಿಗೆ ಆರ್ಥಿಕವಾಗಿ ಚೈತನ್ಯ ತುಂಬುತ್ತಾ ಬಂದಿದೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಂತಹ ಹಲಾವಾರು ಯೋಜನೆಗಳನ್ನು ರೂಪಿಸಿ ಗ್ರಾಮ ಪಂಚಾಯತಿಗಳಿಗೆ ಅನುಷ್ಠಾನಗೊಳಿಸಲು ಅಧಿಕಾರ ನೀಡಿದೆ. ಈ ಯೋಜನೆಯಡಿ ರೈತರ ಜಮೀನುಗಳ ಅಭಿವೃದ್ದಿಗೂ ಅವಕಾಶ ನೀಡಲಾಗಿದ್ದು, ಅರ್ಹ ಫಲಾನುಭವಿಗಳು ಇದರ ಲಾಭ ಪಡೆದಿರುತ್ತಾರೆ. ಬೆಡಸಗಾಂವ ಗ್ರಾಮ ಪಂಚಾಯತಿಯಲ್ಲೂ ಈ ಯೋಜನೆ ಜಾರಿಯಲ್ಲಿದ್ದು, ರೈತ ಫಲಾನುಭವಿಗಳು ಗರಿಷ್ಠ ಮಟ್ಟದಲ್ಲಿ ಯೋಜನೆಯ ಲಾಭ ಪಡೆದುಕೊಂಡಿರುತ್ತಾರೆ.

ರೈತ ಫಲಾನುಭವಿಗಳು ತಮ್ಮ ಜಮೀನುಗಳಲ್ಲಿ ಬದು, ಕಾಲುವೆ, ಅಡಿಕೆ ತೋಟ ಮುಂತಾದ ಕಾಮಗಾರಿಗಳನ್ನು ಕೈಗೊಂಡು ಅಭಿವೃದ್ಧಿಯತ್ತ ದಾಪುಗಾಲು ಹಾಕುತ್ತಿದ್ದಾರೆ. ಅಲ್ಲದೇ ಈ ಯೋಜನೆಯಡಿ ರಸ್ತೆ ಕಾಮಗಾರಿಗಳು, ಕುಡಿಯುವ ನೀರಿನ ಬಾವಿಗಳು, ಕೆರೆಗಳ ಅಭಿವೃದ್ಧಿ, ಆಟದ ಮೈದಾನಗಳ ಅಭಿವೃದ್ಧಿ ಮುಂತಾದ ಹಲವು ಜನೋಪಯೋಗಿ ಕಾರ್ಯಕ್ರಮಗಳನ್ನು ಪ್ರತಿ ವರ್ಷ ಹಮ್ಮಿಕೊಳ್ಳಲಾಗುತ್ತಿದ್ದು, ಇದರಿಂದ ಗ್ರಾಮ ಪಂಚಾಯತ್ ವ್ಯಾಪ್ತಿಯ ಹಳ್ಳಿಗಳು ಅಭಿವೃದ್ಧಿಯತ್ತ

ಮುಖ ಮಾಡಿವೆಯೆಂದೇ ಹೇಳಬಹುದು

ರಾಜ್ಯ ಸರ್ಕಾರವು ಅಭಿವೃದ್ಧಿ ಕೆಲಸಗಳನ್ನು ಮಾಡಿದ ಗ್ರಾಮ ಪಂಚಾಯತಿಗಳನ್ನು ಗುರುತಿಸಿ, ಪ್ರೋತ್ಸಾಹ ನೀಡುವುದರಿಂದ ಬೇರೆ ಗ್ರಾಮ ಪಂಚಾಯತಿಗಳು ಪ್ರತಿಸ್ಪರ್ಧಿಗಳಾಗಿ ಎಚ್ಚೆತ್ತುಕೊಳ್ಳಲು ಸಹಕಾರಿಯಾಗುತ್ತದೆ. ಈ ಅಭಿವೃದ್ಧಿ ಕಾರ್ಯಗಳಲ್ಲಿ ಗ್ರಾಮ ಪಂಚಾಯತಿಯ ಎಲ್ಲಾ ಸದಸ್ಯರ ಮತ್ತು ಪಂಚಾಯತಿ ಸಿಬ್ಬಂದಿಯವರ ಪಾತ್ರ ಮಹತ್ತರವಾದ್ದು ಎಂದು ಪ್ರಸ್ತುತ ಅಧ್ಯಕ್ಷರಾಗಿರುವ ಶ್ರೀ ಚಂದ್ರಶೇಖರ ಜೈನ್‌ರವರು ತಿಳಿಸುತ್ತಾರೆ. ಶೌಚಾಲಯಗಳ ಕುರಿತು ಅರಿವು ಮೂಡಿಸುವ ವಿವಿಧ ರೀತಿಯಲ್ಲಿ ಕಾರ್ಯಕ್ರಮಗಳನ್ನು ಮತ್ತು ಸ್ವ- ಸಹಾಯ ಸಂಘದ ಮಹಿಳೆಯರಿಗೆ ಶೌಚಾಲಯಗಳ ಉಪಯೋಗ, ಲಾಭ ಮತ್ತು ಅನುದಾನದ ಕುರಿತು ಮಾಹಿತಿ ನೀಡಿದಾಗ ಸಾರ್ವಜನಿಕರು ಮತ್ತು ಜನಪ್ರತಿನಿದಿಗಳ ಸಹಕಾರದಿಂದ ಸಾಧನೆ ಮಾಡಲು ಸಾಧ್ಯವಾಯಿತು ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ ಛಬ್ಬಿ ಸೋಮನಿಂಗಪ್ಪ ನವರು ಹೆಮ್ಮೆಯಿಂದ ಹೇಳುತ್ತಾರೆ. ಇವರು ಯುವ ಉತ್ಸಾಹಿಗಳೂ ಆಗಿದ್ದು ಗ್ರಾಮ ಪಂಚಾಯತ್ ಆಡಳಿತಕ್ಕೆ ಚುರುಕು ಮುಟ್ಟಸಿ ಸರ್ಕಾರದ ಯೋಜನೆಗಳನ್ನ ಸಕಾಲದಲ್ಲಿ ಅನುಷ್ಠಾನಗೊಳಿಸಿ ಪಂಚಾಯತ್ ವ್ಯಾಪ್ತಿಯ ಪ್ರತಿ ಹಳ್ಳಿಗೂ ಯೋಜನೆಯ ಲಾಭವನ್ನು ದೊರಕುವಂತೆ ಮಾಡುತ್ತಿದ್ದಾರೆ.

2009-10 ನೇ ಸಾಲಿನವರೆಗೂ ಬೆಡಸಗಾಂವ ಗ್ರಾಮ ಪಂಚಾಯತಿಯು 1995-96 ರಲ್ಲಿ ನಿರ್ಮಿಸಲಾಗಿದ್ದ ಹೆಂಚಿನ ಛಾವಣಿಯ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ನಂತರ ಆ ಕಟ್ಟಡಕ್ಕೆ ಹೊಂದಿಕೊಂಡಂತೆ ಸಿಮೆಂಟ್ ಛಾವಣಿಯ ಕಟ್ಟಡ ನಿರ್ಮಿಸಿ ಈ ಕಟ್ಟಡವನ್ನು ಪಂಚಾಯತ ಕಾರ್ಯಾಲಯವನ್ನಾಗಿಸಿ ಮಾರ್ಪಡಿಸಲಾಗಿದೆ. ಕಳೆದ ಸಾಲಿನಲ್ಲಿ ಗ್ರಾಮ ಪಂಚಾಯತ್ ಕಾರ್ಯಾಲಯದ



ಒಳಗಿನ ವಿನ್ಯಾಸಕ್ಕೆ ಒತ್ತು ನೀಡಿ ಅಭಿವೃದ್ಧಿ ಅಧಿಕಾರಿಗಳ ಕೊಠಡಿ ಹಾಗೂ ಸಿಬ್ಬಂದಿಗಳ ಕೌಂಟರಗಳನ್ನು ನಿರ್ಮಿಸಲಾಗಿದೆ. ಹಳೆಯ ಕಟ್ಟಡದಲ್ಲಿ ಸಭಾಂಗಣವನ್ನು ನಿರ್ಮಿಸಿ ಅದಕ್ಕೆ ಸ್ವಾಮಿ ವಿವೇಕಾನಂದ ಸಭಾಂಗಣ ಎಂದು ನಾಮಕರಣ ಮಾಡಲಾಗಿದೆ. ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಿಗೆ ಪ್ರತ್ಯೇಕ ಕೊಠಡಿಗಳನ್ನು ನಿರ್ಮಿಸ ಲಾಗಿದೆ. ಸಮಿತಿಯ ಸಭೆಗಳನ್ನು ನಡೆಸಲು ಸುಂದರವಾದ ಸಭಾಂಗಣ ಹಾಗೂ ಅದಕ್ಕ ನವೀನ ಮಾದರಿಯ ಆಸನಗಳನ್ನು ಅಳವಡಿಸ ಲಾಗಿದ್ದು, ಸಭಾಂಗಣ ಹಾಗೂ ಕಾರ್ಯಾಲಯದ ಗೋಡೆಗಳಿಗೆ ದಾನಿಗಳು ನೀಡಿದ ಸುಮಾರು 60 ರಾಷ್ಟ್ರ ನಾಯಕರ ಫೋಟೋಗಳನ್ನು ಅಳವಡಿಸಲಾಗಿದ್ದು ಇದು ಸಭಾಂಗಣ ಹಾಗೂ ಕಾರ್ಯಾಲಯದ ಮೆರಗು ಹೆಚ್ಚಿಸುವಂತೆ ಮಾಡಿದೆ. ಸಭಾಂಗಣ ಪ್ರವೇಶಿಸಿ ಸುತ್ತಲೂ ಕಣ್ಣು ಹಾಯಿಸಿದರೆ ಯಾರೇ ಆಗಲಿ ಮೂಕ ವಿಸ್ಮಿತರಾಗದೇ ಇರಲಾರರು.

ಗ್ರಾಮ ಪಂಚಾಯತ್ ಕಛೇರಿಯಲ್ಲಿ ಸಿಬ್ಬಂದಿಗಳಿಗೆ ಸಮವಸ್ತ್ರ ನೀಡಲಾಗಿದ್ದು, ಕೆಲಸ ನಿರ್ವಹಿಸುವ ಸಿಬ್ಬಂದಿಗಳು ಸಮವಸ್ತ್ರ ಧರಿಸಿ ಕೆಲಸಕ್ಕೆ ಹಾಜರಾಗುತ್ತಾರೆ. ಕಛೇರಿ ಕೆಲಸದ ಜೊತೆಗೆ ಸಿಬ್ಬಂದಿಗಳ ಕಾಳಜಿ ಕಾರ್ಯಾಲಯದ ಎದುರಿಗೆ ಉದ್ಯಾನವನ ನಿರ್ಮಿಸುವ ಕಡೆಗೂ ಇದ್ದು ಇದರಿಂದಾಗಿ




ಗ್ರಾಮ ಪಂಚಾಯತ್ ಬೆಡಸಗಾಂವ ಕಛೇರಿಯ ಮುಂಬಾಗ

ಕಾರ್ಯಾಲಯದ ಎದುರು ಪುಟ್ಟ ಉದ್ಯಾನವನ ನಿರ್ಮಾಣವಾಗಿದ್ದು ಆವರಣ ದಾಟಿ ಕಾರ್ಯಾಲಯ ಪ್ರವೇಶಿಸುವವರನ್ನು ಕೈ ಬೀಸಿ ಕರೆಯುತ್ತಿದೆ. "ಅಂಗಳದಲ್ಲಿ ನೋಡು ನಡುಮನೆ ಸಿರಿಯ" ಎಂಬ ಗಾದೆ ಮಾತಿಗೆ ಕನ್ನಡಿ ಹಿಡಿದಂತಿದೆ.

ಗ್ರಾಮ ಪಂಚಾಯತ್ ಕಾರ್ಯಾಲಯದ ಆಂತರಿಕ ಅಲಂಕಾರ, ಸಭಾಂಗಣ, ಉದ್ಯಾನವನ, ಸಿಬ್ಬಂದಿಗಳ ಸಮವಸ್ತ್ರ, ಗಣಕಯಂತ್ರಗಳ ಅಳವಡಿಕೆ, ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸರ್ಕಾರದ ಯೋಜನೆಗಳ ಅನುಷ್ಠಾನದಿಂದ ರಸ್ತೆ, ಚರಂಡಿ, ಪಕ್ಕಾ ಗಟಾರ, ಮತ್ತು ಕೆರೆ ಬಾವಿ ಮುಂತಾದ ಮೂಲಭೂತ ಸೌಲಭ್ಯಗಳನ್ನು ಕೈಗೊಳ್ಳಲಾಗಿರುವುದು ಗ್ರಾಮ ಪಂಚಾಯತಿಯ ಮಹತ್ವದ ಸಾಧನೆಯಾಗಿದೆ. ಇವೆಲ್ಲವೂ ಇತ್ತೀಚಿನ ಒಂದೆರಡು ವರ್ಷಗಳಲ್ಲೇ ಆಗಿದ್ದಾದರೂ ಈಗಿನ ಹಾಗೂ ಹಿಂದಿನ ಎಲ್ಲಾ ಆಡಳಿತ ಮಂಡಳಿಗಳಿಗೂ ಅಧ್ಯಕ್ಷರು, ಉಪಾಧ್ಯಕ್ಷರುಗಳಿಗೂ ಇದರ ಶ್ರೇಯಸ್ಸು ಸಲ್ಲುತ್ತದೆ. ಈ ಪಂಚಾಯತ್ ವ್ಯಾಪ್ತಿಯ ಪ್ರತಿಯೊಬ್ಬರೂ ಗ್ರಾಮ ಪಂಚಾಯತಿಯ ಸಾಧನೆ ಬಗ್ಗೆ ಹಾಗೂ ಪಡೆದಿರುವ ಪ್ರಶಸ್ತಿಯ ಬಗ್ಗೆ ಹೆಮ್ಮೆ ಪಡಬೇಕು. ಪ್ರಜಾ ಪ್ರಭುತ್ವದಲ್ಲಿರುವ ಅವಕಾಶಗಳನ್ನು ಬಳಸಿಕೊಂಡು ನ್ಯಾಯ ಮಾರ್ಗದಲ್ಲಿ ಪಂಚಾಯತಿಯು ಆಡಳಿತ ಸೂತ್ರ ಹಿಡಿದು ಇನ್ನು ಹೆಚ್ಚಿನದನ್ನು ಸಾಧಿಸಲು ಮುಂದಾಗಬೇಕೇ ವಿನಃ ಸಾಧನೆಯ ಬಗ್ಗೆ ಕರುಬಬಾರದು. ತಾಲ್ಲೂಕಿನಲ್ಲಿ ಮಾದರಿ ಗ್ರಾಮ ಪಂಚಾಯತ್ ಆಗಿ ಹೊರ ಹೊಮ್ಮಿರುವ ಈ ಗ್ರಾಮ ಪಂಚಾಯತಿಯ ಹೆಸರು ಮತ್ತು ಕೀರ್ತಿಯನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯಲು ಪ್ರಯತ್ನಿಸಬೇಕು. ನೂರಕ್ಕೆ ನೂರು ಅಭಿವೃದ್ಧಿ ಸಾಧಿಸಬೇಕು. ಇಂಥಹ ಸಾಧನೆಗಳಿಂದ ಬೆಡಸಗಾಂವ ಗ್ರಾಮ ಪಂಚಾಯತಿಯ ಹೆಸರು ಮತ್ತು ಸ್ಥಾನ ರಾಷ್ಟ್ರ ಮಟ್ಟದಲ್ಲಿ ಚಿರಸ್ಥಾಯಿಯಾಗಲಿ ಎಂಬುದೇ ಎಲ್ಲರ ಹಾರೈಕೆಯಾಗಿದೆ.

ಯಶೋಗಾಥೆ

# ಬೆಳ್ಳಾರೆ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಶ್ರಮದಾನ ಕಾರ್ಯಕ್ರಮ

* ರೋಹಿತ್ ಎ.ಆರ್.

ಸ್ವಚ್ಛತೆಯಿಂದ ಅಭಿವೃದ್ಧಿಯೆಡೆಗೆ ಎಂಬ ಧ್ಯೇಯ ವಾಕ್ಯದೊಂದಿಗೆ ಕರಾವಳಿ ನಾಡಿನ ಜನರ ಬದುಕನ್ನು ಸ್ವಚ್ಛ ನಗರದೆಡೆಗೆ ಕೊಂಡೊಯ್ಯುವ ಭದ್ರ ಸಂಕಲ್ಪದೊಂದಿಗೆ ದ.ಕ. ಜಿಲ್ಲೆಯ ಸುಳ್ಯ ತಾಲೂಕಿನ ಪವಿತ್ರಕ್ಷೇತ್ರ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಸುಳ್ಯ-ಸುಬ್ರಹ್ಮಣ್ಯದಿಂದ ಹಾದುಹೋಗುವ ರಾಜ್ಯ ಹೆದ್ದಾರಿಯಿಂದ ಸುಮಾರು 15ಕಿ.ಮೀ ದೂರದಲ್ಲಿ ಬೆಳ್ಳಾರೆ ಗ್ರಾಮ, ಗ್ರಾಮದಲ್ಲಿ ಸ್ವಚ್ಛತೆಯಲ್ಲಿ ಸುಸ್ಥಿರತೆಯನ್ನು ಕಾಯ್ದುಕೊಳ್ಳುವ ದೃಢ ಸಂಕಲ್ಪದೊಂದಿಗೆ ಗ್ರಾಮ ಪಂಚಾಯತ್‌ನ ಆಡಳಿತ ಮಂಡಳಿ, ಮತ್ತು ಅಧಿಕಾರಿವರ್ಗ, ಗ್ರಾಮ ಪಂಚಾಯತ್ ವ್ಯಾಪ್ತಿಗೆ ಒಳಪಟ್ಟ ಎಲ್ಲಾ ವರ್ತಕ ಸಂಘ, ಸಾರ್ವಜನಿಕರು ಮತ್ತು ರೋಟರಿಕ್ಲಬ್, ಜೇಸಿಐ, ಹಾಗೂ ರಾಷ್ಟ್ರೀಯ ಸೇವಾ ಯೋಜನೆ,ಡಾ.ಶಿವರಾಮಕಾರಂತ ಪ್ರಥಮದರ್ಜೆ ಕಾಲೇಜು ಇದರ ಸಹಯೋಗದೊಂದಿಗೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಪ್ರತೀ ವಾರ ಸ್ವಚ್ಛತಾ ಕಾರ್ಯಕ್ರಮ ಶ್ರಮದಾನದ ಮೂಲಕ ಸುಸ್ಥಿರತೆಯನ್ನು ಕಾಯ್ದುಕೊಳ್ಳುವಲ್ಲಿ ದಿ. 15.8.2014ರಂದು ಕಾರ್ಯಕ್ರಮವನ್ನು



ಉದ್ಘಾಟಿಸುವ ಮೂಲಕ ಚಾಲನೆಯನ್ನು ನೀಡಲಾಯಿತು, ಪ್ರತೀವಾರ ಒಂದೊಂದು ಸಂಘಸಂಸ್ಥೆಗಳು ಶ್ರಮದಾನದ ಮೂಲಕ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಾ ಬಂದಿದ್ದು , ಅದರಲ್ಲೂ ವಿಶೇಷತೆಯನ್ನು ಪ್ರದರ್ಶಿಸಿರುವ ಗ್ರಾಮ ಪಂಚಾಯತ್ ಸಿಬ್ಬಂದಿವರ್ಗ ತಮ್ಮ ವಾರದ ರಜಾ ದಿನದಲ್ಲೂ ಎಲ್ಲಾ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದು, ಹನಿಗೂಡಿದರೆ ಹಳ್ಳ, ಗ್ರಾಮ ಅಭಿವೃದ್ಧಿಯಾದರೆ ದೇಶ

**ಘನ ತ್ಯಾಜ್ಯ ವಿಲೇವಾರಿ ಘವಕದಲ್ಲಿ ಶ್ರಮದಾನ ಮಾಡುವ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕು ಬೆಳ್ಳಾರೆ ಗ್ರಾಮ ಪಂಚಾಯತಿಯು ಇತರೆ ಗ್ರಾಮ ಪಂಚಾಯತಿಗಳಿಗೆ ಮಾದರಿಯಾಗಿದೆ**

ಜಿಲ್ಲಾ ಸಮಾಲೋಚಕರು, ದ.ಕ.ಜಿ.ಪಂ. ಮಂಗಳೂರು





ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ ಚೆನ್ನಪ್ಪಗೌಡ ಕಜೆಮೂಲೆ ಸ್ವಾಗತಿಸಿ,
ಗ್ರಾ.ಪಂ ಲೆಕ್ಕಸಹಾಯಕಿ ಶ್ರೀಮತಿ ಸುನಂದ ರೈ ವಂದಿಸಿದರು.

ಅಭಿವೃದ್ದಿ ಎನ್ನುವ ನಾಣ್ನುಡಿಯಂತೆ, ಶ್ರಮದಾನದ, 3ನೇ ವಾರ ದಿ.24.8.2014ನೇ ಆದಿತ್ಯವಾರದಂದು ದ.ಕ.ಜಿಲ್ಲಾ ಪಂಚಾಯತ್ ಮಂಗಳೂರು, ಗ್ರಾಮಪಂಚಾಯತ್ ಬೆಳ್ಳಾರೆ, ರಾಷ್ಟ್ರೀಯ ಸೇವಾ ಯೋಜನೆ, ಡಾ.ಶಿವರಾಮಕಾರಂತ ಪ್ರಥಮದರ್ಜೆ ಕಾಲೇಜು ಬೆಳ್ಳಾರೆ ಮತ್ತು ಕಾಮಧೇನು ಮಲ್ಟಿಪರ್ಪಸ್ ಚಾರಿಟೇಬಲ್ ಟ್ರಸ್ಟ್ ಬೆಳ್ಳಾರೆ.(ರಿ). ಇದರ ವತಿಯಿಂದ ಬೆಳ್ಳಾರೆ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಸಸಿ ನೆಡುವ ಮತ್ತು ಹೂತೋಟ ನಿರ್ಮಾಣ ಮಾಡುವ ಕಾರ್ಯಕ್ರಮ ಶ್ರಮದಾನದ ಮೂಲಕ ನಡೆಸಲಾಯಿತು. ಕಾರ್ಯಕ್ರಮಕ್ಕೆ ತಾಲ್ಲೂಕು ಪಂಚಾಯತ್ ಸದಸ್ಯರಾದ ಅನಿಲ್ ರೈ ಚಾವಡಿ ಬಾಗಿಲು ಮತ್ತು ಉಪಾದ್ಯಕ್ಷರಾದ ಶ್ರೀಮತಿ ಬೀಬಿ ಯವರು ಚಾಲನೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾ.ಪಂ ಅಧ್ಯಕ್ಷರಾದ ಶ್ರೀ ವಿಠಲ್ ದಾಸ್ ವಹಿಸಿದರು. ಕಾರ್ಯಕ್ರಮದಲ್ಲಿ ಪಂಚಾಯತ್ ಸದಸ್ಯರಾದ ಆನಂದ ಬೆಳ್ಳಾರೆ, ಒವಿನ್ ಪಿಂಟೊ, ಕಾಮಧೇನು ಮಲ್ಟಿಪರ್ಪಸ್ ಚಾರಿಟೇಬಲ್ ಟ್ರಸ್ಟ್ ಬೆಳ್ಳಾರೆ.(ರಿ). ಇದರ ಅಧ್ಯಕ್ಷರಾದ ಶ್ರೀ ಮಾಧವಗೌಡ. ದ.ಕ.ಜಿ.ಪಂ. ನ ಜಿಲ್ಲಾ ಸಮಾಲೋಚಕರು ರೋಹಿತ್ ಎ.ಆರ್. ಗ್ರಾ.ಪಂ ಸಿಬ್ಬಂದಿಗಳಾದ ಶ್ರೀ ನಾರಾಯಣ, ರವೀಂದ್ರ ರೈ, ನಾರಾಯಣ ಪಾಟಾಳಿ, ಮತ್ತು ಶ್ರೀ ರವಿ ಕುಮಾರ್ ಹಾಗೂ ರಾಷ್ಟ್ರೀಯ ಸೇವಾ ಯೋಜನೆ, ಡಾ.ಶಿವರಾಮಕಾರಂತ ಪ್ರಥಮದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.





ಕಾರ್ಯಕ್ರಮವನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ ಚೆನ್ನಪ್ಪಗೌಡ ಕಜೆಮೂಲೆ ಮತ್ತು ಜಿ.ಪಂ. ನ. ಶ್ರೀರೋಹಿತ್ ಎ.ಆರ್ ಸಂಘಟಿಸಿದರು.
ಶ್ರಮದಾನದ ಸಂಪೂರ್ಣ ಉಪಹಾರ ಮತ್ತು ಊಟದ ವೆಚ್ಚವನ್ನು ಗ್ರಾಮಪಂಚಾಯತ್ ಉಪಾಧ್ಯಕ್ಷೆ ಶ್ರೀ ಮತಿ ಬೀಬಿ ಅಬ್ದುಲ್‌ಕುಂಞ ಭರಿಸಿಕೊಟ್ಟರು.

ಕ.ವಿ.ಯ.(ಕ್ವ) ಪ್ರಶ್ನೆಗಳು...

# ಇಂಧನ/ವಿದ್ಯುತ್ ಉಳಿತಾಯ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಲ್ಲವೇ?

ಪ್ರತಿನಿತ್ಯ ನನ್ನಷ್ಟಕ್ಕೇ ನಡೆದುಕೊಂಡು ಹೋಗುವಾಗ ಮಾರ್ಗಮಧ್ಯದಲ್ಲಿ ಸಿಗುವ ಶಾಲಾ ಕಾಲೇಜುಗಳಿರಬಹುದು, ವಿಶ್ವವಿದ್ಯಾಲಯವಿರಬಹುದು, ಸರ್ಕಾರಿ ಕಚೇರಿಗಳಿರಬಹುದು, ಕಾರ್ಪೋರೇಟ್ ವಲಯದ ಸಂಸ್ಥೆಗಳಿರಬಹುದು, ಖಾಸಗಿ ಮನೆಗಳಿರಬಹುದು..... ಎಲ್ಲಾದರೂ ದೃಷ್ಟಿಹಾಯಿಸಿದಾಗ ಇಂಧನದ ಅಪವ್ಯಯವಾಗುವದನ್ನು ಕಂಡು ಮನಸ್ಸು ಮರುಗುತ್ತದೆ. ನನ್ನ ಭಾರತದ ಜನ ಹೀಗೇಕೆ ಜಡವಾಗುತ್ತಿದ್ದಾರೆ. ಇವರಿಗೆ ಇಂಧನದ ಮೌಲ್ಯದ ಅರಿವಿಲ್ಲವೇ? ನೀರಿನ ಬಳಕೆಯ ಬಗ್ಗೆ ಜಾಗೃತಿಯಿಲ್ಲವೇ? ವಿದ್ಯುತ್ ಇವರಿಗೆ ಪುಕ್ಕಟೆಯಾಗಿ ಸಿಗುತ್ತದೆಯೇ? ಮರಗಳನ್ನು ಕಡಿದು ನಾಶಮಾಡುವ ಇವರು ವೃಕ್ಷಸಂಕುಲವನ್ನು ಮರಳಿ ಸೃಷ್ಟಿಸುತ್ತಾರಾ? ಕುಡಿಯಲು ಮಜ್ಜಿಗೆ ಸಿಗದಿದ್ದರೂ ಬೈಕ್‌ನ ಪೆಟ್ರೋಲ್‌ಗೇನೂ ಕೊರತೆಯಿಲ್ಲವಲ್ಲ. ಹಾಗಾದರೆ ನನ್ನ ದೇಶಕ್ಕೆ ಬಡರಾಷ್ಟ್ರವೆನ್ನುವ ಹಣೆಪಟ್ಟಿಯೇಕೆ? ಎನ್ನುವ ಪ್ರಶ್ನೆಗಳು ಮೂಡಲಾರಂಭಿಸುತ್ತವೆ.

ವಸತಿ ಸಹಿತ ಶಾಲೆಗಳು ಮತ್ತು ಹಾಸ್ಟೇಲ್‌ಗಳು ಶಕ್ತಿ ಅಪವ್ಯಯದ ಕೇಂದ್ರಗಳಾಗುತ್ತಿವೆ, ಇಲ್ಲಿ ಖಾಸಗಿ ಮತ್ತು ಸರ್ಕಾರಿ ಎನ್ನುವ ವಿಷಯವು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಿಲ್ಲ. ಶಾಲೆ ಎಂದ ಬಳಿಕ ಅಲ್ಲಲ್ಲಿ ಶಿಕ್ಷಕರು, ವರ್ಗ ಅಧ್ಯಾಪಕರು ಇದ್ದೇ ಇರುತ್ತಾರೆ, ಒಂದು ಕೋಣೆಯಲ್ಲಿ ನಾಲ್ಕಾರು ಫ್ಯಾನ್, ಟ್ಯೂಬ್‌ಲೈಟ್, ಸ್ಮಾರ್ಟ್‌ಕ್ಲಾಸ್ ಪ್ರೊಜೆಕ್ಟರ್ ಇತ್ಯಾದಿ ವಿದ್ಯುತ್ ಬಳಕೆಯ ಸಾಮಗ್ರಿಗಳು ಇದ್ದೇ ಇರುತ್ತವೆ. ಬಳಸಿದ ಬಳಿಕ ಅವುಗಳ ಯಥಾಸ್ಥಿತಿಯನ್ನು ನಿಭಾಯಿಸುವಲ್ಲಿ ನಾವು ಮರೆಯುತ್ತಿದ್ದೇವೆ.

ಇನ್ನು ಸರ್ಕಾರಿ ಕಚೇರಿಗಳಲ್ಲಿ ಉನ್ನತ ದರ್ಜೆಯ ಅಧಿಕಾರಿ ತಮ್ಮ ಕ್ಯಾಬಿನ್‌ಗೆ ಬಂಧು ಕೂರುವದು ದಿನಕ್ಕೆ ಅರ್ಧ ಗಂಟೆಯೋ, ಒಂದು ಗಂಟೆಯೋ ಇರಬಹುದು. ಆದರೆ ದಿನವಿಡೀ ಅವರ ಕ್ಯಾಬಿನ್‌ನಲ್ಲಿ ಎ.ಸಿ.(ಹವಾನಿಯಂತ್ರಿತ ವ್ಯವಸ್ಥೆ), ವಿದ್ಯುದ್ದೀಪ ಬೆಳಗುತ್ತಿರುತ್ತದೆ.



**ಈ ನಿಟ್ಟಿನಲ್ಲಿ ಆತ್ಮವಲೋಕನಕ್ಕಾಗಿ ಕೆಲವು ಪ್ರಶ್ನೆಗಳು**

- ಮಕ್ಕಳು ಚಿಕ್ಕವರು, ಬುದ್ಧಿ ಬಲಿತಿಲ್ಲವೆನ್ನುವ ವಿಷಯ ಒಂದೆಡೆಯಾದರೆ : ಮಕ್ಕಳಿಗೆ ಪಾಠ ಮಾಡುವ ಶಿಕ್ಷಕರು ಇಂಧನ ಉಳಿತಾಯದ ಮಾರ್ಗವನ್ನು ಮಕ್ಕಳಿಗೆ ಹೇಳಬಹುದಲ್ಲವೇ?
- ಒಮ್ಮೆ ಮಕ್ಕಳಿಗೆ ತಿಳಿಸಿದರೆ, ಅದನ್ನು ಅವರು ಮುಂದೆ ಆಚರಣೆಗೆ ತರುವಾಗ ಶಿಕ್ಷಕರು ಯಾಕೆ ಮಕ್ಕಳಿಗೆ ಆದರ್ಶರಾಗಬಾರದು?
- ವಿದ್ಯಾರ್ಥಿನಾಯಕರಿಗೆ ಈ ಸ್ವಿಚ್‌ಗಳನ್ನು ಆರಿಸುವ ಜವಾಬ್ದಾರಿ ನೀಡಿದರೆ ಸಮಸ್ಯೆ ಬಗೆಹರಿದಂತಲ್ಲವೇ?
- ಶಿಕ್ಷಕರೇ ಯಾಕೆ ಸ್ವತಃ ವಿದ್ಯುತ್ ಉಳಿಸಲು ಮುಂದಾಗುತ್ತಿಲ್ಲ?
- ನಮ್ಮ ಚಿಕ್ಕ ನಿರ್ಲಕ್ಷ್ಯ, ಅದೆಷ್ಟೋ ಜನರಿಗೆ ಕತ್ತಲೆಯಲ್ಲೇ ಕಾಲ ಕಳೆಯುವ ಶಿಕ್ಷೆಗೆ ಗುರಿ ಮಾಡಿದಂತಲ್ಲವೇ?
- ಮಕ್ಕಳು ಹಾಸ್ಟೇಲ್ಲಿನಲ್ಲಿ ಇರುವಾಗ 24*7 ಎನ್ನುವಂತೆ ವಿದ್ಯುತ್ತಿನ ಬಳಕೆ ಮಾಡುವದು ಸರಿಯೇ?



**ಡಾ.ಅರವಿಂದ ಚಂದ್ರಕಾಂತ ಶ್ಯಾನಭಾಗ**
ಸದಸ್ಯರು, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ
ಅಂಚೆ : ಕೋಡಕಣಿ, ತಾಲೂಕು : ಕುಮಟಾ
ಜಿಲ್ಲೆ : ಕಾರವಾರ(ಉ.ಕ) ಪಿನ್ : 581440
ದೂರವಾಣಿ : 8880202206

# ಗ್ರಾಮ ಪಂಚಾಯತಿಗಳ ಜಿಲ್ಲಾವಾರು ಪಂಚತಂತ್ರ ಪ್ರಗತಿಯ ವರದಿ ದಿನಾಂಕ 31-12-2014ರಲ್ಲಿದ್ದಂತೆ

| ಜಿಲ್ಲೆಯ ಹೆಸರು | ಪಂಚಾಯತಿಗಳ ಸಂಖ್ಯೆ | 2011-12ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂಗಳು | 2012-13ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂಗಳು | 2013-14ನೇ ಸಾಲಿನಲ್ಲಿ ಬೇಡಿಕೆಯಂತೆ ಶೇ 60ಕ್ಕಿಂತ ಹೆಚ್ಚು ಆಸ್ತಿ ತೆರಿಗೆ ವಸೂಲಾತಿ ಮಾಡಿರುವ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ರಾಜ್ಯದ ಸರಾಸರಿಗಿಂತ ಶೇಕಡ 75ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ಪಡೆದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಶೇಕಡ 95 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ನಿಗದಿತ ಸಮಯದಲ್ಲಿ ವಿತರಿಸಿದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ, ಹಿಂದಿನ ಮಾಹೆಯಲ್ಲಿ ನಡೆಸಿದ ಸಾಮಾನ್ಯ ಸಭೆ ಹಾಗೂ ಅದರ ನಡವಳಿಯನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿರುವ ಶೇಕಡವಾರು ಗ್ರಾ.ಪಂ.ಗಳು | ಹಿಂದಿನ ದಿನದ ಹಾಜರಾತಿ ದಾಖಲಿಸಿದ ಶೇಕಡವಾರು ಗ್ರಾ.ಪಂ.ಗಳು | ಒಟ್ಟಾರೆ ಶೇಕಡ ವಾರು ಸಾಧನೆ | ಶ್ರೇಣಿ |
|---|---|---|---|---|---|---|---|---|---|---|
| ಉತ್ತರ ಕನ್ನಡ | 207 | 100 | 100 | 50 | 46 | 97 | 99 | 97 | 84 | 1 |
| ದಕ್ಷಿಣ ಕನ್ನಡ | 203 | 100 | 100 | 58 | 27 | 77 | 99 | 96 | 79 | 2 |
| ರಾಮನಗರ | 130 | 100 | 100 | 0 | 96 | 96 | 85 | 75 | 78 | 3 |
| ಬಾಗಲಕೋಟೆ | 161 | 100 | 100 | 4 | 71 | 98 | 98 | 79 | 78 | 4 |
| ಧಾರವಾಡ | 127 | 100 | 100 | 0 | 87 | 99 | 88 | 59 | 76 | 5 |
| ಮೈಸೂರು | 235 | 100 | 100 | 1 | 75 | 87 | 100 | 62 | 75 | 6 |
| ಉಡುಪಿ | 146 | 100 | 99 | 41 | 35 | 53 | 99 | 93 | 74 | 7 |
| ಗದಗ | 106 | 100 | 100 | 1 | 77 | 92 | 98 | 51 | 74 | 8 |
| ಹಾವೇರಿ | 208 | 100 | 100 | 0 | 69 | 79 | 97 | 62 | 72 | 9 |
| ದಾವಣಗೆರೆ | 230 | 100 | 100 | 3 | 74 | 96 | 93 | 43 | 72 | 10 |
| ಬೆಂಗಳೂರು (ಗ್ರಾ) | 98 | 100 | 100 | 0 | 63 | 51 | 93 | 93 | 71 | 11 |
| ಮಂಡ್ಯ | 232 | 100 | 100 | 0 | 68 | 96 | 66 | 68 | 71 | 12 |
| ಚಿಕ್ಕಬಳ್ಳಾಪುರ | 151 | 100 | 100 | 1 | 78 | 86 | 68 | 66 | 71 | 13 |
| ಹಾಸನ | 258 | 100 | 100 | 3 | 59 | 67 | 99 | 75 | 71 | 14 |
| ಶಿವಮೊಗ್ಗ | 260 | 100 | 100 | 6 | 41 | 85 | 99 | 67 | 71 | 15 |
| ಚಾಮರಾಜನಗರ | 120 | 100 | 100 | 0 | 53 | 80 | 70 | 95 | 71 | 16 |
| ಕೊಡಗು | 98 | 100 | 100 | 23 | 3 | 71 | 94 | 87 | 68 | 17 |
| ಚಿತ್ರದುರ್ಗ | 185 | 100 | 100 | 0 | 77 | 84 | 88 | 32 | 68 | 18 |
| ಕೋಲಾರ | 156 | 100 | 99 | 0 | 62 | 78 | 70 | 64 | 67 | 19 |
| ಬೆಂಗಳೂರು (ನ) | 86 | 100 | 98 | 9 | 58 | 25 | 97 | 84 | 67 | 20 |
| ಚಿಕ್ಕಮಗಳೂರು | 226 | 100 | 100 | 19 | 21 | 57 | 89 | 74 | 65 | 21 |
| ವಿಜಯಪುರ | 199 | 100 | 100 | 1 | 52 | 56 | 82 | 52 | 63 | 22 |
| ತುಮಕೂರು | 321 | 100 | 100 | 0 | 52 | 61 | 77 | 57 | 63 | 23 |
| ಕಲಬುರಗಿ | 220 | 100 | 100 | 0 | 55 | 55 | 70 | 30 | 58 | 24 |
| ಬೀದರ್ | 175 | 100 | 99 | 0 | 8 | 42 | 96 | 64 | 58 | 25 |
| ಬೆಳಗಾವಿ | 486 | 99 | 100 | 1 | 28 | 53 | 66 | 51 | 56 | 26 |
| ಬಳ್ಳಾರಿ | 189 | 100 | 100 | 2 | 16 | 58 | 81 | 32 | 55 | 27 |
| ಕೊಪ್ಪಳ | 134 | 100 | 100 | 2 | 25 | 67 | 56 | 34 | 54 | 28 |
| ರಾಯಚೂರು | 165 | 99 | 98 | 3 | 33 | 40 | 60 | 40 | 53 | 29 |
| ಯಾದಗಿರಿ | 117 | 100 | 100 | 0 | 0 | 39 | 94 | 10 | 49 | 30 |

# ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಜಿಲ್ಲಾವಾರು ಸಕಾಲ ಪ್ರಗತಿ ವರದಿ (ಡಿಸೆಂಬರ್ 2014)

| ಜಿಲ್ಲೆ | ತಿಂಗಳಲ್ಲಿ ಜಿಎಸ್‌ಸಿ ಸ್ವೀಕೃತಿ (ಸಂಖ್ಯೆ) A | ತಿಂಗಳಲ್ಲಿ ಜಿಎಸ್‌ಸಿ ವಿಲೇವಾರಿ B | ವಿಳಂಬವಾಗಿ ವಿಲೇವಾರಿ ಆಗಿರುವುದು (ಶೇಕಡವಾರು) C | ವಿಳಂಬ ವಿಲೇವಾರಿ ಆಧರಿಸಿ ಪಡೆದ ಶ್ರೇಣಿ D | ಒಂದು ಲಕ್ಷ ಜನಸಂಖ್ಯೆಗೆ ಸ್ವೀಕೃತಿಯಾದ ಜಿಎಸ್‌ಸಿಗಳು E | ಒಂದು ಲಕ್ಷ ಜನಸಂಖ್ಯೆಗೆ ಜಿಎಸ್‌ಸಿ ಸ್ವೀಕೃತಿ ಆಧರಿಸಿ ಪಡೆದ ಶ್ರೇಣಿ F | ಅಂತಿಮವಾಗಿ ಪಡೆದ ಶ್ರೇಣಿ [(ಅ)ಯ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 30 ರಷ್ಟು ಮತ್ತು (ಈ)ನ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 70 ರಷ್ಟು] G |
|---|---|---|---|---|---|---|---|
| ಕೋಲಾರ | 24299 | 24470 | 0.5 | 9 | 1619 | 1 | 1 |
| ಚಿಕ್ಕಬಳ್ಳಾಪುರ | 11707 | 11348 | 0 | 1 | 975 | 5 | 2 |
| ಗದಗ | 9834 | 9946 | 0.2 | 5 | 983 | 4 | 3 |
| ಬೆಂಗಳೂರು ಗ್ರಾಮಾಂತರ | 9731 | 9263 | 2.2 | 17 | 1081 | 3 | 4 |
| ಹಾವೇರಿ | 10175 | 10192 | 1.2 | 13 | 678 | 6 | 5 |
| ರಾಮನಗರ | 4307 | 3997 | 0.4 | 7 | 430 | 10 | 6 |
| ಚಿಕ್ಕಮಗಳೂರು | 17787 | 17835 | 9 | 27 | 1617 | 2 | 7 |
| ಮೈಸೂರು | 8302 | 8070 | 0 | 1 | 286 | 14 | 8 |
| ತುಮಕೂರು | 14439 | 14535 | 2.4 | 18 | 555 | 9 | 9 |
| ವಿಜಯಪುರ | 13483 | 14071 | 2.9 | 21 | 642 | 8 | 10 |
| ಚಿತ್ರದುರ್ಗ | 6822 | 7002 | 1.4 | 15 | 426 | 11 | 11 |
| ಹಾಸನ | 11320 | 12540 | 6.4 | 26 | 665 | 7 | 12 |
| ಚಾಮರಾಜನಗರ | 3690 | 3835 | 1.4 | 15 | 369 | 12 | 13 |
| ಉತ್ತರ ಕನ್ನಡ | 3387 | 3622 | 0 | 1 | 241 | 18 | 14 |
| ಬಾಗಲಕೋಟೆ | 4995 | 4494 | 0.5 | 9 | 277 | 16 | 15 |
| ಉಡುಪಿ | 2801 | 2749 | 0.4 | 7 | 254 | 17 | 16 |
| ಧಾರವಾಡ | 3153 | 3087 | 0 | 1 | 175 | 21 | 17 |
| ಶಿವಮೊಗ್ಗ | 6217 | 7016 | 4.6 | 23 | 365 | 13 | 18 |
| ಕೊಪ್ಪಳ | 3133 | 3235 | 1 | 12 | 241 | 18 | 19 |
| ಬೆಳಗಾವಿ | 13272 | 13349 | 2.9 | 21 | 282 | 15 | 20 |
| ದಕ್ಷಿಣ ಕನ್ನಡ | 2030 | 2163 | 0.3 | 6 | 101 | 24 | 21 |
| ಮಂಡ್ಯ | 2610 | 2579 | 0.8 | 11 | 145 | 22 | 22 |
| ದಾವಣಗೆರೆ | 2111 | 2144 | 2.4 | 18 | 111 | 23 | 23 |
| ರಾಯಚೂರು | 4104 | 9 | 27 | 212 | 20 | 24 | 21 |
| ಕೊಡುಗು | 277 | 257 | 1.2 | 13 | 55 | 27 | 25 |
| ಬಳ್ಳಾರಿ | 1430 | 1589 | 2.8 | 20 | 57 | 26 | 26 |
| ಬೀದರ್ | 1645 | 1829 | 5.7 | 25 | 96 | 25 | 27 |
| ಕಲಬುರಗಿ | 1289 | 1277 | 4.9 | 24 | 51 | 29 | 28 |
| ಬೆಂಗಳೂರು(ನ) | 5238 | 4703 | 9.5 | 29 | 55 | 27 | 29 |
| ಯಾದಗಿರಿ | 279 | 258 | 10.1 | 30 | 25 | 30 | 30 |

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದ 189 ಗ್ರಾಮೀಣ ವಿಧಾನ ಸಭಾ ಮತ ಕ್ಷೇತ್ರಗಳಲ್ಲಿ ತಲಾ 20 ಕಿ.ಮೀ. ನಂತೆ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ-3 ರಡಿ ಅಭಿವೃದ್ಧಿಪಡಿಸುವ ಕಾರ್ಯಕ್ರಮಕ್ಕೆ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:** ದಿನಾಂಕ:7-11-2014ರಂದು ಜರುಗಿದ ಸಚಿವ ಸಂಪುಟದ ನಿರ್ಣಯ ಪ್ರಕರಣ ಸಂಖ್ಯೆ:ಸಿ:461:2014

ರಾಜ್ಯದಲ್ಲಿ ಗ್ರಾಮೀಣ ರಸ್ತೆಗಳ ಒಟ್ಟು ಉದ್ದ 155545 ಕಿ.ಮೀ. ಇದ್ದು, ಈ ಪೈಕಿ 58183 ಕಿ.ಮೀ. ಡಾಂಬರು, 21494 ಕಿ.ಮೀ. ಜಲ್ಲಿ ಮತ್ತು 75868 ಕಿ.ಮೀ. ಉದ್ದದ ಗ್ರಾವೆಲ್/ಮಣ್ಣಿನ ಮೇಲ್ಮೈವುಳ್ಳ ರಸ್ತೆಗಳು ಇರುತ್ತವೆ. ಈ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಅಗತ್ಯವಿರುತ್ತದೆ.

ಈಗಾಗಲೇ 189 ಗ್ರಾಮೀಣ ವಿಧಾನ ಸಭಾ ಕ್ಷೇತ್ರಗಳಲ್ಲಿ ತಲಾ 50 ಕಿ.ಮೀ ನಂತೆ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿ 10,000 ಕಿ.ಮೀ. ಗ್ರಾಮೀಣ ರಸ್ತೆಗಳನ್ನು ಎರಡು ಹಂತದಲ್ಲಿ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರವು 2010-11ನೇ ಸಾಲಿನಲ್ಲಿ ಅನುಮೋದಿಸಿ, ಮೊದಲನೇ ಹಂತದಲ್ಲಿ ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರಕ್ಕೆ ತಲಾ 20 ಕಿ.ಮೀ.ನಂತೆ ಒಟ್ಟು 3714.65 ಕಿ.ಮೀ.ಗಳನ್ನು 2011-12ನೇ ಸಾಲಿನಲ್ಲಿ ರೂ.1245.97ಕೋಟಿಗಳಲ್ಲಿ ಕೈಗೊಂಡು, ಈ ಪೈಕಿ 3435.25 ಕಿ.ಮೀ.ಗಳನ್ನು ರಸ್ತೆಗಳನ್ನು ರೂ.1300.00ಕೋಟಿಗಳಲ್ಲಿ ಮಾರ್ಚ್-2014ರ ಅಂತ್ಯಕ್ಕೆ ಪೂರ್ಣಗೊಳಿಸಲಾಗಿದೆ. ಈ ಕಾರ್ಯಕ್ರಮದ ಎರಡನೇ ಹಂತದಲ್ಲಿ ಪ್ರತಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರಗಳಲ್ಲಿ ತಲಾ 30 ಕಿ.ಮೀ ನಂತೆ ಒಟ್ಟು 5728 ಕಿ.ಮೀ ಗ್ರಾಮೀಣ ರಸ್ತೆಯನ್ನು ರೂ.2413.86ಕೋಟಿ ಮೊತ್ತದಲ್ಲಿ ಅಭಿವೃದ್ಧಿಪಡಿಸಲು 2013-14ನೇ ಸಾಲಿನಲ್ಲಿ ಕೈಗೆತ್ತಿಕೊಂಡು ಮಾರ್ಚ್-2014ರ ಅಂತ್ಯಕ್ಕೆ 2269.84ಕಿ.ಮೀ ರಸ್ತೆಯನ್ನು ರೂ.928.75 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದ್ದು, ಉಳಿಕೆ 3458.28ಕಿ.ಮೀ ರಸ್ತೆಯನ್ನು ಡಿಸೆಂಬರ್-2014 ರ ಅಂತ್ಯದೊಳಗೆ ಪೂರ್ಣಗೊಳಿಸಲು ಕಾರ್ಯಕ್ರಮ ರೂಪಿಸಲಾಗಿದೆ.

ಈ ಕಾರ್ಯಕ್ರಮವನ್ನು ಮೂರನೇ ಹಂತದಲ್ಲಿ ಮುಂದುವರೆಸಲು 2014-15 ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ಪ್ರತಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರದಲ್ಲಿ 20ಕಿ.ಮೀ. ರಸ್ತೆ ಅಭಿವೃದ್ದಿಗೆ ಕ್ರಿಯಾ ಯೋಜನೆ ರೂಪಿಸಲಾಗುವುದು. ಇದರಲ್ಲಿ 6 ಕಿ.ಮೀ ರಸ್ತೆಯನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನರು ಹೆಚ್ಚು ವಾಸವಾಗಿರುವ ಗ್ರಾಮಗಳಿಗೆ ಒದಗಿಸಿ ಸಂಪರ್ಕ ಕಲ್ಪಿಸಲಾಗುವುದು". ಎಂದು ಘೋಷಿಸಲಾಗಿದೆ.

ಮೂರನೇ ಹಂತದ ಈ ಯೋಜನೆಯಲ್ಲಿ ಒಟ್ಟು 20 ಕಿಮೀಗಳ ಪೈಕಿ ಪರಿಶಿಷ್ಟ ಜಾತಿಯ ಕನಿಷ್ಠ ಶೇ.40 ಜನಸಂಖ್ಯೆ ಇರುವ ಜನವಸತಿ/ಗ್ರಾಮಗಳಿಗೆ 6 ಕಿ.ಮೀ ರಸ್ತೆಯನ್ನು ಅಭಿವೃದ್ಧಿಪಡಿಸಲು ಹಾಗೂ ಪರಿಶಿಷ್ಟ ಪಂಗಡದ ಕನಿಷ್ಠ ಶೇ.40 ಜನಸಂಖ್ಯೆ ಇರುವ ಜನವಸತಿ/ಗ್ರಾಮಗಳಿಗೆ 2 ಕಿ.ಮೀ ರಸ್ತೆ ಅಥವಾ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರು ವಾಸಿಸುವ ಗ್ರಾಮಗಳಿಗೆ ಸೇರಿ 8 ಕಿ.ಮೀ. ರಸ್ತೆಗಳನ್ನು DRRP (District Rural Road Plan) ನಲ್ಲಿರುವಂತೆ ಆದ್ಯತೆಗನುಸಾರ ಅಭಿವೃದ್ಧಿಪಡಿಸಲಾಗುವುದು. 2014-15ರ ಆಯವ್ಯಯ ಅಂದಾಜುಗಳಲ್ಲಿ ಗ್ರಾಮೀಣ ರಸ್ತೆಗಳ ಅನುದಾನದಲ್ಲಿ ಎಸ್‌ಸಿಪಿ ಗೆ ಶೇ.30 ಮತ್ತು ಟಿಎಸ್‌ಪಿಗೆ ಶೇ.10 ರಷ್ಟು

ನಿಗಧಿಗೊಳಿಸಿರುವುದರಿಂದ ಒಟ್ಟು 8 ಕಿ.ಮೀ. ರಸ್ತೆ ಮೀಸಲಿರಿಸಿದ್ದು, ಉಳಿದ 12 ಕಿ.ಮೀ ರಸ್ತೆಗಳನ್ನು ಸಮಗ್ರ ಉನ್ನತೀಕರಣ ಕ್ರೋಢಿಕೃತ ಆದ್ಯತಾ ಪಟ್ಟಿಯ (Comprehensive Upgradation cum Consolidation of Priority List) ಆಧಾರದ ಮೇಲೆ 189 ಗ್ರಾಮೀಣ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಆಯ್ಕೆ ಮಾಡಿ ಒಟ್ಟಾರೆ 3780 ಕಿ.ಮೀ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಯೋಜಿಸಿದ್ದು, ಪ್ರತಿ ಕಿ.ಮೀ.ರಸ್ತೆ ಅಭಿವೃದ್ಧಿಗೆ ರೂ.55.00ಲಕ್ಷದಂತೆ 3780 ಕಿ.ಮೀ. ರಸ್ತೆ ಅಭಿವೃದ್ಧಿಗೆ ರೂ.2079.00ಕೋಟಿಗೆ ಅಂದಾಜಿಸಲಾಗಿರುತ್ತದೆ.

ಈ ಯೋಜಿತ ಹಂತ–3ರ ಕಾರ್ಯಕ್ರಮದಡಿ ರಾಜ್ಯದ ಪ್ರತಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರು ಹೆಚ್ಚು ವಾಸಿಸುವ ಗ್ರಾಮಗಳ 8 ಕಿ.ಮೀ. ಒಳಗೊಂಡಂತೆ ಒಟ್ಟು 20 ಕಿ.ಮೀ. ನಂತೆ 3780 ಕಿ.ಮೀ. ರಸ್ತೆಗಳನ್ನು ಒಟ್ಟು ರೂ.2079.00ಕೋಟಿಗಳ ಅಂದಾಜು ಮೊತ್ತದಲ್ಲಿ ಅಭಿವೃದ್ಧಿಪಡಿಸುವ ಕ್ರಿಯಾ ಯೋಜನೆ ರೂಪಿಸಲು (ಆಕಖ ತಯಾರಿಸಲು) ಹಾಗೂ ಏಖಿಕಕ ಕಾಯಿದೆಯಡಿ ಟೆಂಡರ್ ಕರೆದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಹಾಗೂ ಆಯ್ಕೆ ಮಾಡುವ ರಸ್ತೆಗಳನ್ನು ಮತ್ತು ರಸ್ತೆಗಳ ಆಕಖಗಳನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ–II ರ ಮಾನದಂಡಗಳನ್ನು ಅನುಸರಿಸಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ಮುಖಾಂತರ ಅನುಷ್ಠಾನಗೊಳಿಸುವ ಸದರಿ ವಿಷಯಕ್ಕೆ ದಿನಾಂಕ:7–11–2014ರಂದು ನಡೆದ ಸಚಿವ ಸಂಪುಟವು ಅನುಮೋದನೆ ನೀಡಿರುತ್ತದೆ. ಅದರಂತೆ ಈ ಕಾರ್ಯಯೋಜನೆಯನ್ನು ಕೈಗೊಂಡು ಮುಂದಿನ ಕ್ರಮ ವಹಿಸಲು ಹಾಗೂ ಈ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರವು ತೀರ್ಮಾನಿಸಿರುತ್ತದೆ.

**ಆದ್ದರಿಂದ ಈ ಆದೇಶ.**

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:22:ಆರ್‌ಆರ್‌ಸಿ:2014, ದಿನಾಂಕ:18–11–2014.**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–3ರಡಿ ರಾಜ್ಯದ ಪ್ರತಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರು ಹೆಚ್ಚು ವಾಸಿಸುವ ಗ್ರಾಮಗಳಿಗೆ ಸಂಪರ್ಕ ಒದಗಿಸಲು 8 ಕಿ.ಮೀ. ಒಳಗೊಂಡಂತೆ ಒಟ್ಟು 20 ಕಿ.ಮೀ. ನಂತೆ 3780 ಕಿ.ಮೀ. ರಸ್ತೆಗಳನ್ನು ಒಟ್ಟು ರೂ.2079.00ಕೋಟಿಗಳ ಅಂದಾಜು ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಕ್ರಿಯಾ ಯೋಜನೆ ರೂಪಿಸಲು (ಆಕಖ ತಯಾರಿಸಲು) ಹಾಗೂ ಏಖಿಕಕ ಕಾಯಿದೆಯಡಿ ಟೆಂಡರ್ ಕರೆದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಹಾಗೂ ಆಯ್ಕೆ ಮಾಡುವ ರಸ್ತೆಗಳನ್ನು ಮತ್ತು ರಸ್ತೆಗಳ ಆಕಖ ಗಳನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ–IIರ ಮಾನದಂಡಗಳನ್ನು ಅನುಸರಿಸಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ಮುಖಾಂತರ ಕಾರ್ಯಕ್ರಮವನ್ನು ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಷ್ಠಾನಗೊಳಿಸುವಂತೆ ಆದೇಶಿಸಲು ಸರ್ಕಾರವು ಹರ್ಷಿಸುತ್ತದೆ.

**ಷರತ್ತುಗಳು:**

1. ಈ ಕಾರ್ಯಕ್ರಮದಡಿ ಪ್ರತಿ ಕಿ.ಮೀ.ರಸ್ತೆ ಅಭಿವೃದ್ಧಿಗೆ ಅಂದಾಜು ರೂ.55.00ಲಕ್ಷದಂತೆ 3780 ಕಿ.ಮೀ. ರಸ್ತೆ ಅಭಿವೃದ್ಧಿಗೆ ರೂ.2079.00ಕೋಟಿಗಳಲ್ಲಿ ಅಭಿವೃದ್ಧಿಪಡಿಸುವುದು.

2. ಈ ಯೋಜನೆಯ ಒಟ್ಟು 20 ಕಿಮೀಗಳ ಪೈಕಿ ಪರಿಶಿಷ್ಟ ಜಾತಿಯ ಕನಿಷ್ಠ ಶೇ.40 ಜನಸಂಖ್ಯೆ ಇರುವ ಜನವಸತಿ/ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ 6 ಕಿ.ಮೀ ರಸ್ತೆಯನ್ನು ಅಭಿವೃದ್ಧಿಪಡಿಸಲು ಹಾಗೂ

ಪರಿಶಿಷ್ಟ ಪಂಗಡದ ಕನಿಷ್ಠ ಶೇ.40 ಜನಸಂಖ್ಯೆ ಇರುವ ಜನವಸತಿ/ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ 2 ಕಿ.ಮೀ ರಸ್ತೆ ಅಥವಾ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರು ವಾಸಿಸುವ ಗ್ರಾಮಗಳಿಗೆ ಸೇರಿ ಸಂಪರ್ಕ ಕಲ್ಪಿಸುವ 8 ಕಿ.ಮೀ. ರಸ್ತೆಗಳನ್ನು DRRP (District Rural Road Plan) ನಲ್ಲಿರುವಂತೆ ಆದ್ಯತೆಗನುಸಾರ ಅಭಿವೃದ್ಧಿಪಡಿಸುವುದು. ಪ.ಜಾ/ಪ.ಪಂ.ದ ಕನಿಷ್ಠ ಶೇ.40 ಜನಸಂಖ್ಯೆ ಇರುವ ಜನವಸತಿಗಳು ಇಲ್ಲದ ವಿಧಾನ ಸಭಾ ಕ್ಷೇತ್ರಗಳಲ್ಲಿ ಅತಿ ಹೆಚ್ಚಿನ ಪ.ಜಾ/ಪ.ಪಂ.ದ ಜನಸಂಖ್ಯೆ ಇರುವ ಜನವಸತಿಗಳಿಗೆ ಸಂಪರ್ಕ ಕಲ್ಪಿಸುವುದು.

3. ಗ್ರಾಮೀಣ ರಸ್ತೆಗಳ ಅನುದಾನದಲ್ಲಿ ಎಸ್‌ಸಿಪಿ ಗೆ ಶೇ.30 ಮತ್ತು ಟಿಎಸ್‌ಪಿಗೆ ಶೇ.10 ರಷ್ಟು ನಿಗಧಿಗೊಳಿಸಿರುವುದರಿಂದ ಒಟ್ಟು 8 ಕಿ.ಮೀ. ರಸ್ತೆ ಮೀಸಲಿರಿಸಿದ್ದು, ಉಳಿದ 12 ಕಿ.ಮೀ ರಸ್ತೆಗಳನ್ನು ಸಮಗ್ರ ಉನ್ನತೀಕರಣ ಕ್ರೋಢಿಕೃತ ಆದ್ಯತಾ ಪಟ್ಟಿಯ (Comprehensive Upgradation cum Consolidation of Priority List) ಆಧಾರದ ಮೇಲೆ 189 ಗ್ರಾಮೀಣ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಆಯ್ಕೆ ಮಾಡಿ ಅಭಿವೃದ್ದಿ ಪಡಿಸುವುದು.

4. ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–3 ರಡಿ ಆಯ್ಕೆ ಮಾಡುವ ರಸ್ತೆಗಳನ್ನು ಮತ್ತು ರಸ್ತೆಗಳ ಆಕಖ ಗಳನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ–II ರ ಮಾನದಂಡಗಳನ್ನು ಅನುಸರಿಸಿಯೇ ಮಾಡತಕ್ಕದ್ದು.

5. ಈವರೆಗಿನ ಮೌಲ್ಯಮಾಪನದ ವರದಿಗಳಿಂದ ಕಲಿತ ಅನುಭವಗಳನ್ನು ಡಿಪಿಆರ್ ತಯಾರಿಕೆಯಲ್ಲಿ ತಪ್ಪದೆ ಅಳವಡಿಸತಕ್ಕದ್ದು.

6. ಈ ಯೋಜನೆಗೆ ಬೇಕಾಗುವ ಅನುದಾನವನ್ನು ಲೆ.ಶೀ. "Revenue Releases to GPs – Rural Roads" ಅಡಿಯಲ್ಲಿ ಭರಿಸುವುದು ಹಾಗೂ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಮುನ್ನ ಆಕಖ ಗಳನ್ನು ಯೋಜನಾ ಇಲಾಖೆಗೆ ಕಳುಹಿಸಿ ಸಹಮತಿ ಪಡೆಯತಕ್ಕದ್ದು.

7. ಆರ್ಥಿಕ ಇಲಾಖೆಯ ಅಭಿಪ್ರಾಯಗಳನ್ನು ಗಮನದಲ್ಲಿರಿಸಿ, ಅದರಂತೆ ರಸ್ತೆಗಳ ಆಯ್ಕೆ ಪ್ರಕ್ರಿಯೆಗಳು ಮುಕ್ತಾಯಗೊಂಡ ನಂತರ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಮಾನದಂಡಗಳಂತೆ ಆಯ್ಕೆಯಾದ ರಸ್ತೆಗಳ ಆಕಖ ಗಳನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಜೊತೆಗೆ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ನೋಡಲ್ ಏಜನ್ಸಿಯ ಅನುಮೋದನೆಯನ್ನೂ ಪಡೆದು ಅಂತಿಮವಾಗಿ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳತಕ್ಕದ್ದು.

8. ರಸ್ತೆಗಳ DPR ತಯಾರಿಸುವಾಗ, ನಿರ್ಮಾಣ ಮಾಡುವಾಗ, 5 ವರ್ಷಗಳ ನಿರ್ವಹಣೆ ಮಾಡುವಾಗ ಮತ್ತು ತದನಂತರ ಒಂದು ಸಲ ಮರು ಡಾಂಬರೀಕರಣ (Recarpeting) ಮಾಡುವಾಗ ಕಒಉಖಙ–2 ರ ಅನುಷ್ಠಾನದ ನಿಯಮಗಳನ್ನು (Norms) ಕಡ್ಡಾಯವಾಗಿ ಪಾಲಿಸುವುದು.

9. ಗುಣಮಟ್ಟ ಕಾಪಾಡುವ ಹಾಗೂ ಪಾರದರ್ಶಕತೆ ದೃಷ್ಟಿಯಿಂದ ಆಯ್ಕೆಗೊಂಡ ಗ್ರಾಮೀಣ ಮತಕ್ಷೇತ್ರದ ರಸ್ತೆ ಕಾಮಗಾರಿಗಳನ್ನು ಒಟ್ಟುಗೂಡಿಸಿ ರೂ.10.00 ರಿಂದ 15.00 ಕೋಟಿಗಳಿಗೆ ಕಾಮಗಾರಿಗಳ ಗುಂಪು ರಚಿಸಿ (Package tender) ಇ–ಟೆಂಡರ್ ಮುಖಾಂತರ ಗುತ್ತಿಗೆದಾರರನ್ನು ನೇಮಿಸಿ ಅನುಷ್ಠಾನಗೊಳಿಸುವುದು.

10. ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಅನುಮೋದನೆಗೊಂಡ ಕ್ರಿಯಾ ಯೋಜನೆಯಲ್ಲಿರುವ ಎಲ್ಲಾ ಯೋಜನೆಗಳ, ಎಲ್ಲಾ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿ ಹಣಪಾವತಿಯನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಿಂದ ಪಡೆಯಲಾದ ಪಾವತಿ ಆದೇಶವಿದ್ದಲ್ಲಿ ಮಾತ್ರ ಕಾಮಗಾರಿಗಳ ಬಿಲ್ಲುಗಳ ಪಾವತಿಯನ್ನು ಕಡ್ಡಾಯವಾಗಿ ಮಾಡುವಂತೆ ಹಾಗೂ ಸರ್ಕಾರದ ಸೂಚನೆಗಳನ್ನು ಕಟ್ಟು ನಿಟ್ಟಾಗಿ ಪಾಲಿಸುವಂತೆ ಈಗಾಗಲೇ ಸೂಚಿಸಲಾಗಿದೆ. ಅದರಂತೆ ಪ್ರಸ್ತುತ ಈ ಆದೇಶದಲ್ಲಿನ ಕಾರ್ಯಕ್ರಮದ ಕಾಮಗಾರಿಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವ ನಿಬಂಧನೆಗೊಳಪಡಿಸಿದೆ.

11. ಮೂಲ ಗುತ್ತಿಗೆದಾರರಿಂದಲೇ ಕಾಮಗಾರಿ ಪೂರ್ಣಗೊಂಡ ಮೇಲೆ 5 ವರ್ಷಗಳ ನಿರ್ವಹಣೆಗೆ ಒಳಪಡಿಸುವುದು.

12. 5 ವರ್ಷಗಳ ನಿರ್ವಹಣೆಯ ನಂತರ PMGSY-2 ರ ಮಾರ್ಗಸೂಚಿಯಲ್ಲಿನ ಮಾನದಂಡಗಳಂತೆ (Specifications ರಂತೆ) ಮೂಲ ಗುತ್ತಿಗೆದಾರರು ಮರು ಡಾಂಬರೀಕರಣ ಮಾಡಬೇಕು.

13. ಈ ಯೋಜನೆಯನ್ನು ಸ್ವತಂತ್ರ ಮೌಲ್ಯಮಾಪನಕ್ಕೆ ಒಳಪಡಿಸುವುದು.

14. ಗುಣಮಟ್ಟದ ರಸ್ತೆಗಳ ನಿರ್ಮಾಣಕ್ಕಾಗಿ PMGSY-2 ರಡಿ ಅಳವಡಿಸಿಕೊಂಡಿರುವ 3 ಹಂತದ ಗುಣಮಟ್ಟ ನಿಂತ್ರಣ ವ್ಯವಸ್ಥೆಯನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳುವುದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಕಂಡಿಕೆ ಸಂಖ್ಯೆ:ಯೋಇ/34/ಜಿಯೋವಿ/2014, ದಿನಾಂಕ:30–4–2014ರಲ್ಲಿ ನೀಡಿದ ಸಹಮತಿ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಕಂಡಿಕೆ ಸಂಖ್ಯೆ:ಆಇ/430/ವೆಚ್ಚ–6/2013, ದಿನಾಂಕ:26–6–2014ರ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಕರ್ನಾಟಕ ಸರ್ಕಾರ**

ನಂ.ಗ್ರಾಅಪ/567/ಗ್ರಾಪಂಕಾ/2014

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 23–12–2014

# ಸುತ್ತೋಲೆ

**ವಿಷಯ:** ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳಿಗೆ ಹೆಚ್ಚುವರಿ ಪ್ರಭಾರ ವ್ಯವಸ್ಥೆ ಮಾಡುವ ಬಗ್ಗೆ.

ರಾಜ್ಯದಲ್ಲಿನ ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳಿಗೆ ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್–2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ವೃಂದದ ನೌಕರರನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಭಾರ ವ್ಯವಸ್ಥೆಯಲ್ಲಿ ಇರಿಸಿರುವುದು, ಹಲವಾರು ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಯಲ್ಲಿ ಒಬ್ಬ ನೌಕರನಿಗೆ 3 ರಿಂದ 4 ಗ್ರಾಮ ಪಂಚಾಯತಿಗಳ ಪ್ರಭಾರ/ ಜವಾಬ್ದಾರಿ ನೀಡಿರುವುದು ಗ್ರಾಮ ಪಂಚಾಯತಿಗಳ ಆಡಳಿತದ ಹಿತದೃಷ್ಟಿಯಿಂದ ಸೂಕ್ತವಾಗದಿರುವುದಾಗಿ ಮಾನ್ಯ ಶಾಸಕರುಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಸರ್ಕಾರದ ಗಮನಕ್ಕೆ ತಂದಿರುತ್ತಾರೆ.

ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಕಟ್ಟು ನಿಟ್ಟಾಗಿ ಅನುಸರಿಸಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳಿಗೆ ಹೆಚ್ಚುವರಿ ಪ್ರಭಾರದಲ್ಲಿ ನೇಮಿಸಲು ಕ್ರಮ ವಹಿಸಲು ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಈ ಮೂಲಕ ಸೂಚಿಸಿದೆ.

1. ಗ್ರೇಡ್–1 ವೃಂದದ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳನ್ನು ಅವರು ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಯ ಜೊತೆಗೆ ಅದೇ ಗ್ರಾಮ ಪಂಚಾಯಿತಿಯಲ್ಲಿ ಖಾಲಿ ಇರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಹೆಚ್ಚುವರಿ ಪ್ರಭಾರದಲ್ಲಿ ಇಡತಕ್ಕದ್ದು.
2. ಗ್ರೇಡ್–2 ಗ್ರಾಮ ಪಂಚಾಯಿತಿಗಳಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆ ಖಾಲಿ ಇದ್ದಲ್ಲಿ ಅಂತಹ ಹುದ್ದೆಗೆ ಅದೇ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೇಡ್–2 ಗ್ರಾಮ ಪಂಚಾಯಿತಿ ಕಾರ್ಯದರ್ಶಿರವರನ್ನೇ ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಹೆಚ್ಚುವರಿ ಪ್ರಭಾರದಲ್ಲಿರಿಸತಕ್ಕದ್ದು.
3. ಗ್ರಾಮ ಪಂಚಾಯಿತಿಗಳಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆ ಹಾಗೂ ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್–2 ಎರಡೂ ಹುದ್ದೆಗಳು ಖಾಲಿ ಇದ್ದಲ್ಲಿ ಅಂತಹ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದ್ವಿತೀಯ ದರ್ಜೆ ಲೆಕ್ಕ ಸಹಾಯಕರನ್ನೇ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿರಿಸತಕ್ಕದ್ದು.
4. ಒಬ್ಬ ನೌಕರನನ್ನು ಅವರು ಕರ್ತವ್ಯ ನಿರ್ವಹಿಸುವ ಗ್ರಾಮ ಪಂಚಾಯಿತಿಗೆ ಮಾತ್ರ ಹೆಚ್ಚುವರಿ ಪ್ರಭಾರದಲ್ಲಿರಿಸತಕ್ಕದ್ದು.

ಈ ವ್ಯವಸ್ಥೆಯು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವೃಂದದ ಖಾಲಿ ಹುದ್ದೆಗಳು ನೇರ ನೇಮಕಾತಿ/ಬಡ್ತಿ ಮೂಲಕ ಭರ್ತಿಯಾಗುವವರೆಗೆ ಮಾತ್ರ ಅನ್ವಯಿಸುತ್ತದೆ. ಮೇಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ತಿಳಿಸಿದೆ.

**(ಕೆ. ಯಾಲಕ್ಕಿಗೌಡ)**
ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.